BUDGET ESTIMATES FOR 1967-68—DEMANDS FOR GRANTS

Demand No. 18—(29) Medical and (30) Public Health.

Debate continued.

Mr. SPEAKER.—We will now begin the debate. May I know how much time the hon'ble Minister requires to give reply ?

Sri K. PUTTASWAMY.—I require about 1¼ hour.

Mr. SPEAKER.—I think if he begins his reply at 4.30 P.M. it will be all right. Now I call upon Sri A. Muniappa to speak.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಮುಂದೆ ಇರತಕ್ಕಂಥ 11,36,91,000 ರೂಪಾಯಿಗಳ ಬೇಡಿಕೆಯನ್ನು ಸ್ವಾಗತಿಸುತ್ತಾ ನಾನು ಒಂದೆರಡು ಮಾತುಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಅಜ್ಞೆ ಮಾಡುತ್ತೇನೆ. ದೇಶದಲ್ಲಿ ಇಷ್ಟು ಹಣವನ್ನು ಸರ್ಕಾರದವರು ಯಾವ ಒಂದು ಉದ್ದೇಶದಿಂದ ಪ್ರಜಾ ಸರ್ಕಾರದಲ್ಲಿ ಖರ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಈ ಮಾನ್ಯ ಸಭೆಯ ಮಂಜೂರಾತಿಯನ್ನು ಪಡೆಯುತ್ತಾರೆಯೋ ಅಷ್ಟು ಹಣ ಸರ್ಕಾರದಿಂದ ಪ್ರತಿಯೊಂದು ಜಿಲ್ಲೆಗೂ, ಪ್ರತಿಯೊಂದು ತಾಲ್ಲೂಕಿಗೂ ಪ್ರತಿಯೊಂದು ಹಳ್ಳಿಗೂ ಹೋದ ತಕ್ಷಣ ಇದರಲ್ಲಿ ಅಧಿಕಾರಿಗಳು ಸರಿಯಾಗಿ ಹಣವನ್ನು ಉಪಯೋಗಿಸದೇ, ಈ ಒಂದು ಸರ್ಕಾರದ ಉದ್ದೇಶವನ್ನು ಸರಿಯಾಗಿ ಪಾಲನೆ ಮಾಡದೇ ಎದುರು ಪಕ್ಷದವರು ಮತ್ತು ಎಲ್ಲಾ ಸದಸ್ಯರೂ ಟೀಕೆ ಮಾಡುವುದಕ್ಕೆ ಅವಕಾಶಗಳನ್ನು ಮಾಡುತ್ತಾ ಇದ್ದಾರೆ, ಹೀಗೆ ಅಗುತ್ತಾ ಇರುವುದು ಅಧಿಕಾರಿಗಳ ಅಜಾಗರೂಕತೆಯಿಂದ ಎಂದು ಹೇಳುತ್ತೇನೆ. ಈ ಒಂದು ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಡಾಕ್ಟರುಗಳು ಹೋಗುವುದಿಲ್ಲ. ಯಾವಾಗ ನೋಡಿದರೂ ಪೇಪರುಗಳಲ್ಲಿ ಆ ಊರಿನಲ್ಲಿ ಡಾಕ್ಟರ್ ಇಲ್ಲ, ಈ ಊರಿನಲ್ಲಿ ಡಾಕ್ಟರ್ ಇಲ್ಲ ಎಂದು ಇರುತ್ತದೆ. ಅನೇಕ ಸಂದರ್ಭಗಳಲ್ಲಿ ಇದರ ಪ್ರಸ್ತಾಪ ಬರುತ್ತದೆ. ಏತಕ್ಕೆ ಗ್ರಾಮಾಂತರ ಪ್ರದೇಶದಲ್ಲಿ ಡಾಕ್ಟರುಗಳು ಕೆಲಸ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ ! ಪ್ರೈಮರಿ ಸ್ಕೂಲು ಹಿಡಿದು ಕಾಲೇಜು ವಿದ್ಯಾಭ್ಯಾಸದ ತನಕ ರೈತರು ಕೊಡುವ ಕಂದಾಯದ ಹಣದ ಆಧಾರದಮೇಲೆ ಓದಿ, ವಿದೇಶಗಳಿಗೆ ಹೋಗಿ ಡಿಗ್ರಿ ಪಡೆದಮೇಲೆ ಯಾವನು ಕಂದಾಯ ಕೊಟ್ಟು ಇವರ ವಿದ್ಯಾಭ್ಯಾಸಕ್ಕೆ ಮೂಲ ಕಾರಣನು ಆಗಿದ್ದಾನೆಯೋ ಅಂಥ ರೈತನನ್ನು ಗಣನೆಗೆ ತೆಗೆದುಕೊಳ್ಳದೆ ಗ್ರಾಮಾಂತರ ಪ್ರದೇಶಕ್ಕೆ ಹೋಗುವುದಕ್ಕೆ ಹಿಂದೇಟು ಹಾಕುತ್ತಾರೆ. ಮೊದಲನಿಂದಲೂ ಇರತಕ್ಕಂಥ ಪಾಲಿಸಿ ಸರಕಾರ ಆಲೋಚನೆ ಮಾಡಿ ಇದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಡಿಗ್ರಿ ಬಂದಮೇಲೆ ಸರಕಾರದ ಅನುಕೂಲತೆಯಿಂದ ಮುಂದೆ ಬಂದಮೇಲೆ ಡಾಕ್ಟರರು ಗ್ರಾಮಾಂತರ ಪ್ರದೇಶಕ್ಕೆ ಹೋಗುವುದಕ್ಕೆ ಹಿಂದೇಟು ಹಾಕುತ್ತಾ ಇರುವುದರಿಂದ ಈ ಒಂದು ಹೊಸ ವ್ಯವಸ್ಥೆ ಮಾಡುವಾಗ್ಗೆ ಎಂ.ಬಿ.ಬಿ.ಎಸ್. ಪರೀಕ್ಷೆಗೆ ಮೊದಲು ಗ್ರಾಮಾಂತರ ಪ್ರದೇಶದಲ್ಲಿ ಒಂದು ವರ್ಷ ಕೆಲಸ ಮಾಡಿದರೆ ಡಿಗ್ರಿ ಕೊಡಬೇಕು ಇಲ್ಲವಿದ್ದರೆ ಇಲ್ಲ ಎಂದು ಇರಬೇಕೆಂದು ಸಲಹೆ ಮಾಡುತ್ತೇನೆ. ಇದನ್ನು ಸರಕಾರ ಪರಿಶೀಲನೆ ಮಾಡಬೇಕು.

ಇವತ್ತಿನ ದಿವಸ ದೇಶದಲ್ಲಿ ಪ್ಲೇಗು ಕಾಲರ ಸಾಂಕ್ರಾಮಿಕ ರೋಗ ಹೋಯಿತು. ಸರಕಾರ ಜನಾರೋಗ್ಯದ ಕಡೆ ಹೆಚ್ಚು ಗಮನ ಕೊಟ್ಟಿರುವುದರಿಂದ ಹೋಗಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇತ್ತೀಚೆಗೆ ಪಾರ್ಶ್ವವಾಯು, ಹಾರ್ಟ್ ಅಟಾಕ್ ಇಂಥ ಇನ್ನೂ ಅನೇಕ ರೋಗಗಳು ಬಂದಿವೆ. ಈ ದಿಶೆಯಲ್ಲಿ ಸರಕಾರ ಹೆಚ್ಚಾಗಿ ಪರಿಶೋಧನೆ ಮಾಡಿಸಿ ಇದಕ್ಕೆ ಸೂಕ್ತ ಕ್ರಮ ಹಾಕಿಕೊಂಡು ರೋಗ ನಿವಾರಣೆ ಮಾಡುವುದಕ್ಕೆ ಸಾಕಷ್ಟು ವ್ಯವಸ್ಥೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಪ್ರತಿಯೊಬ್ಬ ಸದಸ್ಯರೂ ಗ್ರಾಮಾಂತರ ಪ್ರದೇಶದಲ್ಲಿ ನಮ್ಮ ಊರಿಗೆ ಹಾಸ್ಪಿಟಲ್ ಬೇಕು ಎಂದು ಕೇಳುತ್ತಾರೆ. ಆದರೆ ಊರಿನಲ್ಲಿ ಇರುವುದಕ್ಕೆ ಡಾಕ್ಟರರಿಗೆ ಮನೆ ಇರುವುದಿಲ್ಲ, ಒಂದು ಸರಿಯಾದ ವ್ಯವಸ್ಥೆ ಇರುವುದಿಲ್ಲ, ಹಾಗೂ ಅನೇಕ ತೊಂದರೆಗಳು ಇರುವುದರಿಂದ ಅವರು ಹಿಂದೇಟು ಹಾಕುತ್ತಾರೆ. ಇನ್ನು ಮುಂದೆ ದೇಶದಲ್ಲಿ ಆಸ್ಪತ್ರೆ ಮಂಜೂರು ಮಾಡುವಾಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಡಾಕ್ಟರರಿಗೆ ಮನೆ ಅವರಿಗೆ ಬೇಕಾದ ವ್ಯವಸ್ಥೆ ಅಲ್ಲಿಯ ಗ್ರಾಮಸ್ಥರು, ಪಂಚಾಯತಿಯವರು ತಾಲ್ಲೂಕಿನವರು ಒಪ್ಪಿಕೊಂಡು ಮಾಡಿದ ಮೇಲೆ ಇದನ್ನು ಮಂಜೂರು ಮಾಡಬೇಕೆಂದು ಸರಕಾರಕ್ಕೆ ನಾನು ಸಲಹೆ ಮಾಡುತ್ತೇನೆ. ಇಂಥ ವ್ಯವಸ್ಥೆ ಮಾಡಿಕೊಟ್ಟರೆ ಆಸ್ಪತ್ರೆ ಕೊಡುತ್ತೇವೆಂದು ಹೇಳಬೇಕು.

(ಶ್ರೀ ಎ. ಮುನಿಯಪ್ಪ)

ಕುಟುಂಬ ಯೋಜನೆ ವಿಚಾರದಲ್ಲಿ ಒಂದೆರಡು ಮಾತು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಹಿಂದೆ ಸಂತಾನ ಜಾಸ್ತಿಯಾಗಬೇಕು, ಪುತ್ರ ಕಾಮೇಷ್ಠಿ ಯಾಗಗಳನ್ನು ಮಾಡಬೇಕು ಎಂದು ಇದ್ದ ದೇಶದಲ್ಲಿ ಈಗ ಸಂತಾನವನ್ನು ನಿಲ್ಲಿಸಬೇಕು ಎಂದು ಹೊರಟಿದ್ದಾರೆ. ವಿದುರಾಶ್ವತ್ಥ, ಸಾಯಿಬಾಬ ಮತ್ತು ಇನ್ನೂ ಅನೇಕ ದೇವಸ್ಥಾನಗಳಿಗೆ ಈಗಲೂ ಪುತ್ರ ಸಂತಾನಕ್ಕಾಗಿ ಜನ ಹೋಗುತ್ತಿದ್ದಾರೆ. ಈ ಕಡೆ ಕುಟುಂಬ ಯೋಜನೆಯನ್ನು ಸರ್ಕಾರದವರು ಜಾರಿ ಮಾಡಿ ಅದನ್ನು ದೇಶದಲ್ಲ ಅಳವಡಿಸಿದ್ದಾರೆ. ಕುಟುಂಬ ಯೋಜನೆಯಲ್ಲ ಕೂಡ ಬ್ಲ್ಯಾಕ್ ಮಾರ್ಕೆಟ್ ಆಗಿದೆ. ಸರ್ಕಾರದವರು ಯಾವ ಉದ್ದೇಶದಿಂದ ಇದನ್ನು ತಂದಿದ್ದಾರೆಯೋ ಅದಕ್ಕೆ ವಿರುದ್ಧವಾಗಿದೆ ಈ ಮಾರ್ಕೆಟ್ ಪದ್ಧತಿ. ಕುಟುಂಬ ಯೋಜನೆಯಲ್ಲಿ ಸರ್ಕಾರದವರು, ಸರ್ಕಾರಿ ಅಧಿಕಾರಿಗಳು ಕಡ್ಡಾಯವಾಗಿ ಆಪರೇಷನ್ ಮಾಡಿಸಿಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದಾರೆ. ಕೆಲವು ಅಧಿಕಾರಿಗಳು ಅದರಂತೆ ಆಪರೇಷನ್ ಮಾಡಿಸಿಕೊಳ್ಳುತ್ತಿದ್ದಾರೆ. ಆದರೆ ಈ ಕುಟುಂಬ ಯೋಜನೆಯನ್ನು ಅಧಿಕಾರಿಗಳ ಕಡೆ ಕೊಡುವ ಬದಲು ಗ್ರಾಮಾಂತರ ಪ್ರದೇಶಗಳ ಕಡೆ ಮಾಡಿದ್ದರೆ ಚೆನ್ನಾಗಿತ್ತು. ಗ್ರಾಮಾಂತರ ಪ್ರದೇಶಗಳ ಕಡೆ ಕುಟುಂಬ ಯೋಜನೆಯನ್ನು ಜಾರಿಗೆ ತರದೆ ಇದ್ದರೆ ಇನ್ನು ಹತ್ತಿಪ್ಪತ್ತು ವರ್ಷಗಳಲ್ಲಿ ಬಹಳ ಅನಾಹುತಕ್ಕೆ ಈ ದೇಶ ಈಡಾಗುತ್ತದೆ ಎಂದು ಖಂಡಿತವಾಗಿ ಹೇಳಬೇಕಾಗುತ್ತದೆ. ರಾಜ್ಯದಲ್ಲಿರುವ ಐ.ಎ.ಎಸ್. ಅಧಿಕಾರಿಗಳು, ಐ.ಪಿ.ಎಸ್ ಅಧಿಕಾರಿಗಳು, ಇಂಜನಿಯರುಗಳು, ಡಾಕ್ಟರುಗಳು ಮತ್ತು ಇತರ ಅಧಿಕಾರಿಗಳು ಇವರ ಸಂಖ್ಯೆಯನ್ನು ಕಡಮೆ ಮಾಡುತ್ತ ಹೋದರೆ, ಹಳ್ಳಿಗಾಡಿನಲ್ಲಿರುವ ಅವಿದ್ಯಾವಂತರ ಕಡೆಗೆ ಈ ಕುಟುಂಬ ಯೋಜನೆಯನ್ನು ಜಾರಿ ಮಾಡದೆ ಇದ್ದರೆ ಇವರ ಸಂಖ್ಯೆ ಜಾಸ್ತಿಯಾಗಿ, ಬಹಳ ತೊಂದರೆಯಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಅವಿದ್ಯಾವಂತರ ಸಂಖ್ಯೆಯನ್ನು ಕಡಮೆ ಮಾಡದೆ ಇದ್ದರೆ ಪುಂಡು ಪೋಕರಿಗಳ, ಧಾಳಿಕಾರರ ಮತ್ತು ಇನ್ನೂ ಅನೇಕ ಅಕ್ರಮಣಕಾರರ ಸಂಖ್ಯೆ ಜಾಸ್ತಿಯಾಗಿ ಈ ದೇಶದಲ್ಲಿ ಅಶಾಂತಿ ಎದ್ದ ಮೇಲೆ ಚೀಣಾ ದೇಶ, ಪಾಕಿಸ್ಥಾನ ಈ ಬಾರ್ಡರಿನಲ್ಲಿರುವ ಮಿಲಿಟರಿಯನ್ನು ನಮ್ಮ ಒಳದೇಶದಲ್ಲಿ ಜನರ ರಕ್ಷಣೆ ಮಾಡುವುದಕ್ಕೆ ಇಟ್ಟುಕೊಳ್ಳಬೇಕಾಗುತ್ತದೆ. ಆದುದರಿಂದ ಕುಟುಂಬ ಯೋಜನೆಯನ್ನು ಮಾಡುವಾಗ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕೆಂದೂ ಈ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದೂ ಹೇಳುತ್ತೇನೆ.

ಕುಟುಂಬ ಯೋಜನೆಯಲ್ಲಿ ಆಪರೇಷನ್ ಮಾಡುತ್ತಾರೆ. ಈ ಆಪರೇಷನ್ ಮಾಡುವಾಗ ಬಹಳ ಎಚ್ಚರಿಕೆಯಿಂದ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಆಪರೇಷನ್ ಮಾಡಿದಮೇಲೆ ಮಕ್ಕಳಾಗುವುದಿಲ್ಲ ಎಂದು ಹೇಳುತ್ತಾರೆ. ಮಕ್ಕಳಾಗುವುದಿಲ್ಲ ಎಂದು ಹೇಳಿದ ಮೇಲೆ ಕೆಲವು ಸಂದರ್ಭಗಳಲ್ಲಿ ಡಾಕ್ಟರುಗಳ ಅಜಾಗರೂಕತೆಯಿಂದ ಮಕ್ಕಳಾದರೆ ಆ ಸಂಸಾರಗಳು ಹಾಳಾಗುತ್ತವೆ ಮತ್ತು ಗಂಡ ಹೆಂಡಿರಲ್ಲಿ ಭಿನ್ನಾಭಿಪ್ರಾಯ ಬರುತ್ತದೆ. ಆಪರೇಷನ್ ಮಾಡುವಾಗ ಅಧಿಕಾರಗಳು ಎಚ್ಚರಿಕೆಯಿಂದ ಮಾಡಿ ಅದು ಯಶಸ್ವಿಯಾಗಿದೆಯೇ ಇಲ್ಲವೇ ಎನ್ನುವುದನ್ನು ಮನದಟ್ಟು ಮಾಡಿಕೊಳ್ಳಬೇಕು. ಇಲ್ಲದೆ ಇದ್ದರೆ ಗಂಡ ಹಂಡಿರಲ್ಲಿ ವ್ಯತ್ಯಾಸವಾಗುತ್ತದೆ. ಇಂಥವು ಈಗ ಅನೇಕವಾಗಿವೆ. ಆದುದರಿಂದ ಈ ವಿಚಾರದಲ್ಲಿ ಹೆಚ್ಚಿಗೆ ಗಮನ ಕೊಡಬೇಕು.

ಸಂಚಾರಿ ಆಸ್ಪತ್ರೆಗಳು ಇಲ್ಲದೆ ಹೋದರೆ ಬಹಳ ಕಷ್ಟವಾಗುತ್ತದೆ. ಮೊನ್ನೆ ಗುಡಿಬಂಡೆಯಲ್ಲಿ ಎಲೆಕ್ಟ್ರಿಕ್ ಆಫೀಸು ಅಕೌಂಟೆಂಟರ ಮನೆಯಲ್ಲಿ ಹೆರಿಗೆ ಆಗಬೇಕಾಗಿತ್ತು. ನಾನು ಚುನಾವಣೆ ಸಂದರ್ಭದಲ್ಲಿ ಅಲ್ಲಿಗೆ ಹೋಗಿದ್ದೆ. ಸುಮಾರು 7 ಗಂಟೆ ಸಮಯದಲ್ಲಿ ಆತನ ಹೆಂಡತಿಗೆ ಹೆರಿಗೆ ಆಗುವ ಸ್ಥಿತಿ ಬಂದಿತ್ತು. ಆ ಸನ್ನಿವೇಶದಲ್ಲಿ ಹೆರಿಗೆ ಆಗದೆ ಬಹಳ ತೊಂದರೆ ಪಡುತ್ತಿದ್ದ ಕಾಲದಲ್ಲಿ ಚಿಕ್ಕಬಳ್ಳಾಪುರದ ಮಿಷನ್ ಆಸ್ಪತ್ರೆಗೆ ಆಕೆಯನ್ನು ಕರೆದುಕೊಂಡು ಹೋಗದೆ ಇದ್ದರೆ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಉಂಟಾಯಿತು, ಬಹಳ ತಾಪತ್ರಯವಾಯಿತು ಆಮೇಲೆ ನಾವು ಒಂದು ವ್ಯವಸ್ಥೆಯನ್ನು ಮಾಡಿ ಆಕೆಯನ್ನು ಆಸ್ಪತ್ರೆಗೆ ಕಳಿಸಿಕೊಟ್ಟೆವು. ಆದರೆ ಆಕೆ ದಾರಿಯಲ್ಲಿಯೇ ಮೃತಪಟ್ಟಳು. ಇಂಥ ಸನ್ನಿವೇಶಗಳು ಬಹಳ ಇವೆ.

ಇನ್ನೊಂದು ವಿಚಾರ. ಚಿಕ್ಕಬಳ್ಳಾಪುರ ತಾಲ್ಲೂಕು ಕನಮಕನಹಳ್ಳಿಯಲ್ಲಿ ಒಂದು ಮಗುವಿಗೆ ಬಹಳ ಕಾಯಿಲೆಯಾಗಿ ಅದು ಹೆಚ್ಚಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಯಿತು, ಯಾವ ವಾಹನ ಸಾಕರ್ಯವೂ ಇರಲಿಲ್ಲವಾದ್ದರಿಂದ ಗಾಡಿಯಲ್ಲಿ ತೆಗೆದುಕೊಂಡು ಹೋಗಬೇಕಾಯಿತು, ಅದು ನಿಧಾನವಾಗಿ ಆಸ್ಪತ್ರೆ ತಲುಪುವುದಕ್ಕೆ ಮುಂಚೆಯೇ ದಾರಿಯಲ್ಲಿ ಸತ್ತುಹೋಯಿತು. ಆದುದರಿಂದ ಪ್ರತಿಯೊಂದು ತಾಲ್ಲೂಕು ಹೆಡ್ ಕ್ವಾರ್ಟರಲ್ಲಾದರೂ ಒಂದು ವ್ಯಾನನ್ನು ಇಟ್ಟಿರುವುದು ಸೂಕ್ತ ಎಂದು ಸಲಹೆ ಮಾಡುತ್ತೇನೆ. ನಮ್ಮ ಊರಿನಲ್ಲಿ ಒಂದೇ ದಿವಸ 7 ಜನರು ಫಾಲಿಡಾಲ್ ಕುಡಿದಿದ್ದರು,

ಆ ಸಮಯದಲ್ಲಿ ಹೆಣಗಳ ಪೋಸ್ಟ್‌ಮಾರ್ಟಂ ನಡೆಸಲು ಡಾಕ್ಟರಿರಲಿಲ್ಲ, ಆದುದರಿಂದ ಆ ಹೆಣಗಳನ್ನು ಶಿಡ್ಲಘಟ್ಟಕ್ಕೆ ತೆಗೆದುಕೊಂಡು ಹೋಗಲಾಯಿತು, ಅಲ್ಲೂ ಡಾಕ್ಟರಿರಲಿಲ್ಲ, ನಂತರ ಬಾಗೇಪಲ್ಲಿಗೆ ಹೋದರೆ ಅಲ್ಲಿಯೂ ಡಾಕ್ಟರಿಲ್ಲದೆ ಗುಡಿಬಂಡೆಗೆ ಹೋಗಿ ಡಾಕ್ಟರಿಲ್ಲದ್ದರಿಂದ ಮತ್ತೆ ಗೌರಿಬಿದನೂರಿಗೆ ತೆಗೆದುಕೊಂಡು ಹೋಗಬೇಕಾಯಿತು. ಹೀಗಾಗಬಾರದು. ಫಾಲಿಡಾಲ್ ವಿಚಾರದಲ್ಲಿ ಸರಕಾರದವರು ಬಹಳ ಎಚ್ಚರಿಕೆಯಿಂದಿರಬೇಕು. ಸಂಬಂಧಪಟ್ಟ ಆಫೀಸರುಗಳಿಗೆ ಫಾಲಿಡಾಲ್ ಉಪಯೋಗದ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕೆಂದು ಸೂಚನೆ ಕೊಡಬೇಕು.

ಆರೋಗ್ಯದ ದೃಷ್ಟಿಯಿಂದ ಹೋಟೆಲುಗಳ ವಿಷಯದಲ್ಲಿ ಸಚಿವರು ಹೆಚ್ಚು ಗಮನ ಕೊಡಬೇಕು. ಲಾಭದ ದೃಷ್ಟಿಯಿಂದ ಜನರ ಆರೋಗ್ಯದ ಕಡೆಗೆ ಗಮನ ಕೊಡದೆ ಉತ್ತಮವಲ್ಲದ ಆಹಾರ ಪದಾರ್ಥಗಳನ್ನು ಜನರಿಗೆ ಒದಗಿಸುವುದನ್ನು ತಡೆಗಟ್ಟಿ ಹೋಟೆಲುಗಳನ್ನು ಶುಚಿಯಾಗಿಡುವಂತೆ ವ್ಯವಸ್ಥೆ ಮಾಡಬೇಕು.

ಹೆಣ್ಣು ಮಕ್ಕಳ ಮದುವೆ ಮಾಡಬೇಕಾದರೆ ಮೆಡಿಕಲ್ ಕಾಲೇಜು ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡಿಸಿದರೆ ಮದುವೆಯಾಗುವುದಾಗಿ ಹೇಳುತ್ತಾರೆ, ಈ ಸೀಟುಗಳನ್ನು ಪಡೆಯುವುದಕ್ಕಾಗಿ ಕಾಳಸಂತೆಗೆ ತೊಡಗಬೇಕಾಗುತ್ತದೆ. ಇಂಥ ಪರಿಸ್ಥಿತಿಯಿದೆ. ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವಾಗ ಆಂಧ್ರ, ತಮಿಳುನಾಡು ಮುಂತಾದ ಇತರ ದೇಶಗಳವರಿಗೆ ಪ್ರಾಶಸ್ತ್ಯ ಕೊಡುತ್ತಾರೆ, ಗುಲ್ಬರ್ಗದಲ್ಲಿ ಒಂದು ಸೀಟಿಗಾಗಿ ಒಬ್ಬ ಸಿನೀಮಾ ಆಕ್ಟರು 25 ಸಾವಿರ ರೂಪಾಯಿಗಳನ್ನು ಕೊಟ್ಟರು. ಕರ್ಣಾಟಕದಲ್ಲಿ ಹುಟ್ಟಿ ಬೆಳೆದವರಿಗೆ ಸೀಟಿಲ್ಲ, ಬೇರೆ ಕಡೆಗಳಿಂದ ಬರುವವರಿಗೆ ಇದೆ. ಇದು ಸರಿಯಲ್ಲ, ಮೈಸೂರಿನವರಿಗೆ ಮೊದಲು ಸೀಟು ಕೊಟ್ಟು ಆಮೇಲೆ ಮುಂದಿನ ಯೋಚನೆ ಮಾಡಬೇಕು. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

†Sri DIGAMBAR RAO BALWANT RAO (Aland).—Mr. Speaker, Sir on Medical and Public Health the Government has proposed to spend Rs. 11,36,91,000. The budget allotment for 1967-68 is more than what it was for 1966 67 by Rs. 1,32,91,000. As the Congress professes that it is a welfare State and next to food, clothing and shelter comes health services, and in view of the fact that the health problems of $2\frac{1}{2}$ crores of people have to be effectively solved, I submit that the amount earmarked for Medical and Public Health is not sufficient and has to be increased.

The amount of outlay for medicines and public health is only Rs. 27 crores which is not sufficient. So I would suggest that the outlay on public health may be increased because it is not commensurate with the problems of our State.

Mr. SPEAKER.—There is no question of increasing the demand.

Sri DIGAMBAR RAO BALWANT RAO.—Now I will come to the condition of Hospitals in the State. There are Hospitals at District Headquarters and Taluk Headquarters. As has been stated by one and all members irrespective of parties, the hospitals are not good and there are no equipments, and there are no X-ray operators or any such things. There are 174 Taluks in the State and out of them, general hospital facilities exist only in 41 Taluks. These are no general hospitals in other Taluks. I submit that unless all these Taluks are given fully equipped hospitals, the health problem cannot be solved in a short period. Speedy action and more concentration on the health problems of our people are required. I would request the Minister for Health that he should concentrate more attention on giving general hospital benefits to every Taluk. In the Fourth Five Year Plan it is stated only 59 Taluks are going to be taken up for giving these facilities.

(SRI DIGAMBAR RAO BALWANT RAO)

Therefore, I request the Minister to see that more number of Taluks are given hospital benefits in the Fourth Plan period itself. I will come to Aland Taluk. This Taluk has got a population of 1½ lakhs. There is only one Hospital at Aland. In that Hospital there is no Maternity Wing. The Medical Officer who is in that Hospital has to look after so many hospitals and also so many dispensaries run by the Taluk Board. So the important problem is the problem of shortage of Doctors. The Government must pay attention to provide doctors to the Health Centres. There is one village Narona where there is health centre. There is no adequate staff since three years. There is one more village where there is a dispensary run by Taluk Board in which there are no medicines and other facilities. The Government seem to have forgotten that there are dispensaries run by Taluk Boards. Now I would request the Minister concerned not to confine himself in touring only Bangalore and Mysore, but to go to every nook and corner of the State and see personally whether the statement made by me and several other members is correct. If the Minister frequently visits every hospital and dispensary, all the staff become honest and they do their duties properly and the problem can be solved effectively. What we are seeing in other non-Congress States is that the Minister concerned does not hesitate to visit hospitals by surprise and check the stock. He visits all kinds of hospitals whether Government-run or local board-run. By this visit a fear would be created in the members of the staff and that has got its own effect and every defect will be set right after some time. If the Government is sincere about solving the health problem of the people of the State, the Minister concerned should go to every hospital and see that they are run properly. If he visits often, there will be no wastage and the staff will become alert.

Regarding the capitation fees, I have to submit Sir, as Mr. Muniyappa said, this has become a very big chronic disease. Seats are being sold in Gulbarga Medical College. The rate per seat has gone up to Rs. 25,000 which unfortunately the people of Hyderabad Karnatak area cannot afford. As a result of this, students from cities and other States are being selected. But the students who are coming from that area being poor are denied seats. The students from the Cities are being offered seats. Though they may not be meritorious. But what about the fate of village students ? As a result of the policy of the Government, the village students have no future at all. Private Colleges are demanding huge capitation fees. These village students cannot afford to pay so much of capitation fees. With the result the students who can afford to pay capitation fees have joined the Institutions and after passing the Examination they will practise outside and create acute scarcity of Doctors. Therefore in the interest of the State and in the interest of the profession, I request the Government to see that taking of capitation fees is stopped. After having passed the P. U. C. the reservation of seats is being made through the Hyderabad

Education Society. However desirous the students may be, the Society is paid the money and it gives them seats not only in P. U. C. but also in M.B.B.S. Due to this, most of the children who are coming from Government Colleges after passing B.Sc., part I may not get seats. Even if they get, their seats are very limited. The whole conditions are deteriorating. Therefore, Government should see that trading of seats in our parts is stopped. When the Chief Minister visited Gulbarga, he also sensed that something wrong is going on in the Medical College. I am very sad to say that corruption is also being practised there. Corruption has crept into the educational institutions. The people have formed a very bad opinion about these educational institutions. The honest people and the poor people have no place there. It is our misfortune to have such things in educational Institutions. Every time the Government say the capitation fees will be discouraged. What is the result? It is nothing. Corruption is rampant instead. The Government must see that these things are removed from the educational institutions and also they must see that merit is recognised and rural students get seats in educational institutions. Unless we do this Mysore cannot prosper in educational field. I suggest that all the private schools and colleges may be taken over with all earnestness and see that the problem of shortage of doctors is solved in the interest of State. Thank you, Sir.

2-30 P.M.

ಶ್ರೀಮತಿ ಲೀಲಾವತಿ ರೈ (ಬಂಟವಾಳ್).—ಸನ್‌ಮಾನ್ಯ ಸಭಾಪತಿಗಳೇ, ನಮ್ಮ ಮುಂದಿರುವ ಈ ಹೆಲ್ತ್ ಡಿಮ್ಯಾಂಡಿನ ಬಗೆಗೆ ಮಾತನಾಡುತ್ತ ಒಂದೆರಡು ತಿದ್ದುಪಡಿಗಳನ್ನು ನಾನಿಲ್ಲಿ ಹೇಳಲು ಬಯಸುತ್ತೇನೆ. ಮೊದಲನೆಯದು ಏನೆಂದರೆ, ನಮ್ಮ ಆಸ್ಪತ್ರೆಗಳಲ್ಲಿ ಈಗಿರುವಂತಹ ವಸ್ತ್ರಗಳು ಬಹಳ ಹೊಲಸಾಗಿ ಕಾಣುತ್ತಾ ಇವೆ. ರೂರಲ್ ಏರಿಯಾದಲ್ಲಿರುವವರು, ಧೋಬಿಗಳು ಆಸ್ಪತ್ರೆಗಳ ವಸ್ತ್ರಗಳನ್ನು ಮಡಿ ಮಾಡುವುದಿಲ್ಲ ಎಂದು ಹೇಳುತ್ತಾರೆ. ಅಲ್ಲಿ ವಸ್ತ್ರಗಳನ್ನು ಸರಿಯಾಗಿ ಒಗೆಯುವುದಿಲ್ಲ, ಅಲ್ಲಿರತಕ್ಕ ಕೂಲಿಗಳೇ ಅವನ್ನು ಒಗೆದು ಅದಕ್ಕೆ ಕೊಡಬೇಕಾದ ಹಣ ಅವರಿಗೇ ಹೋಗುತ್ತದೆ, ಅದರಿಂದ ಅದು ಸರಿಯಾಗಿ ಸ್ವಚ್ಛವಾಗಿರುವುದಿಲ್ಲ. ಯಾವಾಗ ಆರೋಗ್ಯವಾಗಿರಬೇಕು ಎಂದು ಹೇಳುತ್ತೇವೆ ಆಗ ಸ್ವಚ್ಛತೆ ಇಲ್ಲದೇ ಇದ್ದರೆ ಯಾವ ಆರೋಗ್ಯವು ಇರುವುದಿಲ್ಲ. ಹಾಸಿಗೆಗಳಿಗೆ ಖಾದಿ ಬಟ್ಟೆ ಹಾಸಬೇಕೆಂಬ ಸರ್ಕಾರದ ಆದೇಶ ಇದೆ, ಅದು ಅಷ್ಟು ಬಾಳಿಕೆ ಬರುವುದಿಲ್ಲ. ಮತ್ತು ಅಷ್ಟು ನಿರ್ಮಲವಾಗಿರುವುದಿಲ್ಲ. ಹಣವೂ ಜಾಸ್ತಿ, ಖಾದಿ ಎಂದರೆ ನಮಗೆ ಅರ್ಥವಾಗುತ್ತದೆ. ಸೀರೆ ತೆಗೆಯುವಾಗ ಮಿಲ್ ಸೀರೆಗಿಂತ ಇದು ಎರಡು ಪಾಲು ಜಾಸ್ತಿಯಾಗಿರುತ್ತದೆ. ಆದ್ದರಿಂದ ಸ್ವಚ್ಛತೆಯ ಪರವಾಗಿಯೂ ಮತ್ತು ಬಾಳಿಕೆಯ ಪರವಾಗಿಯೂ ಒಗೆಯುವುದಕ್ಕೆ ಸುಲಭವಾಗಿರುವುದರಿಂದಲೂ ಮಿಲ್ ಬಟ್ಟೆಗಳನ್ನೇ ಇಡುವಂತೆ ಮಾಡಿ, ಸ್ವಚ್ಛವಾಗಿ ಆಸ್ಪತ್ರೆಗಳ ಹಾಸಿಗೆಗಳನ್ನು ಇಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ. ಇನ್ನು ಹಾಸಿಗೆಗಳೂ ಕೂಡ ಸರಿಯಾಗಿ ಇರುವುದಿಲ್ಲ. ಅದರಲ್ಲಿ ತೆಂಗಿನಕಾಯಿನ ನಾರನ್ನು ಹಾಕಿರುತ್ತಾರೆ, ಅದಕ್ಕೆ ಬದಲಾಗಿ ಬೇರೆ ಉಪಕರಣಗಳನ್ನು ಸ್ವಲ್ಪ ಸುಲಭ ದರದಲ್ಲಿ ಸಿಕ್ಕುವಂತಹ ಹತ್ತಿಯನ್ನು ಹಾಕಿದರೆ ಒಳ್ಳೆಯದಾಗುತ್ತದೆ, ಏಕೆಂದರೆ, ಕೆಲವೊಂದು ಕಾಯಿಲೆಗಳಿಗೆ ಸ್ವಲ್ಪ ಮೆತ್ತಗಿನ ಹಾಸಿಗೆಯನ್ನು ಕೊಟ್ಟರೆ ಒಳ್ಳೆಯದು. ಆದ್ದರಿಂದ ತೆಂಗಿನ ನಾರಿನ ಹಾಸಿಗೆಗೆ ಬದಲಾಗಿ ಬೇರೆ ಯಾವುದಾದರೂ ತೆಗೆದುಕೊಳ್ಳಬೇಕೆಂದು ಹೇಳಲು ಬಯಸುತ್ತೇನೆ.

ಎರಡನೆಯದಾಗಿ ತಾಲ್ಲೂಕು ಹೆಡ್‌ಕ್ವಾರ್ಟರ್ ಆಸ್ಪತ್ರೆಗಳು. ಮೊನ್ನೆ ಜನರಲ್ ಡಿಸ್ಕಷನ್ ಆಗುವಾಗ ನಾನು ಹೇಳಿದೆ. ನಮ್ಮ ತಾಲ್ಲೂಕಿನದು ಒಂದು-ಇದು ಬಂಟವಾಳದ್ದು ನಮ್ಮ ತಾಲ್ಲೂಕು ಎಂದು ಹೇಳುತ್ತೇನೆ ಎಂದು ಯಾರೂ ಅಭಿಪ್ರಾಯ ಪಡಬಾರದು. ಅಧಿಕಾರಿಗಳು ನಮ್ಮ ದಕ್ಷಿಣಕನ್ನಡ ಜಿಲ್ಲೆಗೆ ಬಂದಾಗ ನನಗೆ ಸಿಕ್ಕಿದ್ದರು ಅವರ ಹತ್ತಿರ ಮಾತನಾಡುವಾಗ ನಮ್ಮ ಬಂಟವಾಳ ತಾಲ್ಲೂಕಿನ ಆಸ್ಪತ್ರೆಯನ್ನು ತಾಲ್ಲೂಕು ಹೆಡ್‌ಕ್ವಾರ್ಟರ್ ಆಸ್ಪತ್ರೆಯಾಗಿ ಮಾರ್ಪಡಿಸಬೇಕೆಂದು ಹೇಳಿದೆ. ಅದು

(ಶ್ರೀಮತಿ ಲೀಲಾವತಿ ರೈ)

10-12 ವರ್ಷದಿಂದ ಒಂದೇ ನಮೂನೆ ಆಗಬೇಕೆಂದು ಒತ್ತಾಯ ಬರುತ್ತಾ ಇದೆ. ಅಲ್ಲಿ ಎಕ್ಸ್‌ರೇ ಆಗಲಿ ಜನರಿಗೆ ಬೇರೆ ಯಾವ ಅನುಕೂಲವಾಗಲಿ ಸಿಕ್ಕುತ್ತಾ ಇಲ್ಲ. ಆದ್ದರಿಂದ ಬಂಟವಾಳವನ್ನು ತಾಲ್ಲೂಕು ಹೆಡ್‌ಕ್ವಾರ್ಟರ್ ಹಾಸ್ಪಿಟಲ್ ಆಗಿ ಕನ್‌ಸಿಡರ್ ಮಾಡಬೇಕೆಂದು ಹೇಳಿದಾಗ ಆ ಜನರೇ ಅಲ್ಲಿಯ ಆಸ್ಪತ್ರೆಯ ಕಟ್ಟಡಕ್ಕೆ ಏರ್ಪಾಡು ಮಾಡುವುದಾದರೆ ಮತ್ತು ಯಾವ ಸಲಕರಣೆಗಳು ಬೇಕೋ ಅವನ್ನು ಒದಗಿಸುವುದಕ್ಕೆ ಮುಂದೆ ಬಂದಲ್ಲಿ ಅದನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯ, ಆ ರೀತಿ ನಿರ್ದೇಶನ ಸರ್ಕಾರ ಹೊರಡಿಸಿದೆ ಎಂದು ಹೇಳಿದರು. ಇದು ಸರಿಯಲ್ಲ. ಇದನ್ನು ಏಕೆ ಹೇಳುತ್ತೇನೆ ಎಂದರೆ, ಜನರ ಕಷ್ಟ ಸುಖಗಳನ್ನು ನಾವು ತಮ್ಮ ಮುಂದೆ ಇಡುವುದು ನಮ್ಮ ಕರ್ತವ್ಯ. ಜನರಿಗಾಗಿ ಸರ್ಕಾರ ಇದೆ. ಜನರಿಂದ ಸರ್ಕಾರ ತೆರಿಗೆಗಳನ್ನು ವಸೂಲು ಮಾಡುತ್ತಾ ಇದೆ. ಹಾಗಿರುವಾಗ ಜನರಿಗೆ ಬೇಕಾದ ಸೌಕರ್ಯವನ್ನು ಒದಗಿಸಿಕೊಡುವುದು ಸರ್ಕಾರದವರ ಆದ್ಯಕರ್ತವ್ಯ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬಂಟವಾಳದಲ್ಲಿ ಮಾತ್ರ ತಾಲ್ಲೂಕು ಹೆಡ್‌ಕ್ವಾರ್ಟರ್ ಹಾಸ್ಪಿಟಲ್ ಇಲ್ಲ. ಹನ್ನೆರಡು ವರ್ಷದಿಂದ ಹಾಗೆಯೇ ಇದೆ ಎಂದು ಬಹಳ ಬೇಸರಪಡುತ್ತೇನೆ. ಬಂಟವಾಳ ತಾಲ್ಲೂಕಿನಿಂದ ಬಂದವರು ಹೆಲ್ತ್ ಮಿನಿಸ್ಟರು ಆಗಿದ್ದರು, ಸ್ಪೀಕರ್ ಬಾಳಿಗಾರವರೂ ಕೂಡ ಬಂಟವಾಳದಲ್ಲಿ ಹುಟ್ಟಿದವರೇ, ಇಂಥವರೆಲ್ಲಾ ಅಧಿಕಾರಕ್ಕೆ ಬಂದ ಮೇಲೂ ಕೂಡ ಏಕೆ ಇದು ಹಿಂದೆ ಬಿದ್ದಿದೆ ಎಂದು ನನಗೆ ಬಹಳ ಆಶ್ಚರ್ಯವಾಗುತ್ತದೆ ಮತ್ತು ಬಹಳ ದು:ಖವಾಗುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ (ಹರಿಹರ).—ಯಾವಾಗಲೂ ದೀಪದ ಕೆಳಗೇ ಕತ್ತಲೆ ಇರುವುದು!

ಶ್ರೀಮತಿ ಲೀಲಾವತಿ ರೈ.—ಅದನ್ನು ನಾನು ಒಪ್ಪುವುದಿಲ್ಲ. ದೀಪ ಇದ್ದಲ್ಲಿ ಕತ್ತಲಾಗುತ್ತದೆ ಎಂದು ಅದು ಒಪ್ಪುವ ಸಂಗತಿ ಅಲ್ಲ. ಎಲೆಕ್ಟ್ರಿಕ್‌ಲೈಟ್ ಕೆಳಗೆ ಕತ್ತಲೆ ಇರುವುದೇ ಇಲ್ಲ. ಕತ್ತಲೆ ಆಗದ ಹಾಗೆ ಬೇಕಾದ ಸಲಕರಣೆ ಕೊಡುತ್ತೇವೆ. ಆದ್ದರಿಂದ ಇಂತಹ ಒಂದು ಸಲಹೆಗಳನ್ನು ಅಧಿಕಾರಿಗಳು ಕನಿಕರದ ರೀತಿಯಿಂದ ನೋಡುವಂತಹವರಾಗಬೇಕು. ಜನರ ಪ್ರತಿನಿಧಿಗಳು ಏನು ಹೇಳುತ್ತಾರೆ ಅದಕ್ಕೆ ಬೇಕಾದ ಸಲಕರಣೆಗಳನ್ನು ಕೊಡುವಂತಹದು, ಬೇಕಾದಂತಹ ಒಂದು ತೃಪ್ತಿಕರವಾದ ಉತ್ತರವನ್ನು ಕೊಡುವುದು ಇದನ್ನು ನಮ್ಮ ಸರ್ಕಾರಿ ಅಧಿಕಾರಿಗಳು ಕಲಿಯಬೇಕು. ಕಲಿತರೆ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆ. ಸರ್ಕಾರಕ್ಕೆ ಯಾವ ರೀತಿ ಕೆಟ್ಟ ಹೆಸರು ಬರುತ್ತದೆ ಅದು ಸರ್ಕಾರಿ ಅಫೀಸರುಗಳಿಂದಲೇ ಬರುತ್ತದೆ ಎಂದು ಹೇಳಲಿಕ್ಕೆ ಬಹಳ ದುಃಖವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಪ್ರತಿಯೊಬ್ಬರೂ ಮಾನ್ಯ ಸದಸ್ಯರು ಏನು ಹೇಳುತ್ತಾರೋ ಅದಕ್ಕೆ ಗಮನ ಕೊಟ್ಟು ದೇಶದಲ್ಲಿ ಆಗಬೇಕಾದ ಉತ್ತಮ ಕಾರ್ಯಗಳಿಗೆ ಸಹಕಾರ ನೀಡಬೇಕೆಂದು ಈ ಸಂದರ್ಭದಲ್ಲಿ ಪ್ರತಿಯೊಬ್ಬ ಮಂತ್ರಿಗಳನ್ನೂ ಮತ್ತು ಮುಖ್ಯ ಮಂತ್ರಿಗಳನ್ನೂ ಕೇಳಿಕೊಳ್ಳುತ್ತಾ ಇದ್ದೇನೆ.

ಮತ್ತೆ ಮಿಡ್‌ವೈಫುಗಳ ಟ್ರಾನ್ಸ್‌ಫರ್ ವಿಷಯ. ಇವರು ಸಣ್ಣ ಸಂಬಳದವರು, ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಿಸಿ ಎಂದು ಜನರ ಪ್ರತಿನಿಧಿಗಳವರ ಹತ್ತಿರ ಬರುವುದು ಜಾಸ್ತಿಯಾಗಿದೆ. ಈ ರೀತಿ ಸಹಾಯ ಪಡೆದುಕೊಂಡು ಟ್ರಾನ್ಸ್‌ಫರ್ ರದ್ದುಪಡಿಸಲಿಕ್ಕೆ ಸಾಧ್ಯವಿಲ್ಲ ಎಂದು ಎರಡುಮೂರು ಕಲಮುಗಳನ್ನು ಆರ್ಡರ್‌ನಲ್ಲಿ ಕೊಟ್ಟಿದ್ದಾರೆ, ಟ್ರಾನ್ಸ್‌ಫರ್ ಮಾಡುವಾಗಲೇ ಈ ಚಿನ್ಹೆಗಳನ್ನು ಕೊಟ್ಟಿರುತ್ತಾರೆ. ಆದರೆ ದುರ್ದೈವ ವಶಾತ್ ಜನರ ಪ್ರತಿನಿಧಿಗಳಾಗಿ ನಾವು ಬರುತ್ತೇವೆ. ಅಲ್ಲಿ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಬೇಕಾದರೆ, ಬೆಂಗಳೂರಿಗೆ ಬಂದು ಮಾಡಿಸಿಕೊಳ್ಳಬೇಕಾದ ಸನ್ನಿವೇಶ ಇರಕೂಡದು. ನಮ್ಮ ತಾಲ್ಲೂಕಿನಲ್ಲಿ ಜಿಲ್ಲೆಯಲ್ಲಿ ಇರುವಂತಹ ಸರ್ಕಾರಿ ನೌಕರರು ಇದ್ದರೆ ಅವರ ಮೂಲಕವೇ ಮಾಡಿಸಿಕೊಳ್ಳಬೇಕಾಗುತ್ತದೆ. ಅಂಥಾದ್ದರಲ್ಲಿ ಅವರು ತಮ್ಮ ಕಷ್ಟಸುಖ ನಮ್ಮ ಹತ್ತಿರ ಹೇಳಿಕೊಳ್ಳುವುದು ನ್ಯಾಯ ಅವರು ನಮ್ಮ ಹತ್ತಿರ ಬರುತ್ತಾ ಇದ್ದಾರೆ. ಸಣ್ಣ ಸಂಬಳ ಎಂದರೆ 100-200 ಕ್ಕಿಂತ ಕಡಿಮೆ ಸಂಬಳ ಇದ್ದವರು, ಗಂಡ ಹೆಂಡತಿ ಒಂದೇ ಕಡೆಯಲ್ಲಿ ಇದ್ದವರು ಅಂಥವರ ಟ್ರಾನ್ಸ್‌ಫರ್ ಮಾಡುವುದು ತಪ್ಪು, ಆದರಲ್ಲಿ ಪ್ರತಿನಿಧಿಗಳು ಕೈ ಹಾಕುವಂತೆ ಅಧಿಕಾರ ವರ್ಗದವರು ಮಾಡಬಾರದು, ಅದಕ್ಕೆ ನಮ್ಮ ಸರ್ಕಾರದವರು ಬೇಕಾದ ಗಮನವನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮೂರನೆಯದಾಗಿ, ಕಾಂಪೌಂಡರುಗಳಿಗೆ ಎಕ್ಸ್‌ಟೆನ್‌ಷನ್ ಕೊಡುತ್ತಾ ಇದ್ದೀರಿ. ಅನೇಕ ಆಸ್ಪತ್ರೆಗಳಲ್ಲಿ ಕಾಂಪೌಂಡರುಗಳೇ ಇಲ್ಲ. ಎಕ್ಸ್‌ಟೆನ್‌ಷನ್‌ಗೆ 60 ವರ್ಷ ಅಂತ ಹೇಳಿ ಒಂದು ರೆಸ್ಟ್ರಿಕ್ಷನ್ ಇದೆ. ಕೆಲವೊಂದು ಕಡೆ 64 ವರ್ಷದವರೆಗೂ ಆಗುತ್ತಾ ಇದೆ. ಇದೆ ಒಂದು ಜಾತಿ. ನಿಮ್ಮ ರೂಲ್ಸನ್ನೇ ಹೊಂದಿಕೊಂಡು ಹೋಗುವ ಬದಲಾಗಿ ಆಸ್ಪತ್ರೆಗಳಿಗೆ ಬೇಕಾದಂತಹ ಕಾಂಪೌಂಡರುಗಳು, ಮಿಡ್‌ವೈಫ್ಸ್ ಜನರಿಗೆ ಉಪಕಾರವಾಗುವಂತಹ ರೀತಿಯಲ್ಲಿ ಅವರಿಗೆ ಸಂಬಂಧ ಪಟ್ಟಂತೆ ವಯೋಮಿತಿಯನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಿ ಅವರು ಆರೋಗ್ಯವಂತರಾಗಿದ್ದರೆ ಕೆಲಸ ಮಾಡಲಿಕ್ಕೆ ಅವರಿಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಮತ್ತೊಬ್ಬ ಮೆಂಬರು ಹೇಳಿದರು. ಹೆಣ್ಣು ಮಕ್ಕಳು ಡಾಕ್ಟರುಗಳು, ಗಂಡು ಮಕ್ಕಳು ಇಂಜನಿಯರುಗಳು ಆಗಬೇಕೆಂದು ಪ್ರತಿಯೊಬ್ಬರೂ ಕೇಳಿಕೊಳ್ಳುತ್ತಾ ಇದ್ದೇವೆ. ಪ್ರತಿಯೊಬ್ಬರಿಗೂ ಅವರವರ ಜೀವಮಾನದಲ್ಲಿ ಒಳ್ಳೆಯದು ಆಗಬೇಕೆಂದು ಇರುತ್ತದೆ. ಅದೇರೀತಿ ಒಳ್ಳೆಯ ಮಕ್ಕಳು ಆಗಿ ಒಳ್ಳೆಯ ಜನಾಂಗ ನಮ್ಮ ಆಗಬೇಕೆಂದು ನಮ್ಮ ದೇಶದಲ್ಲಿ ಪ್ರತಿಯೊಬ್ಬನಿಗೂ ಇಚ್ಛೆ ಇದೆ. ಈಸಾರಿ ಒಂದು ಬಹಳ ದುಃಖದ ಸಂಗತಿ ಎಂದರೆ, ನಾವೇನಾದರೂ ಕೆಲವರು ಹೋಗಿ ಹಾಗೆ ಹೀಗೆ ಕಷ್ಟ ಇದೆ, ಏನೇ ಆಗಲಿ ಸಾಲ ಆದರೂ ಮಾಡಿ ದುಡ್ಡು ಕೊಡುತ್ತೇವೆ ನಮಗೆ ಒಂದು ಸೀಟು ಕೊಡಿಸಿ ಎಂದು ಮುಖ್ಯ ಮಂತ್ರಿಗಳನ್ನು ಕೇಳಿದರೆ ಅವರಿಗೆ ಒಂದು ಸೀಟು ಕೊಡಿಸಲು ಅವಕಾಶ ಇತ್ತು. ಗಂಡು ಮಕ್ಕಳಿದ್ದವರು ನನ್ನ ಮಗ ಡಾಕ್ಟರ್ ಆಗಬೇಕೆಂಬ ಆಶೆ ಪ್ರತಿಯೊಬ್ಬ ಮಾತೆಗೂ ಅಥವಾ ತಂದೆಗೂ ಇರುತ್ತದೆ, ಅಂತಹ ಸಂದರ್ಭದಲ್ಲಿ ಯಾರಾದರೂ ಹೋಗಿ ಕೇಳಿದರೆ ಅವರಿಗೆ ಒಂದು ಸೀಟು ಕೊಡುವುದಕ್ಕೆ ಅವಕಾಶವಿತ್ತು, ಈಗ ಅದನ್ನು ಅವರು ಬಿಟ್ಟುಕೊಟ್ಟಿದ್ದಾರೆ, ಇದು ಬಹಳ ವ್ಯಥೆಪಡತಕ್ಕ ವಿಷಯವಾಗಿದೆ. ಏಕೆ ಬಿಟ್ಟುಕೊಟ್ಟಿದ್ದಾರೆ ಎಂಬುದು ಆಶ್ಚರ್ಯದ ಸಂಗತಿಯಾಗಿದೆ. ಯಾರಿಗೂ ಕೂಡ ವಂಚನೆ ಮಾಡಬಾರದು, ದ್ರೋಹ ಮಾಡಬಾರದು ಎಂಬುದು ಗೊತ್ತು. ಆದರೂ ಕೂಡ ಇದನ್ನು ತಾವು ಸ್ವಲ್ಪ ಕನ್‌ಸಿಡರ್ ಮಾಡಬೇಕು, ಕಲಿತ ಒಬ್ಬ ಹೆಣ್ಣು ಮಗಳು ಗಂಡ ಸತ್ತಿದ್ದರೆ, ಎಸ್.ಎಸ್.ಎಲ್.ಸಿ. ಪಾಸ್ ಮಾಡಿ ಪಿ.ಯು.ಸಿ. ಪಾಸ್. ಮಾಡಿ ಡಾಕ್ಟರ್ ಕೆಲಸಕ್ಕೆ ಸೇರಿ ತನ್ನ ಜೀವಮಾನವನ್ನು ಸುಧಾರಿತ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂದು ಇಚ್ಛೆಪಟ್ಟು ಸೀಟು ಕೇಳುವುದಕ್ಕೆ ಬಂದರೆ ಅಂಥವರಿಗೆ ಕನಿಕರ ಪಟ್ಟು ಸೀಟು ಕೊಡಿಸಿ. ಅವರು ಒಂದು ಸನ್ಮಾರ್ಗ ಹಿಡಿಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಅಂಥಾದಕ್ಕೆ ಕೆಲವು ಸೀಟುಗಳನ್ನು ಕೊಡುವುದಕ್ಕೆ ಇನ್ನು ಮುಂದಾದರೂ ಇಟ್ಟುಕೊಳ್ಳಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಬೌರಿಂಗ್ ಮತ್ತು ಲೇಡಿ ಕರ್ಜನ್ ಹಾಸ್ಪಿಟಲ್ ಮೊದಲಿನಿಂದಲೂ ಹೆಣ್ಣು ಮಕ್ಕಳಿಗೇ ಅಂತ ಇದ್ದದ್ದು. ಅದರಲ್ಲಿ ಈಗ ಒಂದು ಪೋಸ್ಟ್ ಹೆಣ್ಣು ಮಕ್ಕಳಿಗೆ ಉಂಟು ಅಂತ ಕೇಳುತ್ತಾ ಇದ್ದೇನೆ. ಅದನ್ನೂ ಕೂಡ ಅಬಾಲಿಷ್ ಮಾಡಬೇಕೆಂದು ಸರ್ಕಾರ ಅಥವಾ ಸರ್ಕಾರದ ಅಧಿಕಾರಿಗಳು ಸಲಹೆ ಮಾಡಿದ್ದಾರೆ, ಅದನ್ನೂ ತೆಗೆಯುತ್ತಾರೆ, ತೆಗೆದು ಗಂಡಸರೇ ಆ ಕೆಲಸವನ್ನೂ ಮಾಡಬೇಕೆಂದು ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಹೆಂಗಸರು ಮಾಡಬೇಕಾದ ಕೆಲಸವನ್ನು ಗಂಡಸರು ಮಾಡಬೇಕೆಂದು ಸಲಹೆ ಕೊಟ್ಟಿರುವುದು ಸರಿಯಲ್ಲ ಎಂದು ಹೇಳಿ ಈ ಮೂಲಕ ಒತ್ತಾಯಪಡಿಸುತ್ತಾ ಇದ್ದೇನೆ. ಹೆಂಗಸರ ಪೋಸ್ಟ್ ಏನಿದೆ ಅದನ್ನು ಖಾಯಂ ಆಗಿ ಇಡಬೇಕೆಂದು ಹೇಳುತ್ತೇನೆ. ರೂರಲ್ ಏರಿಯಾದಲ್ಲಿ ಡಾಕ್ಟರ್ಸ್ ಇಲ್ಲ, ಮಿಡ್‌ವೈಫ್ಸ್ ಇಲ್ಲ, ಈ ತೊಂದರೆಯನ್ನು ಕೂಡಲೇ ನಿವಾರಿಸಬೇಕೆಂದು ಹೇಳುತ್ತೇನೆ. ರೂರಲ್ ಏರಿಯಾದಲ್ಲಿ ಮಿಡ್‌ವೈಫ್ ಕಡಿಮೆಯಾಗಿರುವುದರಿಂದ ರೂರಲ್ ಏರಿಯಾಗಳಿಗೆ ತಾಲ್ಲೋಕುಬೋರ್ಡ್‌ಗಳಿಂದ ಅಪಾಯಿಂಟ್‌ಮೆಂಟ್‌ಗಳು ಸಿಕ್ಕುವುದಿಲ್ಲ. ನಮ್ಮ ತಾಲ್ಲೂಕು ಡಿ. ಹೆಚ್. ಓ. ಅವರಿಗೆ ತಾಲ್ಲೂಕು ಬೋರ್ಡಿನಿಂದ ಕಾಗದ ಬರೆಯುತ್ತಾ ಇದ್ದೇವೆ. ಅವರೂ ಕೂಡ ಮಿಡ್‌ವೈಫ್ ಸಿಕ್ಕುತ್ತಾ ಇಲ್ಲ ಎಂದು ಹೇಳುತ್ತಾರೆ. ಆದುದರಿಂದ ಇದಕ್ಕೆ ಒಂದು ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಹೇಳಿ ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

BUSINESS OF THE HOUSE

MR. SPEAKER.—Before I call upon the next Member, I want to say that yesterday, it was mentioned that certain questions which have been given for being answered as starred questions, there is delay in answering them. I may say that as on 7th July 1967, 315 replies are on hand that including four printed lists. Therefore, I propose to increase, if the Members agree, from 12 to 15 per day. Otherwise, some questions will not be answered.

HON'BLE MEMBERS.—Yes.

Mr. SPEAKER.—It will automatically cut down supplementaries. Normally, more than three supplementaries are not proper. But I am allowing 6 to 10 or 15 supplementaries in some cases. I will increase the number of questions from 12 to 15.

Sri H. SIDDAVEERAPPA.—Sir, you know the number of Questions already tabled, the number of days we have in future and also the questions that have now been answered. In view of that, I would suggest, even if you raise it to 20 per day, we are prepared to agree. In the Parliament, they take even 30 questions.

Mr. SPEAKER.—There the Members co-operate.

Sri H. SIDDAVEERAPPA.—Sir, you don't find a more co-operative House than ehis. What I am suggesting is, I am only anxious that answers are given before us. It does not matter even if you reduce the number of supplementaries to the barest minimum. But my own fear is some questions may not see the light of the day.

Mr. SPEAKER.—So, I will increase the number of questions from 12 to 15.

BUDGET ESTIMATES FOR 1967-68—DEMANDS FOR GRANTS

—Demand No 18

(Debate Continued)

ಶ್ರೀ ಕೆ. ಹೆಚ್. ಪಾಟೀಲ್ (ಗದಗ್).— ಮಾನ್ಯ ಸಭಾಪತಿಗಳೇ, ಹೋದ ಸಲ ಮೆಡಿಕಲ್‌ನಲ್ಲಿ 470 ಲಕ್ಷ ಇದ್ದದ್ದು ಇಂದು 607 ಲಕ್ಷದವರೆಗೆ ಬಜೆಟ್ ಹೆಚ್ಚಾಗಿದೆ. ಪಬ್ಲಿಕ್ ಹೆಲ್ತ್ 400 ಲಕ್ಷ ಇದ್ದದ್ದು ಇಂದು 527 ಲಕ್ಷ ಹೆಚ್ಚಾಗಿದೆ. ಜನಸಾಮಾನ್ಯರ ಹಿತದ ನೆಪದಿಂದ ಆರೋಗ್ಯ ಖಾತೆಯ ಬೇಡಿಕೆಗಳು ಹೆಚ್ಚಾಗುತ್ತಾ ಇದೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ ಈ ವಿಚಾರದಲ್ಲಿ ಕೆಲವು ಅಂಶಗಳನ್ನು ಮಾತ್ರ ಈ ಸಭೆಯ ಗಮನಕ್ಕೆ ತರುತ್ತೇನೆ, ಮತ್ತು ಈ ಬೇಡಿಕೆಯನ್ನು ವಿರೋಧಿಸುತ್ತೇನೆ.

ಈ ಕೊಳಚೆಯ ಪ್ರದೇಶದಲ್ಲಿ ವಾಸಿಸುವಂಥವರು ಬೆಂಗಳೂರಿನಲ್ಲಿ ಆಗಲಿ, ಹುಬ್ಬಳ್ಳಿಯಲ್ಲಾಗಲಿ, ಗದಗ್‌ನಲ್ಲಿ ಆಗಲಿ ಹೇಗಿದ್ದಾರೆ? ಅವರು ನಿಜವಾಗಿಯೂ ವಾಸಮಾಡುವುದಕ್ಕೆ ಯೋಗ್ಯತೆ ಆದಂಥಾ ಸ್ಥಳ ಇಲ್ಲವೆ! ಅಲ್ಲಿ ವಾಸ ಮಾಡತಕ್ಕಂಥವರು ನಿಜವಾಗಿ ಮನುಷ್ಯರೇ, ಈ ವಿಚಾರ ಆರೋಗ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಮುಖ್ಯ ಮಂತ್ರಿಗಳು ಮಾತ್ರ ಗಮನಿಸಿದ್ದಾರೆ. ಆದುದರಿಂದ ಮಾನ್ಯ ಮಂತ್ರಿಗಳು ಅವರ ಕಡೆ ಹೆಚ್ಚು ನಿಗಾ ವಹಿಸಿ ಅವರ ಸ್ಥಿತಿಗಳನ್ನು ಉತ್ತಮಪಡಿಸಲು ಶ್ರಮಿಸುತ್ತಾರೆಂದು ನಾನು ನಂಬಿದ್ದೇನೆ.

Sri K. PUTTASWAMY.—The Hon'ble. member may request Gadag Municipality to send a proposal.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಆರೋಗ್ಯ ಮಂತ್ರಿಗಳಿಗೆ ನನ್ನ ಒಂದು ವಿಜ್ಞಾಪನೆ ಸಲ್ಲಿಸಿ ಈಗಾಗಲೇ ಗದಗ್ ಮುನಿಸಿಪಾಲಿಟಿಯವರು ಪ್ರಪೋಸಲ್ಸ್ ಕಳುಹಿಸಿಕೊಡುವುದರಲ್ಲಿದ್ದಾರೆ. ಅದನ್ನು ಮಂತ್ರಿವರ್ಯರು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾರೆಂದು ನಂಬಿದ್ದೇನೆ. ಮತ್ತು ನಿಷ್ಕಾರಣವಾಗಿ ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡಿಸುವುದರ ಬದಲಾಗಿ ಈ ವಿಚಾರದಲ್ಲಿ ಹೆಚ್ಚು ನಿಗಾವಹಿಸಿ ಅವರು ಕಳುಹಿಸಿಕೊಡುವ ಪ್ರಪೋಸಲ್ಸ್ ಸಹಾನುಭೂತಿಯಿಂದ ಪರಿಶೀಲಿಸುವರೆಂದು ನಂಬಿದ್ದೇನೆ.

ಇನ್ನು ಪ್ರೈಮರಿಹೆಲ್ತ್ ಯೂನಿಟ್‌ಗಳ ವಿಚಾರದಲ್ಲಿ ಹೇಳುವುದಾದರೆ ನಮ್ಮ ತಾಲ್ಲೂಕಿಗೆ 1–2ರ ಮೇಲೆ ಹೆಚ್ಚಾಗಿ ಕೊಟ್ಟಿಲ್ಲ. ತಾಲ್ಲೋಕು ಬೋರ್ಡುಗಳಿಗೆ ಹೆಚ್ಚು ಹಣ ಇಲ್ಲದ್ದರಿಂದ ಅವರು ಈ ವಿಚಾರದಲ್ಲಿ ಮುಂದೆ ಬರುವುದಕ್ಕೆ ಸಾಧ್ಯ ಇಲ್ಲದೆ ಹೋಗಿದೆ. ಎಲ್ಲಿ ತಾಲ್ಲೋಕು ಬೋರ್ಡುಗಳು ಹಣವನ್ನು ಕೊಡುವುದಕ್ಕೆ ಮುಂದೆ ಬಂದಿರುತ್ತಾರೋ ಅಂತಹವರಿಗೆ ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಮೆಡಿಕಲ್ ಕಾಲೇಜುಗಳಿಗೆ ಸೀಟುಗಳನ್ನು ಹಂಚುವ ವಿಷಯದಲ್ಲಿ ತಮ್ಮನ್ನು ಅಭಿನಂದಿಸ ಬೇಕಾಗಿದೆ. ಅಲ್ಲಿ ಸೀಟುಗಳ ಹಂಚಿಕೆಯ ವ್ಯವಸ್ಥೆಯಲ್ಲಿ ಅನೇಕ ನ್ಯೂನಾತಿರೇಕಗಳನ್ನು ತಾವು ಸರಿಪಡಿಸಿದ್ದೀರಿ. ನಮ್ಮ ಮೈಸೂರು ರಾಜ್ಯದಲ್ಲಿ 3 ಯೂನಿವರ್ಸಿಟಿಗಳು ಇವೆ. ಅವರು ಅವರವರ ನೀತಿಗೆ ಅನುಸಾರವಾಗಿ ಪರೀಕ್ಷೆಗಳಲ್ಲಿ ಗುಣಗಳನ್ನು ಕೊಡುತ್ತಾ ಇದ್ದರು. ಅದರಲ್ಲಿ ಹೆಚ್ಚು ಏರು ಪೇರುಗಳು ಸಹ ಇರುತ್ತಿದ್ದವು. ಆದರೂ ಕೂಡ ಸೀಟುಗಳ ಹಂಚಿಕೆ ವಿಚಾರವಾಗಿ ರೀಜನಲ್ ರೆಪ್ರೆಸೆಂಟೇಷನ್‌ನ್ನು ಗಮನವಲ್ಲಿಟ್ಟುಕೊಳ್ಳುವುದು ಅಗತ್ಯ ಎಂದು ನಾನು ಸೂಚಿಸಬಯಸುತ್ತೇನೆ.

ಇನ್ನು ಅಲೋಪಥಿಕ್ ವಿಚಾರದಲ್ಲಿ ಬೇಕಾದಷ್ಟು ಹೇಳಿದ್ದಾರೆ. ಅದರ ವಿಚಾರವಾಗಿ ಹೇಳು ವುದಿಲ್ಲ. ಆದರೆ ಮುಖ್ಯಮಂತ್ರಿಗಳು ಆಯುರ್ವೇದ ವಿಚಾರದಲ್ಲಿ ಕೆಲವು ಅಂಶಗಳನ್ನು ಅನೇಕ ಸಲ ಹೇಳಿದ್ದಾರೆ. ನಾನು ಹೇಳುವುದಾದರೆ ಆಯುರ್ವೇದವನ್ನು ಹೆಚ್ಚು ಬಲಪಡಿಸಬೇಕು ಎಂದು ಹೇಳುತ್ತೇನೆ. ಅದಕ್ಕಾಗಿ ಸರ್ಕಾರದವರು ಹೆಚ್ಚು ಹೆಚ್ಚು ಆಯುರ್ವೇದ ಕಾಲೇಜುಗಳನ್ನು ಸ್ಥಾಪಿಸಿ ಅಲ್ಲಿಂದ ತಯಾರಾಗಿ ಬರತಕ್ಕ ಡಾಕ್ಟರುಗಳಿಗೆ ಹೆಚ್ಚು ಉತ್ತೇಜನ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನೊಂದು ಮಾತು ಹೇಳುತ್ತೇನೆ. ಗದಗ್ ಮುನಿಸಿಪಾಲಿಟಿ ಹಾಸ್ಪಿಟಲ್ ಇದೆ. ಅದನ್ನು ಕಾಲೇಜು ಹಾಸ್ಪಿಟಲ್ ಆಗಿ ಮಾಡಬೇಕೆಂದು ಕೇಳಿಕೊಂಡು ಈ ಸಂಧರ್ಭದಲ್ಲಿ ತಗಲುವ ವೆಚ್ಚ ಎಷ್ಟು ಬೇಕಾದರೂ ಕೊಡುತ್ತೇವೆಂದು ಹೇಳಿದ್ದಾರೆ. ಈಗಾಗಲೇ ಅದರ ಒಂದು ಪ್ರಪೋಸಲ್ ಇದೆ. ಆ ಪ್ರಪೋಸಲ್ ಈಗಾಗಲೇ ಬಹಳ ವರ್ಷದಿಂದ ಪೆಂಡಿಂಗ್‌ನಲ್ಲಿ ಇದೆ. ಮಾನ್ಯ ಮಂತ್ರಿ ಗಳಲ್ಲಿ ನಾನು ಕೇಳಿಕೊಳ್ಳುವುದು ಏನೆಂದರೆ ನ್ಯಾಯಬದ್ಧವಾದ ಈ ಬೇಡಿಕೆಯನ್ನು ಸಾಧ್ಯ ವಾದಷ್ಟು ಶೀಘ್ರದಲ್ಲೇ ಹೆಚ್ಚು ಸಹಾನುಭೂತಿಯಿಂದ ಪರಿಶೀಲಿಸಿ ಆ ಆಸ್ಪತ್ರೆಯನ್ನು ಅಪ್‌ಗ್ರೇಡ್ ಆಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಗದಗ್ ಬಹಳ ಮುಖ್ಯವಾದ ಪ್ರದೇಶ. ಗದಗ್‌ನಲ್ಲಿರುವ ವೀರನಾರಾಯಣಸ್ವಾಮಿಯವರ ಹೆಸರನ್ನು ಕೇಳದವರೇ ಇಲ್ಲ. ಅದು ಪವಿತ್ರಸ್ಥಳ ಅಲ್ಲಿ ಪುರಾತನ ವಾದ ಕೈಗಾರಿಕೆಗಳು ಇವೆ. ಹೀಗಿರುವಾಗ ಗದಗಿಗೆ ಬೇಕಾದಂಥ ಬೇಡಿಕೆಗಳು ಸಾಕಷ್ಟು ಇವೆ. ಅವುಗಳಲ್ಲಿ ಹಾಸ್ಪಿಟಲ್ ಅಪ್‌ಗ್ರೇಡ್ ಮಾಡಬೇಕೆಂಬುದೂ ಒಂದು. ಇದರಲ್ಲಿ ಯಾವ ರಾಜಕೀಯಕ್ಕೂ ಆಸ್ಪದ ಕೊಡದೆ ಈ ಆಸ್ಪತ್ರೆಯನ್ನು ತೀವ್ರವಾಗಿ ಅಪ್‌ಗ್ರೇಡ್ ಮಾಡಬೇಕೆಂದು ಹೇಳಿ ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸೋಲೂರು ಸಿದ್ದಪ್ಪ (ಕುದೂರ್).—ಮಾನ್ಯ ಸಭಾಪತಿಗಳೇ, ಈ ವರ್ಷ ನಮ್ಮ ಮುಂದೆ ಇಟ್ಟಿರತಕ್ಕಂಥ ಆರೋಗ್ಯ ಖಾತೆಯ ಬೇಡಿಕೆಯನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಸ್ವಾಮಿ, ಅನೇಕ ಸ್ನೇಹಿತರು ಆರೋಗ್ಯದ ವಿಚಾರದಲ್ಲಿ ಅನೇಕ ಸಲಹೆಗಳನ್ನು ನೀಡಿದ್ದಾರೆ. ಅದರಲ್ಲಿ ನನ್ನ ಸಲಹೆ ಏನೆಂದರೆ ಆಸ್ಪತ್ರೆಗಳಲ್ಲಿ ಕೆಲವು ಕಡೆ ಡಾಕ್ಟರುಗಳು ಇಲ್ಲ. ಕೆಲವು ಕಡೆ ಬಿಲ್ಡಿಂಗ್ಸ್ ಇಲ್ಲ ಇದಕ್ಕೆ ಸರ್ಕಾರದವರು ಏರ್ಪಾಡುಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ, ಮಿಂಟೋ ಆಸ್ಪತ್ರೆ ಮತ್ತು ವಾಣಿವಿಲಾಸ ಆಸ್ಪತ್ರೆ, ಈ ಮೂರು ಆಸ್ಪತ್ರೆಗಳು ಒಂದೆ ಕಡೆ ಇವೆ. ಆದರೂ ಅಲ್ಲಿಗೆ ರೋಗಿಗಳು ನೂರಾರು ಸಂಖ್ಯೆಯಷ್ಟು ಬರುತ್ತಾರೆ. ಇದರಿಂದ ರೋಗಿಗಳಿಗೆ ಸ್ಥಳ ಇಲ್ಲದೆ, ಅನಾನುಕೂಲವಾಗುತ್ತಾ ಇವೆ. ಇದಕ್ಕೆ ನನ್ನ ಖಚಿತ ಅಭಿಪ್ರಾಯ ಏನೆಂದರೆ, ಈ ತರಹ ಆಸ್ಪತ್ರೆಗಳು ಬಹಳ ವಿಶಾಲವಾದ ಪ್ರದೇಶದಲ್ಲಿ ಇದ್ದಿರ ಬೇಕಾಗಿತ್ತು. ಆದರೆ ಕಾರಣಾಂತರದಿಂದ ಮಾರ್ಕೆಟ್ ಮುಂಭಾಗದಲ್ಲಿ ಇದೆ. ಇದನ್ನು ಬೇರೆ ಕಡೆ ವರ್ಗಾಯಿಸಬೇಕು. ಇದರಿಂದ ಜನರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಮತ್ತು ರೋಗಿಗಳಿಗೆ ಇರತಕ್ಕಂಥ ಅನಾನುಕೂಲಗಳನ್ನು ನಿವಾರಣೆಯಾಗಬೇಕಾದರೆ ರೋಗಿಗಳಿಗೆ ಔಷಧಿ ಸಿಕ್ಕುತ್ತಾ ಇಲ್ಲ ಎಂಬ ವಿಚಾರ ಸರ್ವೇಸಾಮಾನ್ಯವಾಗಿ ಕೇಳಿಬರುತ್ತಿದೆ. ಇದನ್ನು ನಾನಾ ಕಾರಣಗಳಿಂದ ಆಸ್ಪತ್ರೆಯಲ್ಲಿರತಕ್ಕ ಅಧಿಕಾರ ವರ್ಗದವರು ದುರುಪಯೋಗ ಮಾಡಿ ಸರ್ಕಾರದವರು ಬಡಜನರಿಗೆ ಒದಗಿಸಿದ್ದ ಔಷಧಿಗಳನ್ನು ಅವರಿಗೆ ಕೊಡದೆ ಅವರಿಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆ. ಸರ್ಕಾರದವರು ಇದನ್ನು ತಪ್ಪಿಸಬೇಕೆಂದು ಮನವಿ ಮಾಡಿಕೊಳ್ಳು ತ್ತೇನೆ. ಆಗಲೇ ಶ್ರೀ ಎ. ಮುನಿಯಪ್ಪನವರು ಯಾವುದೋ ಒಂದು ಹೊಸ ಆಸ್ಪತ್ರೆಯಲ್ಲಿ ಬಿದ್ದಿದ್ದರೆ

(ಶ್ರೀ ಸೋಲೂರು ಸಿದ್ದಪ್ಪ)

ಅದನ್ನು ವಿಲೇವಾರಿ ಮಾಡುವುದಕ್ಕಾದರೂ ಸಹಾ ಅಲ್ಲಿ ಒಬ್ಬ ಡಾಕ್ಟರೂ ಕೂಡ ಇರಲಿಲ್ಲ ಎಂಬುದಾಗಿ ಹೇಳಿದರು. ಹೀಗೆ ಡ್ಯೂಟಿಯಲ್ಲಿರತಕ್ಕ ಡಾಕ್ಟರುಗಳು ಹಾಜರಿಲ್ಲದಿದ್ದರೆ ರೋಗಿಗಳ ಗತಿಯೇನಾಗಬೇಕು? ಡಾಕ್ಟರುಗಳು ಒಂದುವೇಳೆ ರಜಾ ಹೋಗಬೇಕಾಗಿದ್ದರೂ ಜಿಲ್ಲಾ ಕಸಬಾಗಳಲ್ಲಿರತಕ್ಕ ಜಿಲ್ಲಾ ಹೆಲ್ತ್ ಆಫೀಸರ ಅಪ್ಪಣೆಯಿಲ್ಲದೆ ಯಾರೂ ರಜಾ ಹೋಗದಂತೆ ಆಜ್ಞೆ ಮಾಡಬೇಕಾದ್ದೂ ಕೂಡ ಅಗತ್ಯವೆಂದು ಹೇಳುತ್ತೇನೆ. ಸರ್ಕಾರದವರು ಪ್ರಜೆಗಳ ಅನುಕೂಲಕ್ಕಾಗಿ ಅನೇಕ ಕಡೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದ್ದಾರೆ. ತಮಗೆ ತಿಳಿದಿರುವ ಹಾಗೆ ಮಂಡ್ಯ ಜಿಲ್ಲೆಯಲ್ಲಿ ಕಾಲರಾ, ಮಲೇರಿಯಾ ವಗೈರೆ ಕಾಯಿಲೆಗಳಿಂದ ಅಲ್ಲಿ ವಾಸಮಾಡುವುದೇ ಬಹಳ ಕಠಿಣವಾಗಿತ್ತು. ಆದರೆ ಈ ದಿವಸ ಆ ಯಾವ ಒಂದು ರೋಗಾದಿಗಳ ಉದ್ಭವಕ್ಕೆ ಅವಕಾಶವಿಲ್ಲದಂತೆ ರೋಗಗಳನ್ನು ತಡೆಗಟ್ಟಿ ಜನರಿಗೆ ಬಹಳ ಅನುಕೂಲ ಮಾಡಿಕೊಟ್ಟಿದ್ದಾರೆ. ಇಷ್ಟೆಲ್ಲಾ ಅನುಕೂಲಗಳನ್ನು ಸರ್ಕಾರದವರು ಮಾಡಿಕೊಡುತ್ತಿದ್ದರೂ ನಮ್ಮ ಎದುರು ಪಕ್ಷದವರು ಯಾವತ್ತೂ ಸರ್ಕಾರವನ್ನು ಅವಹೇಳನ ಮಾಡತಕ್ಕ ಪಾಠವೊಂದನ್ನು ಅವರು ಚೆನ್ನಾಗಿ ಮಾಡುತ್ತಿದ್ದಾರೆ. ಆದರೆ ಇನ್ನು ಮುಂದಕ್ಕಾದರೂ ಅವರು ಶಾಂತಿಯಿಂದ ಕಾದು ನೋಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಗಳೇ, ದೇಶದಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಆಸ್ಪತ್ರೆಗಳಿಲ್ಲ. ನನ್ನ ಕ್ಷೇತ್ರದಲ್ಲೇ ಸೋಮಪುರ ಹೋಬಳಿಯಲ್ಲಿ ಅಲ್ಲಿ ಒಬ್ಬ ದಾನಿಗಳು 8000 ರೂಪಾಯಿಗಳನ್ನು ಅಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಲು ದಾನಮಾಡಿ ಇಲ್ಲಿಗೆ ೮ ವರ್ಷಗಳಾಯಿತು. ನಾನು ಮುಖ್ಯಮಂತ್ರಿಗಳಲ್ಲಿ ಈ ವಿಚಾರವಾಗಿ ಪ್ರಾರ್ಥನೆ ಮಾಡಿಕೊಂಡೆನು. ಆದರೆ ಅಲ್ಲಿ ಕೆಲಸವಿನ್ನೂ ಆಗಿಲ್ಲ. ಇದೇ ರೀತಿ ಇನ್ನೊಂದು ಕಡೆ ಅಂದರೆ ಸಂಕೇಘಟ್ಟದಲ್ಲಿ ಒಂದು ಆಸ್ಪತ್ರೆಯ ಆಸ್ತಿಭಾರವನ್ನು ಶ್ರೀಮಾನ್ ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗ ಹಾಕಿದರು. ಅದನ್ನು ಆಸ್ತಿಭಾರ ಹಾಕಿ ಇಲ್ಲಿಗೆ 8 ವರ್ಷಗಳಾಯಿತು. ಕೆಲಸವಿನ್ನೂ ಆಗಲಿಲ್ಲ. ಆ ಕಟ್ಟಡಕ್ಕಾಗಿ 8000 ರೂಪಾಯಿಗಳನ್ನು ದಾನ ಮಾಡಿದ್ದಾರೆ. ಇಲ್ಲಿಯ ಕೆಲಸ ಇಂಜಿನಿಯರಿಂಗ್ ಇಲಾಖೆಯಿಂದಲೋ ಅಥವಾ ಮೆಡಿಕಲ್ ಇಲಾಖೆಯಿಂದಲೋ ಅಂತೂ ಯಾರಿಂದಲೋ ಏಕೆ ತಡ ಆಗಿದೆ ಎಂಬುದು ತಿಳಿಯದಾಗಿದೆ. ಆದರೆ ಅಲ್ಲಿಯ ಡೋನಾರ್ ಆ ಆಸ್ಪತ್ರೆಯ ಕಟ್ಟಡವನ್ನು ನೋಡಿ ಶಾಂತಿಯಿಂದ ಪ್ರಾಣಬಿಡಬೇಕೆಂದಿದ್ದಾರೆ. ಆದುದರಿಂದ ಅಲ್ಲಿ ಒಂದು ಆಸ್ಪತ್ರೆಯನ್ನು ಬೇಗ ಪ್ರಾರಂಭ ಮಾಡಬೇಕೆಂದು ಸರ್ಕಾರದವರಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದೇಶಾದ್ಯಂತವೂ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ, ನರ್ಸುಗಳಿಲ್ಲ. ಈ ಕೊರತೆಯನ್ನು ಬೇಗ ನಿವಾರಣೆ ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನೂ ಸರ್ಕಾರ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ತಾಲ್ಲೂಕಿನಲ್ಲಿ ತಾವರೆಕೆರೆ ಎಂಬ ಗ್ರಾಮದಲ್ಲಿ ಡೋನರ್ ದುಡ್ಡು ಕಟ್ಟಿ ಅಲ್ಲಿ ಕಟ್ಟಡದ ಕೆಲಸವೆಲ್ಲಾ ಮುಗಿದಿದ್ದರೂ ಅಲ್ಲಿಗೆ ಆಸ್ಪತ್ರೆಯನ್ನು ಮಂಜೂರು ಮಾಡಿದ್ದರೂ ಡಾಕ್ಟರನ್ನು ಇನ್ನೂ ಅಲ್ಲಿಗೆ ಪೋಸ್ಟ್ ಮಾಡಿಲ್ಲ. ಈ ವಿಚಾರದಲ್ಲಿ ನಾವು ಕಳೆದ 7-8 ವರ್ಷಗಳಿಂದ ಮನವಿಗಳನ್ನು ಮಾಡಿಕೊಳ್ಳುತ್ತಲೇ ಬಂದಿದ್ದರೂ ಅಲ್ಲಿ ಇನ್ನೂ ಕೆಲಸವಾಗಿಲ್ಲ. ದೇಶಾದ್ಯಂತವೂ 25 ಸಾವಿರ ಜನಸಂಖ್ಯೆಗಳಿಗೆ ಒಂದು ಆಸ್ಪತ್ರೆ ಇರಬೇಕೆಂದು ಹೇಳುತ್ತಿರುವಾಗ ಜನರ ಬಗ್ಗೆ ಒಂದು ಅಭಿಮಾನವನ್ನು ಇಟ್ಟು ಹೇಳುವುದಾದರೆ ಕನಿಷ್ಠ ಪಕ್ಷ 30 ಸಾವಿರ ಜನರಿಗಾದರೂ ಒಂದು ಆಸ್ಪತ್ರೆ ಇರಲೇಬೇಕು. ಈ ದಾನಾಪಾದವರಲ್ಲಾದರೂ ಜನರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸತಕ್ಕದ್ದು ಸರ್ಕಾರದವರ ಧರ್ಮ. ಇವುಗಳನ್ನು ಒಂದು ಕ್ರಮಬದ್ಧವಾದ ರೀತಿಯಲ್ಲಿ, ನ್ಯಾಯಬದ್ಧವಾದ ರೀತಿಯಲ್ಲಿ ಹಂಚಬೇಕಾದ್ದು ಸರ್ಕಾರದವರ ಕರ್ತವ್ಯ. ಅನೇಕ ಆಸ್ಪತ್ರೆಗಳಲ್ಲಿ ಸಾಕಷ್ಟು ಬೆಡ್‌ಗಳಿಲ್ಲ. ರೋಗಿಗಳಿಗೆ ಹಾಲು, ರೊಟ್ಟಿಯನ್ನು ಒದಗಿಸತಕ್ಕ ಬಾಬನ್ನು ಕಂಟ್ರಾಕ್ಟರಿಗೆ ಕೊಡಲಾಗಿದೆ. ಅವರು ಅದನ್ನು ಕಾನೂನು ರೀತಿ ಮಾಡುತ್ತಿಲ್ಲ. ಆದುದರಿಂದ ಅದನ್ನು ತಪ್ಪಿಸಿ ಇನ್ನು ಮುಂದೆ ಸರ್ಕಾರದವರೇ ರೋಗಿಗಳಿಗೆ ಹಾಲು ರೊಟ್ಟಿಯನ್ನು ಒದಗಿಸುವುದು, ಅಂಥಾ ಒಂದು ಕಾರ್ಯಕ್ರಮ ಹಾಕಿಕೊಳ್ಳತಕ್ಕದ್ದು ಅಗತ್ಯ ಎಂಬುದಾಗಿ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ : ಸರ್ಕಾರದವರು ಪ್ರತಿಯೊಂದು ಆಸ್ಪತ್ರೆಗೂ ಮೂರು ಜನರು ಇರತಕ್ಕ ಒಂದು ವಿಜಿಟರುಗಳ ಕಮಿಟಿಯನ್ನು ನೇಮಿಸಬೇಕು. ಅವರು ತಪ್ಪದಂತೆ ವಾರಕ್ಕೆ ಒಂದಾವರ್ತಿ ಇಲ್ಲವೇ ಹದಿನೈದು ದಿನಗಳಿಗೊಂದಾವರ್ತಿ ಅಲ್ಲಿ ಸೇರಿ ವಿಚಾರಗಳನ್ನು ವಿಮರ್ಶೆಮಾಡಿ ಆ ಆಸ್ಪತ್ರೆಗಳ ನಿಗಾ ನೋಡುವುದಕ್ಕೆ ಮಾರ್ಗ ಮಾಡಿದರೆ ಬಹಳ ಅನುಕೂಲವಾಗುತ್ತದೆಂದು ನಾನು ಭಾವಿಸಿದ್ದೇನೆ. ನಮ್ಮ ಮೈಸೂರು ರಾಜ್ಯದ 20 ಜಿಲ್ಲೆಗಳಲ್ಲಿ ಅನೇಕ ಆಸ್ಪತ್ರೆಗಳಿದ್ದರೂ, ನೇಮಕವಾದ ರೀತಿಯಲ್ಲಿ ಅಲ್ಲಿ ಕೆಲಸಕಾರ್ಯಗಳು ನಡೆಯುತ್ತಿಲ್ಲ. ಅಲ್ಲ ರೋಗಿಗಳಿಗೆ ಸರಿಯಾದ ಉಪಚಾರಗಳು ನಡೆಯು

ತ್ರಿವೆಯೋ ಇಲ್ಲವೇ ಎಂಬುದನ್ನು ನೋಡಿ ಆಗಾಗ್ಗೆ ತಕ್ಕ ತಿಳುವಳಿಕೆಯನ್ನು ಕೊಡಲು ಈ ವಿಜಿಟರ್ಸ್ ಕಮಿಟಿಗಳು ಅತ್ಯಗತ್ಯ. ಇನ್ನು ಅನೇಕ ಕಡೆಗಳಲ್ಲಿ ಆಸ್ಪತ್ರೆಗಳು ಪ್ರೈವೇಟ್ ಕಟ್ಟಡಗಳಲ್ಲಿವೆ. ನನಗೆ ತಿಳಿದಿರುವಂತೆ ಸುಮಾರು 40-50 ಆಸ್ಪತ್ರೆಗಳು ಪ್ರೈವೇಟ್ ಬಿಲ್ಡಿಂಗುಗಳಲ್ಲಿವೆ. ಅವುಗಳನ್ನು ಆದಷ್ಟು ಬೇಗ ಸರ್ಕಾರಿ ಕಟ್ಟಡಗಳನ್ನು ಮಾಡಿ ಅಲ್ಲಿಗೆ ವರ್ಗಾಯಿಸಬೇಕೆಂದು ಹೇಳುತ್ತೇನೆ. ಮೈಸೂರು ರಾಜ್ಯವು ಮೊದಲಿಂದಲೂ ಆಸ್ಪತ್ರೆಗಳನ್ನು ಕಟ್ಟಿಸುವುದರಲ್ಲಿಯೂ, ರೋಗಿಗಳಿಗೆ ಒಳ್ಳೆಯ ಔಷಧೋಪಚಾರಗಳನ್ನು ನೀಡುವುದರಲ್ಲಿಯೂ ಹೆಸರನ್ನು ಗಳಿಸಿ ಬಹಳ ಯಶಸ್ಸನ್ನು ಪಡೆದಿದೆ. ಆದರೆ ಇತ್ತೀಚೆಗೆ ಮೈಸೂರು ರಾಜ್ಯವು ಕರ್ಣಾಟಕವಾದ ಮೇಲೆ ಇದರ ಪ್ರಜಾ ಸಂಖ್ಯೆ ಮೂರುವರೆ ಕೋಟಿಗೇರಿದೆ. ಆದುದರಿಂದ ಈಗ ದೇಶದಲ್ಲಿ ಹೆಚ್ಚು ಆಸ್ಪತ್ರೆಗಳು ಆಗಬೇಕಾದ್ದು ಅವಶ್ಯಕ. ಆದರೆ ಇದನ್ನಿನ್ನೂ ಮಾಡಿಲ್ಲ. ಇದನ್ನು ಕೂಡಲೇ ಕೈಗೊಳ್ಳಬೇಕಾದ್ದು ಅಗತ್ಯವೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಆರೋಗ್ಯ ಮಂತ್ರಿಗಳು ರೈತರ ಮಕ್ಕಳು ; ಹಾಗೂ ವಿದ್ಯಾವಂತರು ಮತ್ತು ಅಭಿಮಾನಶಾಲಿಗಳು. ಇವರು ಜನರ ಬಗ್ಗೆ ಕನಿಕರವನ್ನು ಇಟ್ಟು ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ ಮುಂದಿನ ವರ್ಷ ಇಲ್ಲಿ ನಾವು ಸೇರಿದಾಗ ಜನರಿಂದ ಹೆಚ್ಚಿನ ಗರಾಜೆಗೆ ಅವಕಾಶಕೊಡದಂತೆ ಅವರು ಕೆಲಸಗಳನ್ನು ಕೈಗೊಂಡು, ಈ ಸಭೆಯ ಸದಸ್ಯರಿಂದ ಅವರು ಒಂದು ಹೆಚ್ಚಿನ ಗೌರವವನ್ನು ಸಂಪಾದಿಸತಕ್ಕ ರೀತಿಯಲ್ಲಿ ಕೆಲಸ ಮಾಡುತ್ತಾರೆಂದು ಆಶಿಸುತ್ತೇನೆ.

ಇನ್ನು ಲಂಚರುಷುವತ್ತುಗಳ ಬಗ್ಗೆ ಅನೇಕರು ಹೇಳಿದ್ದಾರೆ. ಆದುದರಿಂದ ನಾನು ಅದರ ಬಗ್ಗೆ ಪುನರ್‌ಪಠಣೆ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರದವರು ಆಸ್ಪತ್ರೆಗಳಲ್ಲಿ ರೋಗಿಗಳಿಗಾಗಿ ಒದಗಿಸತಕ್ಕ ಔಷಧಿಗಳನ್ನು ಮತ್ತು ಇತರೇ ಸಾಮಾನುಗಳನ್ನು ಕದ್ದು ಮಾರುವುದಕ್ಕೆ ಅವಕಾಶ ಕೊಡದಂತೆ ವೈದ್ಯಾಧಿಕಾರಿಗಳ ತಡೆಗಟ್ಟಬೇಕಾದ್ದು ಅವರ ಮುಖ್ಯ ಕರ್ತವ್ಯ. ಈ ದಿವಸ ಸರ್ಕಾರದವರು ಅಲ್ಲಲ್ಲೇ ಕೊಟ್ಟಿರತಕ್ಕ ಆರೋಗ್ಯ ಕೇಂದ್ರಗಳೇನಿವೆ ಅವುಗಳನ್ನು ಪರಿಪೂರ್ಣಗೊಳಿಸುವುದಕ್ಕಾಗಿ ಅವುಗಳಿಗೆ ಟೂರಿಸ್ಟ್ ವ್ಯಾನ್ ಸೌಕರ್ಯಗಳನ್ನು ಒದಗಿಸಿ ಔಷಧಿಗಳು ಬಡ ಜನರಿಗೆ ದೊರೆಯುವಂತೆ ಮಾಡಬೇಕಾದ್ದು ಅತ್ಯಗತ್ಯ. ಇದನ್ನು ನಾವು ಇದೇ ವೇದಿಕೆ ಮೇಲೆ ದೇಶದಲ್ಲಿ ಟೂರಿಸ್ಟ್ ಆಸ್ಪತ್ರೆಗಳನ್ನು ತೆರೆಯಬೇಕಾದ್ದು ಅತ್ಯಗತ್ಯ ಎಂದು ಅನೇಕಾವರ್ತಿ ಹೇಳಿದ್ದೇವೆ. ಪ್ರತಿಯೊಂದು ಆರೋಗ್ಯ ಕೇಂದ್ರಕ್ಕೂ ಒಂದೊಂದು ಟೂರಿಸ್ಟ್ ಬಸ್ ಇರಲೇ ಬೇಕು. ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಅವುಗಳಿಗೆ ವಾಹನ ಸೌಕರ್ಯಗಳನ್ನು ಒದಗಿಸಬೇಕಾದ್ದು ಅತ್ಯಗತ್ಯ ಎಂದು ನಾನು ಭಾವಿಸಿದ್ದೇನೆ.

ಇನ್ನು ರಾಷ್ಟ್ರೀಯ ಯೋಜನೆಯ ಬಗ್ಗೆ ಅಲ್ಲಿಯ ನೌಕರರಿಗೆ ವಸತಿಸೌಕರ್ಯಗಳನ್ನು ಎಲ್ಲರಿಗೂ ಕಲ್ಪಿಸಿಕೊಟ್ಟಿದ್ದಾರೆ. ಆದರೆ ಎಲ್ಲಿ ಹಗಲೂ ರಾತ್ರಿ ಜನಸೇವೆ ಮಾಡುತ್ತಾರೋ ಅವರಿಗೆ ಈ ಸೌಲಭ್ಯವಿಲ್ಲ. ಇದು ಬಹಳ ಅನ್ಯಾಯ. ಇದನ್ನು ಮಾನ್ಯ ಮಂತ್ರಿಗಳು ತಮ್ಮ ಗಮನಕ್ಕೆ ತೆಗೆದುಕೊಂಡು ಆಸ್ಪತ್ರೆಗಳಲ್ಲಿ ಕೆಲಸದಲ್ಲಿರತಕ್ಕವರಿಗೂ ವಸತಿಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾದ್ದು ತೀರಾ ಅತ್ಯಗತ್ಯ. ಆದರೆ ಇವುಗಳನ್ನೆಲ್ಲಾ ಕಾರ್ಯಗತ ಮಾಡುವುದಕ್ಕೆ ಬಜೆಟ್ಟಿನಲ್ಲಿ ಒದಗಿಸಿರತಕ್ಕ ಹನ್ನೊಂದೂವರೆ ಕೋಟಿ ರೂಪಾಯಿಗಳು ಸಾಲದು. ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಒದಗಿಸಿ ಪ್ರಜೆಗಳಿಗೆ ವೈದ್ಯಕೀಯ ಸೌಲಭ್ಯಗಳು ಸುಲಭವಾಗಿ ಸಿಗುವಂತೆ ಮಾಡಬೇಕಾದ್ದು ಅತ್ಯಗತ್ಯ ಎಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಕ್ಷಯರೋಗದ ಆಸ್ಪತ್ರೆಗೆ ಕಟ್ಟಡ ಸಾಲದು. ರೋಗಿಗಳು ಕ್ಯೂನಲ್ಲಿ ನಿಲ್ಲಬೇಕಾಗಿದೆ. ಮೂರು ತಿಂಗಳಾದರೂ ಅವಕಾಶ ಸಿಕ್ಕುವುದಿಲ್ಲ. ಅನೇಕರಿಗೆ ಸ್ಥಳ ಸಿಕ್ಕದೆ ಕೆಲವರು ಕ್ಯೂನಲ್ಲಿ ನಿಂತೇ ಸತ್ತು ಹೋದರು. ಈ ವಿಚಾರ ಸರ್ಕಾರದವರಿಗೂ ಗೊತ್ತಿದೆ. ಆದ್ದರಿಂದ ಸರ್ಕಾರದವರು ಇತ್ತ ಕಡೆಗೆ ಹೆಚ್ಚಿನ ಗಮನ ಕೊಟ್ಟು ಅಲ್ಲಿ ಸ್ಥಳ ವಸತಿಯನ್ನು ಹೆಚ್ಚಿಸಬೇಕು ಶ್ರೀಮಂತರಾದರೇನೋ ಪರವಾ ಇಲ್ಲ. ಭಾಗ್ಯವಂತರಿಗೆ ಲಭಿಸತಕ್ಕ ಸೌಲಭ್ಯಗಳು ಬಡವರಿಗೆ ಲಭಿಸುವುದಿಲ್ಲ. ನಮ್ಮ ದೇಶದಲ್ಲಿ 100 ಕ್ಕೆ 50 ಜನ ಬಡವರಿದ್ದಾರೆ. ಸರ್ಕಾರದವರು ಕೊಡತಕ್ಕ ಹಣ ಛಿದ್ರ ಛಿದ್ರವಾಗುತ್ತಿದೆ.

3-00 P.M.

ಇದನ್ನು ತಡೆಗಟ್ಟಬೇಕು. ಅದನ್ನು ಭದ್ರತೆ ಮಾಡತಕ್ಕ ಒಂದು ಕಾರ್ಯಕ್ರಮಕ್ಕೆ ಸರ್ಕಾರದವರು ಕೃಪೆ ಮಾಡಬೇಕೆಂದು ಹೇಳಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಆಸ್ಪತ್ರೆಗಳಲ್ಲಿ ಅನೇಕರಿಗೆ ಬೆಡ್ ಇಲ್ಲ. ಒಟ್ಟಿನಲ್ಲಿ ಸರ್ಕಾರದವರು ಈ ಬೇಡಿಕೆಯಲ್ಲಿ ತೆಗೆದುಕೊಂಡಿರುವ ಕಾರ್ಯಕ್ರಮವನ್ನು ಅಲ್ಲದೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ, ಈ ಮನೆಯಲ್ಲಿ ಏನೇನು ಸಲಹೆಗಳು ಬಂದಿವೆಯೋ, ಅವೆಲ್ಲವನ್ನೂ ತೆಗೆದುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಉತ್ತಮ ಸ್ಥಿತಿ ತರಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

Sri P. B. NANDIHALI (Uchagaon).—Mr. Speaker, Sir, it is agreed by all that the Medical and Health Services play a very important role in the welfare of the common people and the country. No doubt, Government have also give more importance to this because the allotment from Rs. 5.15 crores is raised to Rs. 11.35 crores in 1967-68. Now the question is, whether Government has succeeded and will succeed in future also to serve the people in the same ratio. All help must be given to the sick; medical facilities must be available at the doors of the poor people in the welfare State. Various schemes must be taken to improve the general health of the people and the facilities of medical education must be given to all impartially. Knowing the conditions of the villages, they must be improved first. The Father of the Nation—Mahatma Gandhi—was asking us to go to the villages and serve the villagers. But, today we see that everybody is neglecting the villages.

Sir, there are so many villages in my taluka where there are no medical facilities at all. I may quote some of the villages: Ranakundaye, Waghavade, Navage, Bamanwadi, Balgmutti, Kuttalwadi, Badas, Belvatti, Bomkur, Janewadi, Agisge, Handignur, Chalawenhatti, Bodkenhatti, Kurihal, Kattanbhavi, Manikere, Kednur, Gunjenhatti, Bambarge, Ghugarenhatti, Bijagarni, Kavalawadi, Bekenkere, Atiwad, Konewadi, Basurte, Dhamane, Masgonhatti, Avcharhatti, Devaganhatti, Sulage, Rajhansgad, Yermale, Nagenhatti, and so many villages are in a very miserable condition. There are no roads, no bus service even after 20 years of our independence. People are dying without proper medical care and the facilities of freedom. The condition of the people of these areas is unimaginable. There is not even water supply to drink and sufficient food. To state one instance, there was a patient who required immediate medical treatment. The doctor did not come to Yermale and so people were carrying that patient. It was rainy season and the persons who were carrying that patient slipped and dropped the patient and he died on the spot. This is the pitiable condition in our welfare country which got freedom twenty years back. In Yellur, the people of the place and the Chairman Sri Umajirao Topinkatti are trying their very best from so many years to get sanction for a Health Centre. The Chairman had come here to Bangalore two or three times last year and the Health Minister gave so many promises of sanctioning a Health Centre there. This is not fulfilled till now. I request the present Health Minister at least to fulfil the promise given by the previous Health Minister. There is need for Primary Health Centres or Health Unit Type Dispensaries in Yellur, Piranwadi, Belgundi, Kinaye, Kadoli, Handignur, Kanabargi, Kudachi, Halage, Hindalaga, etc. I have visited the centres at Belagundi, Kinaye and other places. In Belagundi the centre is in a room 8× 15 feet and even this is started in the co-operative society with the efforts of the concerned doctor there. The doctors are doing their best but they have not got sufficient medicines, even bandages are not available. How can we expect them to do efficient service under these conditions? Therefore, Government must see these centres and other centres also are equipped properly and

sufficiently with all the necessities. This is the complaint everywhere—no medicine if there are doctors, no doctors if medicine is available, if both medicine and doctor is available, the doctor behaves in such an inhuman way that the patient prefers to go to a private practitioner or to another doctor. The necessity for doctors and nurses is more in the rural areas. These doctors and nurses should not be permitted to practise privately in their houses. This must be noted by Government.

There is a Primary Health Centre in Uchgoan. People have deposited Rs. 12,000 of their share towards the construction of the building. The Minister for Health must see to this matter personally and do the needful.

Lastly Sir, I cannot forget the grievances of the Belgaum City and the people there, who dare to go to the hospital at Belgaum. The hospital at Belgaum is a hell to the poor people. There are no medicines, no sufficient beds and proper accommodation. Proper treatment is not given to the poor people in that hospital. It is very difficult to get admission in this hospital for the poor. There is lot of corruption here and unless the patient brings a letter from an influential leader or an officer, nobody can get admission to the hospital, especially the poor people. Even today also I have received a letter enumerating the grievances of Belgaum people in the Belgaum hospital by a journalist Sri A. G. Tendalkar. I remember one instance in this connection. One woman who was wounded in an accident near Macche was to be taken to the hospital. Her relatives tried their level best to get the ambulance but they could not. At last they carried her in a cart and it was evening when they reached the hospital. They could not get her admitted in the evening and only in the morning they were able to get her admission. And she could get treatment in the afternoon only. Unfortunately, she died by that time and the relatives brought back her corpse.

I request the Minister to supply Ambulance van for Belgaum hospital. In Khanapur taluk there are 256 villages and it is a most backward area. There are no roads, no water supply and the area is very backward and poor. For these villages and Khanapur city there is no ambulance van. The Government may please provide the same. There is no X-ray machine in the hospital of Belgaum. The Government must provide all facilities in time so that the doctors and nurses who desire to work efficiently may work efficiently there.

Regarding admissions to the medical colleges there have been criticisms. It has now become a monopoly for the rich people to take medical education and it is not meant for poor people at present. One can get admission as if it is by tender of contract. The tender of maximum amount is admitted and in this way they have indirectly given licence for corruption to the future doctors of India. We cannot get admission unless he is prepared to spend Rs. 25,000 in advance. The Government must stop this. It is a disgrace to the freedom and welfare State. I may suggest here that the Government should reserve 50 per cent seats to the students of merit and whose

(SRI P. B. NANDIHALI)

parents' annual income is less than Rs. 2,000. That is the only way to stop this practice. Secondly the Government must take strict action and control of those institutions where they find going wrong and malpractice.

Lastly as India is an agriculturist country though we are considering about man power, the cattle power is also important. There must be veterinary centres wherever necessary and the Government may kindly take note of this. I conclude for want of time and I reserve my points for future occasion. Thank you.

ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಸಭಾಧ್ಯಕ್ಷರೇ, ಆರೋಗ್ಯ ಇಲಾಖೆ ಮಂತ್ರಿಗಳು ಈ ಸಭೆಯಲ್ಲಿಟ್ಟಿರತಕ್ಕ 11 ಕೋಟಿ 36 ಲಕ್ಷ 91 ಸಾವಿರ ರೂಪಾಯಿಗಳ ಬೇಡಿಕೆಯನ್ನು ನಾನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ. ಇಡೀ ಬೆಂಗಳೂರಿನೊಳಗೆ ಮುಖ್ಯವಾಗಿ ಎರಡು ದೊಡ್ಡ ಆಸ್ಪತ್ರೆಗಳಿವೆ. ಒಂದು ವಿಕ್ಟೋರಿಯಾ ಆಸ್ಪತ್ರೆ, ಇನ್ನೊಂದು ಬೌರಿಂಗ್ ಆಸ್ಪತ್ರೆ. ಈ ಎರಡು ಆಸ್ಪತ್ರೆಗಳು ಸ್ಥಾಪನೆಯಾಗಿ ಎಷ್ಟೋ ವರ್ಷಗಳಾದುವು. ಆದರೆ ಈಗ ಜನಸಂಖ್ಯೆ ಎಷ್ಟು ಜಾಸ್ತಿಯಾಗಿದೆಯೋ ಅದಕ್ಕನುಗುಣವಾಗಿ ಸರ್ಕಾರದವರು ವೈದ್ಯಕೀಯ ಸೌಲಭ್ಯಗಳನ್ನು ಜನರಿಗೆ ಒದಗಿಸುತ್ತಾ ಇಲ್ಲ. ಅನೇಕ ಜನಗಳಿಗೆ ಅಲ್ಲಿ ಹಾಸಿಗೆಗಳೇ ಇಲ್ಲದೆ ನೆಲದ ಮೇಲೆ ಮಲಗಿಕೊಂಡೇ ಬಹಳ ಕಷ್ಟಪಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಅಲ್ಲಿನ ಅಧಿಕಾರಿಗಳು ಈ ವಿಚಾರದ ಬಗ್ಗೆ ಗಮನ ಕೊಡುತ್ತಾ ಇಲ್ಲ. ಇದನ್ನು ನಾನು ಬೆಂಗಳೂರಿನ ಆಸ್ಪತ್ರೆಗಳಿಗೆ ಹೋದಾಗ ಖುದ್ದಾಗಿ ನೋಡಿದ್ದೇನೆ. ಒಂದು ತಿಂಗಳು ಕಾಲ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನೋಡಿದ್ದೇನೆ. ವೆರಾಂಡಾದಲ್ಲಿಯೇ ಅನೇಕ ರೋಗಿಗಳನ್ನು ಹಾಕಿದ್ದಾರೆ. ರೋಗಿಗಳನ್ನು ಆ ಆಸ್ಪತ್ರೆಗಳಲ್ಲಿ ಸರಿಯಾಗಿ ನೋಡುತ್ತಾ ಇಲ್ಲ. ಇನ್ನು ಅವರಿಗೆ ಬೆಡ್‌ಷೀಟ್ ಬಟ್ಟೆ ಕೊಟ್ಟಿದ್ದಾರೆ. ನಿಜವಾಗಿ ಅದನ್ನು ನೋಡಿದರೆ ನನಗೆ ಬಹಳ ದುಃಖ ಬರುತ್ತದೆ. ತಮ್ಮ ಮನೆಯ ಜನರಿಗೆ ಯಾವ ರೀತಿ ಬಟ್ಟೆಗಳನ್ನು ಕೊಡುತ್ತಾರೋ ಅದೇ ರೀತಿಯಲ್ಲಿ ಎಲ್ಲಾ ರೋಗಿಗಳನ್ನೂ ಒಂದೇ ಸಮನಾಗಿ ನೋಡಿಕೊಳ್ಳುವಂತೆ ಅಲ್ಲಿನ ಅಧಿಕಾರಿಗಳು ಗಮನ ಕೊಡಬೇಕು. ಅದನ್ನೇನೂ ಕೊಡುತ್ತಾ ಇಲ್ಲ. ನ್ಯಾಯವಾಗಿ ರೋಗಿಗಳನ್ನು ತಮ್ಮ ಮನೆಯ ಮಕ್ಕಳನ್ನು ನೋಡುವ ರೀತಿಯಲ್ಲಿ ನೋಡಬೇಕು. ಆ ರೀತಿಯಲ್ಲಿ ಈಗ ಯಾರೂ ನೋಡುತ್ತಾ ಇಲ್ಲ. ರಾತ್ರಿಯ ಹೊತ್ತು ಯಾರನ್ನಾದರೂ ರೋಗಿಯನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರೆ ಅಷ್ಟಾಗಿ ಡಾಕ್ಟರುಗಳು ಗಮನ ಕೊಡುತ್ತಾ ಇಲ್ಲ. ತಮಗೆ ಬೇಕಾದವರಾದರೆ ತಕ್ಷಣ ಬಂದು ನೋಡುತ್ತಾರೆ. ಇಲ್ಲದಿದ್ದರೆ ರೋಗಿಯನ್ನು ನೋಡುವುದೇ ಇಲ್ಲ. ಇದನ್ನು ನಾನು ಅನೇಕ ಸಲ ನೋಡಿದ್ದೇನೆ. ಆ ಬಗ್ಗೆ ಬಹಳ ದೂರುಗಳು ಈಗಲೂ ಇವೆ. ಬೆಂಗಳೂರಿನ ಕಂಟೋನ್‌ಮೆಂಟಿನಲ್ಲಿರತಕ್ಕ ಬೌರಿಂಗ್ ಆಸ್ಪತ್ರೆ ಬ್ರಿಟಿಷರ ಕಾಲದಲ್ಲಿ ಸ್ಥಾಪನೆಯಾದುದು. ಅದು ಆಗ ಬಹಳ ಶಿಸ್ತಿನಿಂದ ಇತ್ತು. ಒಳ್ಳೆಯ ಹೆಸರನ್ನು ಪಡೆದಿತ್ತು. ನುರಿತ ವೈದ್ಯರು, ಅನುಭವಸ್ಥರಾದ ಸಿಬ್ಬಂದಿ ಇದ್ದರು. ಈಗ ಅದು ಅಂತಹ ಒಳ್ಳೆಯ ಸ್ಥಿತಿಯಲ್ಲಿಲ್ಲ. ಅಲ್ಲಿಯೂ ಇತ್ತೀಚೆಗೆ ಇತರ ಆಸ್ಪತ್ರೆಗಳಲ್ಲಿ ನಡೆಯುವಂತೆ ಅವ್ಯವಸ್ಥೆ ಇದೆ. ಇನ್ನು ಈ ಊರಿನಲ್ಲಿ ಎಷ್ಟೋ ಆಸ್ಪತ್ರೆಗಳಿವೆ. ಓಲ್ಡ್ ಮದ್ರಾಸ್ ರೋಡ್‌ನಲ್ಲಿ ಒಂದು ಐಸೋಲೇಷನ್ ಆಸ್ಪತ್ರೆ ಇದೆ. ಅದನ್ನು ನೋಡಿದರೆ ನಿಜವಾಗಿ ನನಗೆ ಬಹಳ ಅವಮಾನವಾಗುತ್ತದೆ. ಅಧಿಕಾರಿಗಳು ಅಲ್ಲಿಗೆ ಹೋಗಿದ್ದಾರೋ ಇಲ್ಲವೋ ಎಂಬ ಸಂದೇಹ ಬರುತ್ತದೆ. ನಾನು ಕಾರ್ಪೊರೇಟರ್ ಆಗಿದ್ದಾಗ್ಗೆ ಅನೇಕ ಸಲ ಹೆಲ್ತ್ ಆಫೀಸರ ಜೊತೆಯಲ್ಲಿ ಅಲ್ಲಿ ಹೋಗಿ ನೋಡಿದ್ದೇನೆ. ಸರ್ಕಾರಿ ಆಸ್ಪತ್ರೆಗಳಲ್ಲಿದ್ದಂತೆ ನೊಣಗಳು ರೋಗಿಗಳ ಬಟ್ಟೆಗಳ ಮೇಲೆ ಮತ್ತು ಔಷಧಿಗಳ ಮೇಲೆ ಹಾಗೂ ರೋಗಿ ಉಪಯೋಗಿಸುವ ತಿಂಡಿ ಪದಾರ್ಥಗಳ ಮೇಲೆ ತುಂಬ ಇರುತ್ತಿತ್ತು. ಆಗ ಮತ್ತೊಂದು ಸಾರಿ ಕಾರ್ಪೊರೇಷನ್ನಿನ ಹೆಲ್ತ್ ಆಫೀಸರನ್ನು ಕರೆದುಕೊಂಡು ಹೋಗಿದ್ದಕ್ಕೆ ಅವರು ಒಂದು ರೀತಿಯ ಪೌಡರನ್ನು ಅವುಗಳ ಮೇಲೆ ಹಾಕಿದರು ಅವೆಲ್ಲವೂ ಸತ್ತುಹೋದುವು. ಆದ್ದರಿಂದ ಇಂತಹ ಆಸ್ಪತ್ರೆಗಳಲ್ಲಿ ಏಕೆ ಆ ರೀತಿ ಮಾಡಲಿಲ್ಲವೆಂದು ನಾನು ಕೇಳುತ್ತೇನೆ. ಆ ಆಸ್ಪತ್ರೆಗೆ ಹೋಗುವುದಕ್ಕೆ ಜನಗಳು ಭಯಪಡುತ್ತಿದ್ದಾರೆ. ಆದರೂ ಅಧಿಕಾರಿಗಳು ಯಾರೂ ಗಮನಕೊಡುತ್ತಾ ಇಲ್ಲ. ಇದೇ ರೀತಿಯಲ್ಲಿ ಅಲ್ಲಿರುವ ರಸ್ತೆಗಳನ್ನೂ ಸಹ ಇದುವರೆಗೂ ಪಿ. ಡಬ್ಲ್ಯು.ಡಿ.ಯವರು ಸರಿಯಾಗಿ ನೋಡುತ್ತಾ ಇಲ್ಲ. ಬ್ರಿಟಿಷರು ಇದ್ದ ಕಾಲದಲ್ಲಿ ಕಟ್ಟಿದ ಆಸ್ಪತ್ರೆಗಳು ಇರುವ ಕಡೆ ಇರತಕ್ಕ ರಸ್ತೆ

ಗಳು ಇನ್ನೂ ರಿಪೇರಿಯಾಗಿಲ್ಲ. ಕಾಲರಾ ಕಾಯಿಲೆಯ ರೋಗಿಗಳು ಬಂದರೆ ಅವರಿಗೆ ಪ್ರತ್ಯೇಕ ವ್ಯವಸ್ಥೆ ಇಲ್ಲ. ನೆಲದ ಮೇಲೆ ಅವರೂ ಸಹ ಇರುತ್ತಾರೆ. ಇವರಿಗೆ ತಕ್ಕ ಸೌಕರ್ಯಗಳನ್ನು ಮಾಡಿ ಕೊಡದೇಹೋದರೆ ಮುಂದೆ ನಮಗೆ ಬಹಳ ಪಾಪ ಬರುತ್ತದೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಧಿಕಾರಿಗಳು ಇತ್ತ ಕಡೆ ಗಮನ ಕೊಡದೆ ಹೋದರೆ ಆ ಕಷ್ಟವನ್ನು ರೋಗಿಗಳೇ ಅನುಭವಿಸಬೇಕಾಗುತ್ತದೆ. ಅವರ ಮನೆ-ಮಠ, ಹೆಂಡತಿ-ಮಕ್ಕಳನ್ನು ದೇವರೇ ಕಾಪಾಡ ಬೇಕಾಗುತ್ತದೆ. ಯಾರೋ ಜವಾನರು ಅಲ್ಲಿ ಇರುತ್ತಾರೆ. ಅವರು ಸತ್ತುಹೋದವರನ್ನು ಸುಮ್ಮನೆ ಬಿಸಾಡುತ್ತಿದ್ದಾರೆ. ಒಂದು ವರ್ಷವಲ್ಲ, ಎರಡು ವರ್ಷಗಳಲ್ಲ, ಸುಮಾರು 10 ವರ್ಷ ಗಳಿಂದಲೂ ನಾನು ಕಾರ್ಪೊರೇಷನ್ನಿನವರಿಗೆ ಈ ವಿಷಯವನ್ನು ತಿಳಿಸಿದ್ದೇನೆ. ಹಿಂದೆ ಆರೋಗ್ಯ ಮಂತ್ರಿಯಾಗಿದ್ದ ಶ್ರೀ ನಾಗಪ್ಪ ಆಳ್ವ ಅವರಿಗೂ ಈ ಆಸ್ಪತ್ರೆಗೆ ತಕ್ಷಣ ಭೇಟಿ ಕೊಡಿ ಎಂದು ಹೇಳಿದೆ. ಅವರು ಅತ್ತಕಡೆ ಬರಲೇ ಇಲ್ಲ. ಈಗಿನ ಆರೋಗ್ಯ ಮಂತ್ರಿಗಳಿಗೆ ಒಂದು ಮಾತನ್ನು ಹೇಳಬೇಕಾಗಿದೆ. ಯಾರೊಬ್ಬ ಅಧಿಕಾರಿಯನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗದೆ ಸರ್‌ಪ್ರೈಜಾಗಿ ಆಸ್ಪತ್ರೆಗಳಿಗೆ ಭೇಟಿ ಕೊಟ್ಟು ನಂತರ ಅವರು ಸ್ಟೇಟ್‌ಮೆಂಟ್ ಕೊಟ್ಟರೆ ಆಗ ಅಧಿಕಾರಿಗಳು ಚೆನ್ನಾಗಿ ಗಮನಿಸು ತ್ತಾರೆ. ಇಲ್ಲದೇಹೋದರೆ ಜೊತೆಯಲ್ಲಿ ಕರೆದುಕೊಂಡು ಹೋದ ಅಧಿಕಾರಿಗಳು ಆಸ್ಪತ್ರೆಗಳ ಅಧಿಕಾರಿಗಳಿಗೆ ವಿಷಯಗಳನ್ನು ಮೊದಲೇ ತಿಳಿಸಿ ಬಿಡುತ್ತಾರೆ. ಮಂತ್ರಿಗಳು ಎಲ್ಲಿಯಾದರೂ ಆಸ್ಪತ್ರೆ ಗಳಿಗೆ ಭೇಟಿ ಕೊಡುವಾಗ ಯಾವ ಅಧಿಕಾರಿಗೂ ತಿಳಿಸಬಾರದು. ಬೆಂಗಳೂರು ವಿಶಾಲವಾದ ರಾಜಧಾನಿ. ಇತ್ತೀಚೆಗೆ ಈ ನಗರ ಬಹಳ ದೊಡ್ಡದಾಗಿ ಬೆಳೆಯಿತು. ಇದಕ್ಕೆ ತಕ್ಕಂತೆ ಆಸ್ಪತ್ರೆಗಳೂ ಸಹ ಹೆಚ್ಚಾಗಬೇಕು. ಬೆಂಗಳೂರಿನ ರಾಜಾಜಿನಗರ ಮತ್ತು ಜಯನಗರಗಳಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳನ್ನು ಕಟ್ಟಬೇಕು. ಆಗ ಜನರಿಗೆ ಅನುಕೂಲವಾಗುತ್ತದೆ. ಬೆಂಗಳೂರಿನಲ್ಲಿ ಅನೇಕ ಭಕ್ತಾದಿಗಳು ಇದ್ದಾರೆ, ದಾನಿಗಳೂ ಸಹ ಇದ್ದಾರೆ. ಸರ್ಕಾರದವರು ದೊಡ್ಡ ದೊಡ್ಡ ಶ್ರೀಮಂತ ರನ್ನು ಕರೆಸಿ, ನಿಮ್ಮ ಜನಗಳ ಅನುಕೂಲಕ್ಕೋಸ್ಕರವಾಗಿ ಇಂಥಿಂಥ ಕಡೆಗಳಲ್ಲಿ ಆಸ್ಪತ್ರೆಗಳನ್ನು ಕಟ್ಟಿಸುತ್ತೇವೆ. ಹಣ ಸಹಾಯ ಮಾಡಿ, ಅದಕ್ಕೆ ನಿಮ್ಮ ಹೆಸರನ್ನೇ ಇಡುತ್ತೇವೆ ಎಂಬುದಾಗಿ ಹೇಳಿದರೆ ಅನೇಕರು ಹಣ ಸಹಾಯವನ್ನು ಖಂಡಿತವಾಗಿ ಮಾಡುತ್ತಾರೆ. ಎಷ್ಟೋ ಧನಿಕರು 20,30, 40 ಸಾವಿರ ರೂಪಾಯಿಗಳನ್ನು ಇದಕ್ಕೋಸ್ಕರ ದಾನವಾಗಿ ಕೊಟ್ಟು, ಕಾರ್ಪೊರೇಷನ್ನಿನವರು ಹೆರಿಗೆ ಆಸ್ಪತ್ರೆ ಮೇಲೆ ದಾನಿಗಳ ಹೆಸರು ಇಟ್ಟಿದ್ದಾರೆ. ಬೆಂಗಳೂರಿನ ನಾಗರೀಕನು ಖಂಡಿತವಾಗಿ ಕೊಡು ತ್ತಾರೆ. ಅವರಿಂದ ದಾನವಾಗಿ ಬಂದ ಹಣವನ್ನು ತೆಗೆದುಕೊಂಡು ಜಯನಗರ ರಾಜಾಜಿನಗರ ಪ್ರದೇಶಗಳಲ್ಲಿ ಆಸ್ಪತ್ರೆಗಳನ್ನು ಕಟ್ಟಿದರೆ ಜನಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಈಗಿನ ಆಸ್ಪತ್ರೆಗಳು ಏನಿವೆಯೋ ಅವುಗಳಿಂದ ಜನರಿಗೆ ಅಷ್ಟಾಗಿ ಅನುಕೂಲವಾಗುತ್ತಾ ಇಲ್ಲ. ಆದ್ದರಿಂದ ನಾನು ಸರ್ಕಾರದವರನ್ನು ಈ ಕಡೆ ಕೂಡಲೇ ಗಮನಕೊಡಬೇಕೆಂದು ಕೇಳುತ್ತಿದ್ದೇನೆ.

ಇಡೀ ಬೆಂಗಳೂರಿನಲ್ಲಿ ಎಲ್ಲಾ ಕಡೆಯ ಜನಗಳೂ ಬಂದು ಸೇರುತ್ತಾರೆ. ಸ್ಥಳ ಇರುವುದಿಲ್ಲ, ಬಹಳ ತೊಂದರೆಯಾಗುತ್ತದೆ. ಅತ್ತಕಡೆ ಸರ್ಕಾರದವರು ಗಮನ ಕೊಡುತ್ತಿಲ್ಲ. ಸರ್ಕಾರದವರು ಆಸ್ಪತ್ರೆಗಳಿಗೆ ಏನು ಮದ್ದನ್ನು ಒದಗಿಸುತ್ತಾರೆಯೋ ಅದು ಜನಗಳಿಗೆ ನ್ಯಾಯವಾಗಿ ದೊರಕುತ್ತಿಲ್ಲ. ಜನಗಳಿಗೆ ಸರಿಯಾದ ಆಹಾರ ಇಲ್ಲದೆ ಬಹಳ ಖಾಯಿಲೆ ಹೆಚ್ಚಾಗುತ್ತಿದೆ. ಇಂಥಾದ್ದಕ್ಕೆ ಆಸ್ಪತ್ರೆಗಳಲ್ಲಿ ಜನಗಳಿಗೆ ಮದ್ದನ್ನು ಕೊಡುವಾಗ ಅದಕ್ಕೆ ನೀರನ್ನು ಸೇರಿಸಿ ಕೊಡುತ್ತಾರೆ. ಇದರಿಂದ ಖಾಯಿಲೆ ಸರಿಯಾಗಿ ವಾಸಿಯಾಗುತ್ತಿಲ್ಲ. ಆಗ ಜನಗಳು ಏನು ಮಾಡುತ್ತಾರೆ ಎಂದರೆ, ಪ್ರೈವೇಟ್ ಡಾಕ್ಟರು ಗಳ ಹತ್ತಿರ ಹೋಗುತ್ತಾರೆ. ಬೆಂಗಳೂರು ಆಸ್ಪತ್ರೆಗೆ ಎಷ್ಟು ಜನ ರೋಗಿಗಳು ಬರುತ್ತಾರೆಯೋ ಅವರೆಲ್ಲರೂ ಮತ್ತೆ ಪ್ರೈವೇಟ್ ಡಾಕ್ಟರ ಹತ್ತಿರ ಹೋಗಿ ಔಷಧಿಯನ್ನು ತೆಗೆದುಕೊಳ್ಳುತ್ತಾರೆ. ಬೆಂಗಳೂರಿನ ಆಸ್ಪತ್ರೆಯಲ್ಲಿ ರೋಗಿಗಳನ್ನು ಸರಿಯಾಗಿ ಗಮನಿಸುತ್ತಿಲ್ಲ. ಆದ್ದರಿಂದ ಆ ಕಡೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ನಾನು ತಿಳಿಸುತ್ತೇನೆ. ಆತ್ಮಸಾಕ್ಷಿಯಾಗಿ ನಡೆದು ಕೊಳ್ಳುವ ಅಧಿಕಾರಿಗಳೇನಿದ್ದಾರೆಯೋ ಅವರಿಗೆ ಯಾರೂ ಹೇಳಬೇಕಾಗಿಲ್ಲ. ಯಾರೂ ಏನೂ ಮಾತ ನಾಡಬೇಕಾಗಿಲ್ಲ. ನಾವೇನಾದರೂ ಆಚೆ ಕಡೆಗೆ ಜನಗಳ ಮಧ್ಯದಲ್ಲಿ ಹೋದರೆ ಜನಗಳು ನಮ್ಮನ್ನು ಬೈಯ್ಯುತ್ತಾರೆ. ರೂಲಿಂಗ್ ಪಾರ್ಟಿಯವರು ಸರಿಯಾಗಿ ಗಮನಿಸುತ್ತಿಲ್ಲ ಎಂದು ಹೇಳುತ್ತಾರೆ. ಜನ ಏನು ಹೇಳುತ್ತಾರೆ ಎಂದರೆ ಅಧಿಕಾರಿಗಳು ಮಾಡುವ ತಪ್ಪಿಗೆ ಕಾಂಗ್ರೆಸ್ಸಿನವರು ಹೊಣೆಯಾಗಬೇಕಾ ಗುತ್ತದೆ. ಅದಕ್ಕೆ ಅವಕಾಶವನ್ನು ಕೊಡಬಾರದು. ಇನ್ನು ಮುಂದಕ್ಕೆ ಈ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿಗಳೇನಿದ್ದಾರೆಯೋ ಅವರು ಪ್ರತಿಯೊಂದು ಸರ್ಕಾರಿ ಆಸ್ಪತ್ರೆಗೂ ಕೊನೆಯ ಪಕ್ಷ 15 ದಿವಸಕ್ಕೊಂದಾವರ್ತಿಯಾದರೂ ಭೇಟಿ ಮಾಡಿ ರೋಗಿಗಳನ್ನು ಕೇಳಿ ಆಸ್ಪತ್ರೆಯಲ್ಲಿ ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದಾರೆಯೇ ಹೇಗೆ ಎಂಬುದನ್ನು ಸರ್ಕಾರಕ್ಕೆ ವರದಿ ಮಾಡುವಂತೆ ಮಾಡ ಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದ ಕ್ಕಾಗಿ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಪುಟ್ಟದಾಸ್ (ಸಾತನೂರು).—ಮಾನ್ಯ ಸಭಾಧ್ಯಕ್ಷರೇ, ಆರೋಗ್ಯ ಸಚಿವರು ತಮ್ಮ ಇಲಾಖೆಗೆ ಸಂಬಂಧಪಟ್ಟಿರತಕ್ಕ ಬೇಡಿಕೆಗಳನ್ನೇನು ಈ ಸಭೆಯ ಮುಂದಿಟ್ಟಿದ್ದಾರೆಯೋ ಅವುಗಳನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಈ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ.

ಮೊದಲನೆಯದಾಗಿ ಈಗಿನ ಆರೋಗ್ಯ ಸಚಿವರು ಈ ಖಾತೆಯನ್ನು ವಹಿಸಿಕೊಂಡಮೇಲೆ "ಉತ್ಸಾಹ ಶಾಲಿಗಳು, ಅನುಭವಸ್ಥರು; ಹಿಂದೆ ಆಗಿರುವ ಅನ್ಯಾಯಗಳನ್ನು ತೊಡೆದು ಹಾಕುತ್ತಾರೆ" ಅನ್ನೋ ಭರವಸೆ ಇತ್ತು. ಈಗಲೂ ಇದೆ. ಆದರೆ ಸಚಿವರು ಕಳೆದ ತಿಂಗಳು 10ನೇ ತಾರೀಖಿನ ದಿವಸ ಶಿವಮೊಗ್ಗದಲ್ಲಿ ಮಾಡಿರುವ ಭಾಷಣವನ್ನು ನೋಡಿದರೆ ನಿರಾಶೆಯಾಗುತ್ತೆ. ಅವರು ಅಲ್ಲಿ ಏನು ಹೇಳಿದ್ದಾರೆಂದರೆ: "Poor teaching in Medical Colleges" ಎಂದು ಹೇಳಿದ್ದಾರೆ. ಅವರು ಯಾವ ಅನುಭವದಿಂದ ಆರೀತಿ ಹೇಳಿದರೋ ನನಗೆ ಗೊತ್ತಿಲ್ಲ. ಹಿಂದೆ ಒಂದು ಸಂದರ್ಭವನ್ನು ನೆನೆಸಿಕೊಂಡರೆ ನಾವು ಕೇಂದ್ರ ಸರ್ಕಾರದ ಆರೋಗ್ಯ ಸಚಿವರಾದ ಡಾ|| ಸುಶೀಲನಯ್ಯಾರ್ ಅವರನ್ನು ನಮ್ಮ ರಾಜ್ಯಕ್ಕೆ ಒಂದು ಸಮಾರಂಭಕ್ಕೆ ಕರೆಸಿದಾಗ ಅವರು: "Mysore Medical College teaching is poor, and below average" ಎಂದು ಹೇಳಿ ಅವರು ಹೊರಟುಹೋದರು. ನಾನಾ ಸಂದರ್ಭಗಳಲ್ಲಿ 2-3 ಭಾಷಣಗಳಲ್ಲಿ ಅಧ್ಯಕ್ಷತೆಯನ್ನು ವಹಿಸಿದಂತಹ ನಮ್ಮ ಹಿಂದಿನ ಆರೋಗ್ಯ ಸಚಿವರು ಯಾವ ಮಾತನ್ನೂ ಆಡಲಿಲ್ಲ. ಸುಮ್ಮನೆ ಕುಳಿತುಕೊಂಡಿದ್ದರು. ಕೊನೆಯಲ್ಲಿ ಡಾ|| ಸುಶೀಲಾನಯ್ಯಾರ್ ಅವರು ಮೈಸೂರು ಮೆಡಿಕಲ್‌ಕಾಲೇಜಿನಲ್ಲಿ ಪಾಸುಮಾಡಿರತಕ್ಕ ಪದವೀಧರರುಗಳಿಗೆ ಆಲ್ ಇಂಡಿಯಾ ರೆಕಗ್ನಿಷನ್ ಕೊಟ್ಟಿಲ್ಲ ಎಂದು ಹೇಳಿದರು. ಕಾಲೇಜಿನ ಡೀನ್ ಹೇಳಿದರು ರೆಕಗ್ನಿಷನ್ ಆಗಿದೆ ಎಂದು. ರೆಕಗ್ನಿಷನ್ ಆಗಿದೆ ಎಂದು ಯಾವುದೋ ಒಂದು ಮಾಗ್ಜೈನ್‌ನಲ್ಲಿ ಬರೆದು ಆ ಪುಸ್ತಕವನ್ನು ಸಚಿವರ ಕಡೆಗೆ ರವಾನೆಮಾಡಿದರು. ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿದಂತಹ ಸಚಿವರಿಗೆ ಮೈಸೂರು ಮೆಡಿಕಲ್‌ಕಾಲೇಜಿನ ಡಿಗ್ರಿಗೆ ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್ ರೆಕಗ್ನಿಷನ್ ಆಗಿದೆ ಎಂದು ಹೇಳುವುದಕ್ಕೆ ಧೈರ್ಯ ಬರಲಿಲ್ಲ. ಸರ್ಕಾರದ ಧೋರಣೆ poor ಅಷ್ಟೇ. Teaching standard ಅಲ್ಲ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು 1961ನೇ ಇಸವಿಯಿಂದ ಈಚೆಗೆ ಅನೇಕಸಲ ತಮಗೆ ಇಷ್ಟ ಬಂದಹಾಗೆ ಟ್ವಿಸ್ಟ್‌ಮಾಡಿದ್ದಾರೆ. ಸೂಪರಿಂಟೆಂಡೆಂಟ್ ಯಾವರೀತಿ ಇರಬೇಕು, ಯಾವರೀತಿ ಮಾಡಿದರೆ ಯಾರಿಗೆ ಅನುಕೂಲವಾಗುತ್ತದೆ ಎಂಬುದನ್ನು ನೋಡಿಕೊಂಡು ತಮಗೆ ಅನುಕೂಲ ಕಂಡಬಂದಹಾಗೆ ಹತ್ತಾರು ಸಾರಿ ಟ್ವಿಸ್ಟ್ ಮಾಡಿದ್ದಾರೆ. ಇದರಲ್ಲಿ General Cadre to teaching cadre ಯಾರು; ಸೀನಿಯರ್ ಯಾರು ಜೂನಿಯರ್ ಎಂಬುದು ಗೊತ್ತಾಗುವುದಿಲ್ಲ. ಜಾಯಿಂಟ್ ಡೈರೆಕ್ಟರನ್ನು ನೇಮಕಮಾಡುವುದರಲ್ಲಿ ನಾಟಕ ನಡೆದಿದೆ. ಇದರಲ್ಲಿ ಅಮಾಲ್ಗಮೇಷನ್ ಮಾಡಿದಾಗ Joint director of special systems ಹುದ್ದೆ ಇರಲಿಲ್ಲ. ಆ ಹುದ್ದೆಗೆ ತಮಗೆ ಬೇಕಾದವರನ್ನು ಯಾರನ್ನೋ ಒಬ್ಬರನ್ನು ತಂದು ಕೂರಿಸುವುದಕ್ಕೋಸ್ಕರ ಆ ರೀತಿ ಅನ್ಯಾಯ ನಡೆದಿದೆ. ಅವರಿಗೆ ಜಾಗ ಕೊಡಬೇಕೆಂದು ಒಂದು ಹುದ್ದೆಯನ್ನು ಕ್ರಿಯೇಟ್‌ಮಾಡಿದರು ಎಂದು ಕಾಣಿಸುತ್ತದೆ. ಅಮಾಲ್ಗಮೇಷನ್‌ನಿಂದ ಯಾರೋ ಒಬ್ಬಿಬ್ಬರಿಗೆ ಅನುಕೂಲ ಆಗಿರಬಹುದು. ನಿಜವಾಗಿಯೂ ರಿಯಲ್ ಅಮಾಲ್ಗಮೇಷನ್ ಆಗಿಲ್ಲ. ನಿಮ್ಮ ಕಾಲದಲ್ಲಿ ಎಷ್ಟೊಂದು ತಾರತಮ್ಯ ನಡೆದಿದೆ ಎಂದರೆ ಲೆಕ್ಚರರ್ ಆಗಬೇಕೆಂದರೆ ಪಿ. ಜಿ. ಕ್ವಾಲಿಫಿಕೇಷನ್ ಇರಬೇಕು. ಪಿ. ಜಿ. ಡಿಪ್ಲೊಮಾ ಹೋಲ್ಡರ್ಸ್ ಎಷ್ಟೋಜನ ಇದ್ದರೂ ಅವರಿಗೆ ಲೆಕ್ಚರರ್ ಕೆಲಸ ಸಿಕ್ಕಲಿಲ್ಲ. ಎಂ. ಬಿ. ಬಿ. ಎಸ್. ಪಾಸ್‌ಮಾಡಿ ಎಫ್. ಆರ್. ಸಿ. ಎಸ್. ಮಾಡಿ ಅಸಿಸ್ಟೆಂಟ್ ಸರ್ಜನ್ ಕೆಲಸ ಇಲ್ಲದೆ ಅಲೆದಾಡುತ್ತಿದ್ದಾರೆ. ಇನ್ನೊಂದು ವಿಷಯ ನಡೆದಿದೆ. ಅದು ನಿಜವಾಗಿಯೂ ವಿಷಾದನೀಯ. ಯಾರೋ ಒಬ್ಬ ಮನುಷ್ಯರು ಕಷ್ಟಪಟ್ಟು ವಿದೇಶಕ್ಕೆ ಹೋಗಿ ಎಫ್. ಆರ್. ಸಿ. ಎಸ್. ಪಾಸುಮಾಡಿಕೊಂಡು ಬಂದರು. ಅವರು ಕೆಲಸ ಕೇಳುವುದಕ್ಕೆ ಹೋದಾಗ ನೀವು ಮುಂದುವರಿದವರು, ಹಿಂದುಳಿದ ರಾಜ್ಯದಲ್ಲಿ ನಿಮ್ಮಂಥವರಿಗೆ ಕೆಲಸಕೊಡುವುದು ಅನಗತ್ಯ ಎಂದು ಹೇಳಿದರು. Surgery man was made Anatomy Assistant Professor. ನಮ್ಮ ರಾಜ್ಯದಲ್ಲಿ ಈ ಒಂದು ವೃತ್ತಿಯಲ್ಲಿರತಕ್ಕವರು ಅವರ ವೃತ್ತಿಯ ಬಗ್ಗೆ ಅವಹೇಳನ ಮಾಡತಕ್ಕದ್ದು ಸರಿಯಲ್ಲ. ಮೊನ್ನೆ ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಆರೋಗ್ಯಮಂತ್ರಿಗಳನ್ನು ಕರೆಸಿಕೊಂಡು ಅವರ ಎದುರಿನಲ್ಲಿ ನಮ್ಮ ರಾಜ್ಯದ ಆರೋಗ್ಯ ಮಂತ್ರಿಗಳು ಶಿವಮೊಗ್ಗಾದಲ್ಲಿ ಮಾಡಿರತಕ್ಕಂಥ ಹೇಳಿಕೆ ನಿರುತ್ಸಾಹವನ್ನುಂಟುಮಾಡುತ್ತದೆ. ಕೇವಲ ಕೆಲವು ದಿವಸಗಳ ಹಿಂದೆ ನಮ್ಮ ಮೈಸೂರಿನಲ್ಲಿ ಒಬ್ಬರು ಎಂ. ಬಿ. ಬಿ. ಎಸ್. ಮತ್ತು ಎಂ. ಎಸ್. ಪಾಸುಮಾಡಿಕೊಂಡು ನಮ್ಮಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದವರು ಒಂದು ದೊಡ್ಡ ಅಚೀವ್‌ಮೆಂಟ್ ಮಾಡಿದ್ದಾರೆ. ಅದು ಏನೆಂದರೆ "Jejo vagotomny" ಎನ್ನುವ ಅಪರೇಶನ್ ಮಾಡುವಾಗ Anaesthesia arrest hazard ನಿಂದ ರೋಗಿ 4 ನಿಮಿಷಗಳ ಕಾಲ ಸತ್ತಿದ್ದ.

ಅಗ Intra cardiac Massage ಎಂದು ಮಾಡಿ ಪ್ರಾಣ ಉಳಿಸಿದರು. ಇಂಥಾದ್ದನ್ನು ಬೇರೆ ದೇಶದಲ್ಲಿ ಮಾಡಿದ್ದ ಪಕ್ಷದಲ್ಲಿ ಅವರು ಕಾಂಪ್ಲಿಮೆಂಟ್ ಕೊಡುತ್ತಿದ್ದರು. ಆ ಅಸಿಸ್ಟೆಂಟ್ ಪ್ರೊಫೆಸರು ಯಾರಾದರೂ ದೊಡ್ಡವರಿಗೆ, ಅಧಿಕಾರದಲ್ಲಿರತಕ್ಕವರಿಗೆ ಸಂಬಂಧೀಕರಾಗಿದ್ದ ಪಕ್ಷದಲ್ಲಿ ಅವರನ್ನು ಮೈಸೂರು, ಬೆಂಗಳೂರಿನಲ್ಲೆಲ್ಲಾ ಪ್ರಚಾರಮಾಡಿ ಓಲಗ ಊದಿಸಿಕೊಂಡು ವಿಧಾನಸೌಧದ ಸುತ್ತ ಮೆರವಣಿಗೆ ಮಾಡಿಸುತ್ತಿದ್ದರು. ನಮ್ಮ ಮೈಸೂರಿನಲ್ಲಿಯೇ ಎಂ. ಬಿ. ಬಿ. ಎಸ್. ಫಾಸುಮಾಡಿಕೊಂಡು ಒಂದು ಅಚೀವ್‌ಮೆಂಟ್ ಮಾಡಿರತಕ್ಕ ಮನುಷ್ಯನಿಗೆ ಒಂದು ಕಾಂಪ್ಲಿಮೆಂಟ್ ಸಹಾ ಇಲ್ಲ. ಅಂಥವರಿಗೆ ಸರಿಯಾದಂಥ ಪ್ರೋತ್ಸಾಹ ಇಲ್ಲ. ನಮ್ಮ ರಾಜ್ಯದಲ್ಲಿ ಹಿಂದೆ ಇದ್ದಂಥ ಪುಣ್ಯಾತ್ಮರಾದ ಡಾ॥ ಸರ್. ಎಂ. ವಿಶ್ವೇಶ್ವರಯ್ಯನವರು, ಡಾ॥ ಅಂಬೇಡ್ಕರ್ ಅವರು ನಿಮ್ಮ ಆಡಳಿತಕ್ಕೆ ಒಳಪಟ್ಟಿದ್ದರೆ ಅವರಲ್ಲಿ ಒಬ್ಬರನ್ನು ವೆಟರ್‌ನರಿ ಸ್ಟಾಕ್‌ಮನ್ ಆಗಿಯೂ ಮತ್ತೊಬ್ಬರನ್ನು ಪೋಸ್ಟ್ ಆಫೀಸ್ ಮೆಸಂಜರ್ ಆಗಿಯೂ ಮಾಡುತ್ತಿದ್ದಿರಿ. ಇಂತಹ ಉತ್ತಮವಾದ ತಲೆಗಳ ಮೇಲೆ ಯಾವ ಜಾತೀಗೂ ಹಕ್ಕಿಲ್ಲ. ಇಂತಹ ತಲೆಗಳು ದೇಶದ ಪವಿತ್ರ ರತ್ನಗಳು. ಸ್ವಲ್ಪ Human consideration ತೋರಿಸಿದರೆ ಸ್ಥಿತಿ ಖಂಡಿತ ಉತ್ತಮವಾಗುತ್ತೆ. ಆದ್ದರಿಂದ create a call of brilliant and talented doctors.

ಸ್ಟ್ಯಾಂಡರ್ಡ್ ಎಲ್ಲಿ ಕಡಿಮೆ ಇದೆ? ಈಗ ಬೌರಿಂಗ್ ಆಸ್ಪತ್ರೆಯಲ್ಲಿ the Professors were appointed one year back and the Institution was designated as Research Institute. They are paid teaching allowance. No Research work is done. No students.

3-30 P.M.

ಇಲ್ಲಿ ಯಾವ ರೀತಿಯ ರಿಸರ್ಚ್ ವರ್ಕ್ ಕೂಡ ನಡೆಯುತ್ತಿಲ್ಲ. ಇನ್‌ವೆಸ್ಟಿಗೇಷನ್ ಕೂಡ ಯಾವುದೂ ಇಲ್ಲ ಔಟ್ ಪೇಶಂಟ್ ವಾರ್ಡನಲ್ಲಿ ರೋಗಿಗಳನ್ನು ಪರೀಕ್ಷಿಸುವುಕ್ಕೆ ಬಿ. ಪಿ. ಅಪರಟಸ್ ಕೂಡ ಇರುವುದಿಲ್ಲ. ಬೌರಿಂಗ್ ಹಾಸ್ಪಿಟಲ್‌ನ್ನು ರೀಸರ್ಚ್ ಇನ್‌ಸ್ಟಿಟ್ಯೂಟ್ ಎಂದು ಮಾಡಿದ್ದರೂ ಕೂಡ ಅಲ್ಲಿ ಒಬ್ಬ ಟೆಕ್ನೀಶಿಯನ್ ಇಲ್ಲ. No research work has been turned out so far. There are no sufficient microscopes, no Bacteriology Department, no Histopathology Department, no technicians, no glass wares, no exhaust fans and no fuming chamber in the Biochemistry department.

ಈ ರಿಸರ್ಚ್ ಇನ್‌ಸ್ಟಿಟ್ಯೂಟಕ್ಕೆ ಖರ್ಚು ಮಾತ್ರ ವಿಪರೀತ ಮಾಡಿದ್ದಾರೆ. ಇನ್ನು ಮೇಜರ್ ಆಸ್ಪತ್ರೆಗಳಲ್ಲಿ ಬೆಡ್‌ಸ್ಟ್ರೆಂಗ್ತ್ ಜಾಸ್ತಿ ಮಾಡಿದ್ದೇವೆಂದು ಹೇಳುತ್ತಾರೆ. ಅದನ್ನು ಹೇಗೆ ಮಾಡಿದ್ದಾರೆಂದರೆ ಒಂದು ಮಂಚದ ಸುತ್ತಲು ಕಾಲು ಕಡೆ ಒಂದು ಬೆಡ್, ಕೈಕಡೆ ಒಂದು ಬೆಡ್, ಅಕ್ಕಪಕ್ಕದಲ್ಲಿ ಎರಡು ಬೆಡ್ಡುಗಳು ಹೀಗೆ ಒಂದು ಮಂಚದ ಸುತ್ತಲೂ ನಾಲ್ಕು ಬೆಡ್ಡುಗಳನ್ನು ಹಾಕಿದ್ದಾರೆ. ಇದು ಬೆಡ್‌ಸ್ಟ್ರೆಂಗ್ತ್ ಆಗಿದೆ. ಆಸ್ಪತ್ರೆಗೆ ರೋಗಿಗಳು ಬಂದಮೇಲೆ ಮಲಗಲು ಜಾಗ ಇರುವುದಿಲ್ಲ. ಈರೀತಿ ಬೆಡ್‌ಸ್ಟ್ರೆಂಗ್ತ್ ಜಾಸ್ತಿ ಮಾಡಿರುವುದು ಆಗಿದೆ. ಆದರೆ ಮಂತ್ರಿಗಳು ಆಸ್ಪತ್ರೆಗೆ ಭೇಟಿ ಕೊಟ್ಟು ನೋಡುವುದಕ್ಕೆ ಹೋದಾಗ್ಗೆ ಒಳ್ಳೇ ಬಟ್ಟೆ ಹಾಸಿ ಎಕ್ಸ್‌ಟ್ರಾ ಪೇಶಂಟ್‌ಗಳನ್ನು ಓಡಿಸಿಬಿಟ್ಟು ಆಸ್ಪತ್ರೆಯನ್ನು ಚೊಕ್ಕಟವಾಗಿ ಇಟ್ಟಿರುತ್ತಾರೆ. ಸತ್ಯವಾದ ಸಂಗತಿಯನ್ನು ನಾನು ಹೇಳುತ್ತಿದ್ದೇನೆ. ನಾನು ಒಬ್ಬ ಮೆಡಿಕಲ್ ಸ್ಟೂಡೆಂಟ್ ಆಗಿರುವುದರಿಂದ ನನಗೆ ಇದೆಲ್ಲವು ಚೆನ್ನಾಗಿ ಗೊತ್ತಿದೆ.

ಇನ್ನು ಮೈಸೂರಿನಲ್ಲಿರುವ ಕೆ. ಆರ್. ಹಾಸ್ಪಿಟಲ್‌ನಲ್ಲಿ ವಿ. ಟಿ. ಕೃಷ್ಣಮಾಚಾರಿಯವರು ಪ್ಲಾನಿಂಗ್ ಕಮಿಷನ್ನಿನ ವೈಸ್ ಚೇರ್‌ಮನ್ ಆಗಿರುವಾಗ್ಗೆ 31 ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ನ್ಯೂಸರ್ಜಿಕಲ್ ಬ್ಲಾಕ್ ಪ್ರಾರಂಭಮಾಡಿದರು. ಇದರಲ್ಲಿ ಎರಡು ವಾರ್ಡ್‌ಸ್ ಉಪಯೋಗಿಸಿಕೊಂಡು ಮೆಡಿಕಲ್ ವಾರ್ಡ್‌ಸ್ ಎಂದು ಮಾಡಿದ್ದಾರೆ. ಅಲ್ಲಿ ಚೊಕ್ಕಟ ಎಂಬುದು ಇಲ್ಲ. ಅಲ್ಲಿ ಬ್ಯಾಂಡೇಜ್ ಬಟ್ಟೆ ಕೂಡ ಇರುವುದಿಲ್ಲ. ನೀಡಲ್ಸ್ ಸಹ ಇರುವುದಿಲ್ಲ. ಇನ್ನು ಇನ್‌ಸ್ಟ್ರುಮೆಂಟ್ಸ್ ಬಗ್ಗೆ ಹೇಳುವುದಾದರೆ, ಇಂಟ್ರಾವೀನಸ್ ಪಿಲೋಗ್ರಾಫಿಗೆ ಡ್ರಗ್ಸ್ ಇರುವುದಿಲ್ಲ. Most of the instruments like Sigmoidoscope, cystoscopes, Oesophagoscope, bronshoscope are all put out of use for a long time for small reaons.

So far as investigation is concerned, there are no stains and no arrangements. Without the basic stains it is impossible to conduct investigations. In the Victoria Hospital there is no Leishman (basic) stain for the last six months. In K. R. Hospital there is no stock of

(SRI H. PUTTADAS)

Fehling's solution since last one month for urine examination. When a patient comes, on the 1st day he is told "no stains available", on the 2nd day the technicians are on leave and on the 3rd day the result is that without any treatment in time the patient is dead and gone.

As regards Syringe and needles, the position is very pathetic. The needles supplied are blunt. There is not adequate B. P. apparatus. The X-ray unit in K. R. Hospital is not working for the last 6 months. For emergencies, X-ray examination is very necessary, but it is not available here.

ಆಸ್ಪತ್ರೆಯಲ್ಲಿ ಇಂಜಕ್ಷನ್ ಮಾಡುವುದಕ್ಕೆ ಒಂದು ಸಿರಿಂಜ ಇಲ್ಲ, ನೀಡಲ್ ಇಲ್ಲ ಎಂಬ ಪರಿಸ್ಥಿತಿ ಇರುವುದರಿಂದ ಅಲ್ಲಿಯ ಪೇಶೆಂಟ್‌ಗಳು ಒಂದೊಂದು ರೂಪಾಯಿ ಸಬ್‌ಸ್ಕ್ರಿಪ್‌ಷನ್ ಹಾಕಿ ಸಿರಿಂಜ ನೀಡಲ್ ತರಿಸಿ ಕೊಡಬೇಕಾದ ಸಂದರ್ಭ ಬಂದಿದೆ.

For emergency operations, oxygen and gas are not available. For want of oxygen and gas many emergency cases taken to the operation table for operation had to be postponed. There is no trolly to carry oxygen cylinders from one ward to another. Several eye operation cases have failed and the patients became blind on account of vitreous prolapse due to shake of the trolley carrying them.

Then, in K. R. Hospital there is no supply of barium for the last one month. ಕೆ.ಆರ್. ಆಸ್ಪತ್ರೆಯಲ್ಲಿ ಒಂದು ವಾರ್ಡ್‌ನಿಂದ ಇನ್ನೊಂದು ವಾರ್ಡ್‌ಗೆ ಪೇಶೆಂಟ್ಸ್ ಕರೆದುಕೊಂಡು ಹೋಗುವುದಕ್ಕೆ ಟ್ರಾಲಿ ಇಲ್ಲ. ಕಣ್ಣಿ ಆಪರೇಷನ್ ಮಾಡಿದ ಸಂದರ್ಭದಲ್ಲಿ ಪೇಶೆಂಟನ್ನು ಆಪರೇಷನ್ ಥಿಯೇಟರಿನಿಂದ ವಾರ್ಡಕ್ಕೆ ಕರೆದುಕೊಂಡು ಹೋಗುವ ಸಮಯದಲ್ಲಿ ಧಡಧಡ ಶಬ್ದದಿಂದ ವಿಟ್ರಿಯಸ್ ಪ್ರೊಲಾಪ್ಸ್ ಆಗಿ ಎಷ್ಟೋ ಜನರು ಕುರುಡರಾಗಿರುವ ಸಂದರ್ಭ ಇದೆ.

ಇನ್ನು ಡ್ರಗ್ ಅಂಡ್ ಡೈಟ್ ಕಂಡೀಷನ್ ಬಹಳ ಚಿಂತಾಜನಕವಾಗಿದೆ. ಡ್ರಗ್ಸ್ ಇರುವುದಿಲ್ಲ. ಅದರಲ್ಲಿಯೂ ಮುಖ್ಯವಾಗಿ ಲೈಫ್ ಸೇವಿಂಗ್ ಡ್ರಗ್ಸ್ ಇಲ್ಲದೇ ಹೋದರೆ ಪೇಶೆಂಟಿನ ಪ್ರಾಣ ಉಳಿಸುವುದು ಹೇಗೆ ? Cardiac, glycosides, Adrenaline, Non–adrenaline, Miphentine, etc., are not at all available. ಇವುಗಳ ಹೆಸರನ್ನು ಡಾಕ್ಟರರು ಓದಿರುತ್ತಾರೆ, ತಿಳಿದುಕೊಂಡಿರುತ್ತಾರೆ ಆದರೆ ಅವುಗಳನ್ನು ಕಣ್ಣಿನಿಂದ ನೋಡಿರುವುದಿಲ್ಲ.

ಇನ್ನು ಬಹು ಮುಖ್ಯವಾದುದು ಅಂದರೆ, ಮಾಲ್ ನ್ಯೂಟ್ರಿಷನ್ ಎನ್ನತಕ್ಕಂಥಾದ್ದು. ಅನೀಮಿಕ್ ಪೇಶೆಂಟ್ಸ್‌ಗಳನ್ನು ಆಸ್ಪತ್ರೆಯಲ್ಲಿ ಹೆಚ್ಚು ದಿನ ಇಡುವುದಕ್ಕಾಗುವುದಿಲ್ಲ. ಅಂಥವರನ್ನು ಹೆಚ್ಚು ದಿನ ಆಸ್ಪತ್ರೆಯಲ್ಲಿ ಉಳಿಸಿಕೊಂಡು ಕಾಯಿಲೆ ವಾಸಿ ಮಾಡುವುದಕ್ಕಾಗುವುದಿಲ್ಲ. ಅವರು ಬಡತನದ ಮೂಲಕ ಅನಿಮಿಕ್ ಆಗಿರುತ್ತಾರೆ. ಅಂಥವರು ಆಸ್ಪತ್ರೆಯಿಂದ ಹೊರಗೆ ಬಂದ ಮೇಲೆ ಬೀದಿಯ ಭಿಕ್ಷುಕರು ಆಗುತ್ತಾರೆ.

ಇನ್ನು ನರ್ಸಸ್ ಸಮಸ್ಯೆ ಬಗ್ಗೆ ಒಂದು ಮಾತು ಹೇಳುತ್ತೇನೆ. ಆಸ್ಪತ್ರೆಯಲ್ಲಿ ಡಾಕ್ಟರರು ಟೆಕ್ನಿಕಲ್ ಇನ್‌ವೆಸ್ಟಿಗೇಷನ್ ಬಗ್ಗೆ ಗಮನ ಕೊಡುತ್ತಾರೆ. ರೋಗಿಯ ರಕ್ಷಣೆಯ ಸಂಪೂರ್ಣ ಜವಾಬ್ದಾರಿಯು ಅಲ್ಲಿ ಇರತಕ್ಕಂಥ ನರ್ಸ್, ಡ್ಯೂಟಿ ಮೇಲೆ ಇರತಕ್ಕ ಡಾಕ್ಟರ್ ಹಾಗು ಹೌಸ ಸರ್ಜನ್ ಇವರ ಮೇಲೆ ಇರುತ್ತದೆ. ಹಾಸ್ಪಿಟಲ್‌ನಲ್ಲಿ ನರ್ಸಸ್ ಅಂದರೆ ನಿಜವಾಗಿಯೂ ಅವರು Hospital ಏಂಜಿಲ್ಸ್‌ಗಳಾಗಿರುತ್ತಾರೆ. ಅವರ ಮೇಲೆ ಏನಾದರೂ ಕಂಪ್ಲೇಂಟ್ ಮಾಡಿದರೆ, ನೀವು ಬ್ಯಾಚಿಲರ್ ಆಗಿರುವುದರಿಂದ ಇಂಥ ಕಂಪ್ಲೇಂಟ್ ಮಾಡುತೀರಿ ಎಂದು ಹೇಳುತ್ತಾರೆ. ನಿಜವಾಗಿಯೂ ಆಸ್ಪತ್ರೆಯಲ್ಲಿ ಇರತಕ್ಕಂಥ ಪೇಶೆಂಟ್‌ಗಳು ನರ್ಸ್‌ಗಳ ಶುಶ್ರೂಷೆಯಲ್ಲಿ ಇರುವುದು ಮಾತ್ರ.

ನಾನು ಒಂದು ಸೂಚನೆ ಮಾಡಲು ಬಯಸುತ್ತೇನೆ. ಡೀ ಸೆಂಟ್ರಲೈಜೇಷನ್ ಆಫ್ ಪಾವರ್ಸ್ ಮಾಡಿ ಡೀನ್ ಅವರಿಗೆ ಹೆಚ್ಚು ಅಧಿಕಾರ ಕೊಡಬೇಕು. ಟೆಂಡರ್ ಕರೆದು ಔಷಧ ಕೊಂಡುಕೊಳ್ಳುವ ಅನುಕೂಲತೆ ಇರಬೇಕು. ಸಕಾಲದಲ್ಲಿ ಔಷಧ ಬರದೇ ಇರುವುದರಿಂದ ಪೇಶೆಂಟ್ಸ್ ಸ್ಥಿತಿ ಚಿಂತಾಜನಕವಾಗಿದೆ.

ಇನ್ನು ಫಿಜಿಕಲ್ ಮೆಡಿಸಿನ್ ವಿಷಯ ಹೇಳುವುದಾದರೆ ಒಂದು ಸರಿಯಾದ ವ್ಯವಸ್ಥೆ ಮಾಡಬೇಕು. ಯಾವ ರೀತಿ ವ್ಯವಸ್ಥೆ ಮಾಡಿದ್ದಾರೆ ಎಂಬುದು ದೇವರಿಗೇ ಗೊತ್ತು. ಸ್ಟ್ಯಾಂಡರ್ಡ್ ಪೂರ್ ಇರುವುದು ಟೀಚಿಂಗ್‌ನಲ್ಲಿ ಅಲ್ಲ. ಅದು ಆಡಳಿತದಲ್ಲಿ ಆಗಿದೆ ಎಂದು ಹೇಳಬಲ್ಲೆ.

ಇನ್ನು ಗ್ರಾಮಾಂತರ ಪ್ರದೇಶದಲ್ಲಿಯ ಆಸ್ಪತ್ರೆಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಅಲ್ಲಿ ಡಾಕ್ಟರ್ಸ್ ಇಲ್ಲಾ ಎಂದು ಹೇಳುತ್ತಾರೆ. ಯಾಕೆ ಡಾಕ್ಟರ್ಸ್ ಇರುವುದಿಲ್ಲ ಅದನ್ನು ಹೇಳುತ್ತೇನೆ. ಗಂಡ ಹೆಂಡತಿಯನ್ನು ಬೇರೆ ಬೇರೆ ಕಡೆ ವರ್ಗ ಮಾಡುವುದು ಕಾರಣವಾಗಿದೆ. ಒಂದು ಕಡೆ ಅವರು ಇರುವ ಹಾಗೆ ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ಡಾಕ್ಟರಿಗೆ ವಾಸಕ್ಕೆ ಸರಿಯಾದ ಕ್ವಾರ್ಟರ್ಸ್ ಇರುವುದಿಲ್ಲ. ಒಂದು ಮನೆ ಇಲ್ಲವೆ ಅವರು ಹೇಗೆ ಇರಬೇಕು? ಆಸ್ಪತ್ರೆ ಕಟ್ಟಿಸಿ ಕೊಡುವ ಹಾಗೆ ಡಾಕ್ಟರರಿಗೆ ಒಂದು ಮನೆ ವಾಸ ಮಾಡುವುದಕ್ಕೆ ಕೊಡಬೇಕು. ಮನೆ ಕೊಡದೆ ಇದ್ದರೆ ಅಲ್ಲಿ ಹೋಗಿ ಡಾಕ್ಟರರು ಹೇಗೆ ಇರಬೇಕು! ಮಂತ್ರಿಗಳು ಟೂರ್ ಮೇಲೆ ಹೋದರೆ ಎ. ಕ್ಲಾಸ್ ಟಿ. ಬಿ. ಇದೆಯೋ ಬಿ.ಕ್ಲಾಸ್ ಟಿ. ಬಿ. ಇದೆಯೋ ಎಂದು ವಿಚಾರಿಸುತ್ತಾರೆ. ಆದುದರಿಂದ 5 ವರ್ಷ ಒಂದು ಮನೆ ಇಲ್ಲದೆ ಇರಬೇಕು ಅಂದರೆ ಅದು ಹೇಗೆ ಸಾಧ್ಯ? ಇಷ್ಟ ಬಂದ ಕಡೆ ನೀವು ಕೊಡುವ ಆಸ್ಪತ್ರೆಗಳಿಗೆ ಯಾವ ಸೌಲಭ್ಯವೂ ಇರುವುದಿಲ್ಲ. ಒಂದು ಉದಾಹರಣೆ ಹೇಳುವುದಾದರೆ ಜಿ. ಒ. ಐ ಪಿ ನಾಗಮಂಗಲ ತಾಲ್ಲೂಕಿನ ಹರದನಹಳ್ಳಿ ಆಸ್ಪತ್ರೆಯಲ್ಲಿ ಕಳೆದ ಐದು ವರ್ಷಗಳಿಂದ ಡಾಕ್ಟರ್ ಇಲ್ಲ. ಇದಕ್ಕೆ ಕಾರಣ ಇಲ್ಲದೇ ಇಲ್ಲ. ಇದಕ್ಕೆ ಮುಖ್ಯ ಕಾರಣ ಅಂದರೆ ಟ್ರಾನ್ಸಫರ್ ಮಾಡುವುದರಲ್ಲಿ ಡಿಸ್ಕ್ರಿಮಿನೇಷನ್ ಇದೆ ಎಂದು ಬೇರೆ ಹೇಳಬೇಕಾಗಿಲ್ಲ.

ಕಂಡೆನ್ಸ್ಡ ಎಂ.ಬಿ.ಬಿ.ಎಸ್. ಕೋರ್ಸಿಗೆ ಎಲ್.ಎಂ.ಪಿ. ಆದವರನ್ನು ಸರ್ಕಾರದವರು ಕಳಿಸಿದರು. ಎಂ.ಬಿ.ಬಿ.ಎಸ್. ಮಾಡಿಕೊಂಡು ಬಂದವರನ್ನು ಫ್ರೆಷ್ ಅಪಾಯಿಂಟ್‌ಮೆಂಟ್ ಎಂದು ಎರಡನೆ ದರ್ಜೆ ಆಫೀಸರುಗಳು ಎಂದು ಮಾಡಿದರು. ಆದರೆ ಎಲ್.ಎಂ ಪಿ. ಮಾಡಿಕೊಂಡಿದ್ದು ಎಂಟು ಹತ್ತು ವರ್ಷ ಶ್ರಮಪಟ್ಟು ಬಂದಿರುವ ಮನುಷ್ಯ ತನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಎಂ.ಬಿ.ಬಿ.ಎಸ್. ಮಾಡಿಕೊಂಡು ಬಂದರೆ ಅವನನ್ನು ಗೆಜೆಟೆಡ್ ಆಫೀಸರ್ ಮಾಡುವುದಕ್ಕೆ ಇವರಿಗೆ ಇಷ್ಟವಿಲ್ಲ. ಅವರಿಗೆ ಹೊಸದಾಗಿ ಅಪ್ಲಿಕೇಷನ್ ಹಾಕಿ ಎಂದು ಹೇಳುತ್ತಾರೆ. ಆತನ ಸರ್ವಿಸ್ ಕಂಡೀಷನ್ ಏನಾಗಬೇಕು ? ಹಿಂದಿನ ಸೀನಿಯಾರಿಟಿ ಪ್ರಶ್ನೆ ಏನಾಗಬೇಕು ? ಆದ್ದರಿಂದ ಇದರ ಬಗ್ಗೆ ಹೆಚ್ಚು ಗಮನ ಕೊಟ್ಟು ಕಂಡೆನ್ಸ್ಡ ಎಂ.ಬಿ.ಬಿ.ಎಸ್. ಪೂರ್ತಿ ಮಾಡಿರುವವರಿಗೆ ಕೂಡಲೇ ಎರಡನೇ ದರ್ಜೆ ಆಫೀಸರ್ ಗ್ರೇಡ್ ಕೊಡುವುದಕ್ಕೆ ಇಲಾಖೆಯವರು ತಾವೇ ಸ್ವತಃ ಕ್ರಮ ತೆಗೆದು ಕೊಳ್ಳಬೇಕು ಎಂದು ಸೂಚಿಸುತ್ತೇನೆ.

ಎಲ್. ಎಫ್. ಡಿಸ್ಪೆನ್ಸರಿಗಳಲ್ಲಿ ಔಷಧಿಗಳಿಗಾಗಿ ವರ್ಷಕ್ಕೆ, 1,200 ರೂಪಾಯಿ ಕೊಡುತ್ತಾರೆ. ಕೇವಲ ಪಿಲ್ಸ್, ಕ್ಯಾಪ್ಸೆಲ್ಸ್. ಟಿಂಕ್ಚರ್ಸ್ ಮಿಕ್ಸಚರ್ಸ್ ಇವುಗಳಿಗೆ ಸಂಬಂಧಪಟ್ಟ ಮೆಡಿಕಲ್ ಆಫೀಸರ್ ಇರುತ್ತಾನೆ. ಕಾರ್ಮಿನೇಟಿವ್ ಮಿಕ್ಸ್‌ಚರ್ ಬೇಕು ಎಂದರೆ ಬಿಸ್ಮತ್ ಮಿಕ್ಸ್‌ಚರ್, ಬಿಸ್ಮತ್ ಮಿಕ್ಸ್‌ಚರ್ ಬೇಕು ಎಂದರೆ ಕಾರ್ಮಿನೇಟಿವ್ ಮಿಕ್ಸ್‌ಚರ್ ಕೊಡುತ್ತಾರೆ. ಇವರು ಕೊಡುವ ಟಿಂಕ್‌ಚರ್ಸ್, ಪಿಲ್ಸ್ ಇವೆಲ್ಲಾ ಫಸ್ಟ್‌ಏಡ್ ಎಂದು ಹೇಳುವುದಕ್ಕೆ ಆಗಬಹುದು. ಇವರಿಗೆ ಇನಜೆಕ್ಟಬಲ್ ಡ್ರಗ್ಸ್ ಕೊಡುವುದಿಲ್ಲ. ಲೈಫ್ ಸೇವಿಂಗ್ ಡ್ರಗ್ಸ್ ವಿಷಯ ಹೇಳುವುದೇ ಬೇಡ. ಪೆನಿಸಿಲಿನ್ 75 ವಯಲ್ಸ್, ಕ್ರಿಸ್ಟಲಿನ್ 5 ವಯಲ್ಸ್, ಸ್ಟ್ರೆಪ್ಟೋಮಿಸಿನ್ 25 ವಯಲ್ಸ್, ಕೋರಮಿನ್ 25 ವಯಲ್ಸ್, ಅಂಟಿಸ್ಟಿನ್ 5 ವಯಲ್ಸ್ ಇಷ್ಟು ಇವರು ಕೊಡುವ ಕೆಲವು ಇನಜೆಕ್ಷನ್ ಕೊಡುವ ಔಷಧಿಗಳು. ಇವು ಒಂದೇ ಒಂದು ದಿವಸದಲ್ಲಿ, ಒಂದು ಗಂಟೆಯಲ್ಲಿ ಖರ್ಚಾಗುತ್ತವೆ. ಆದರೆ ಡಾಕ್ಟರಾಗಿರುವವನು ತನ್ನ ಹತ್ತಿರ ಬಂದ ರೋಗಿಗಳಿಗೆ, ಅವರ ಕಾಯಿಲೆ ವಾಸಿ ಮಾಡ ಬೇಕು ಎಂಬ ಒಂದೇ ಒಂದು ದೃಷ್ಟಿಯನ್ನು ಇಟ್ಟುಕೊಂಡಿರುತ್ತಾನೆ. ಆ ದಿಸೆಯಲ್ಲಿ ಏನು ಮಾಡು ತ್ತಾನೆಂದರೆ ಇನ್‌ಜೆಕ್ಟಬಲ್ ಡ್ರಗ್ಸ್, ಇನ್‌ಜೆಕ್ಷನ್ ಕೊಟ್ಟರೆ ಮಾತ್ರ ಬದುಕಿಕೊಳ್ಳುತ್ತಾನೆ ಎಂದು ಆತನಿಗೆ ಗೊತ್ತಾದಾಗ ವಿಧಿ ಇಲ್ಲದೆ ಇನ್‌ಜೆಕ್ಷನ್ ಕೊಡುತ್ತಾನೆ. ಹಳ್ಳಿಗಳಲ್ಲಿ ಬೇಕಾದಾಗಲೆಲ್ಲಾ ಇನ್‌ಜೆಕ್ಷನ್ ಟ್ಯೂಬುಗಳನ್ನು ಎಲ್ಲಿಂದ ತರಬೇಕು ? ಆದ್ದರಿಂದ ಡಾಕ್ಟರು ಬೇಕಾಗುವ ಇನ್‌ಜೆಕ್ಷನ್ ಟ್ಯೂಬುಗಳನ್ನು ತಂದು ಇಟ್ಟುಕೊಂಡಿದ್ದು ಇನ್‌ಜೆಕ್ಷನ್ ಕೊಟ್ಟಾಗ ಅದಕ್ಕೆ ದುಡ್ಡು ವಸೂಲು ಮಾಡಲೇ ಬೇಕಾಗುತ್ತದೆ. ಅಂಥವರಿಗೆ ನಿಮ್ಮ ರಕ್ಷಣೆ ಇಲ್ಲ. ಲಂಚನಿರೋಧ ಶಾಖೆಗೆ ಆತನ ಮೇಲೆ ದೂರು ಹೋಗುತ್ತದೆ. 800 ರೂಪಾಯಿ ಸಂಬಳ ಪಡೆಯುವ ಅಸೋಸಿಯೇಟ್ ಪ್ರೊಫೆಸರ್ ಆದವನು ಪ್ರಾಕ್ಟೀಸ್ ಮಾಡಬಹುದು. ಹಳ್ಳಿಗಳಲ್ಲಿರುವ ಒಬ್ಬ ಡಾಕ್ಟರು ಅಲ್ಲಿ ಔಷಧಿಗಳು ಸಿಕ್ಕುವುದಿಲ್ಲ, ಇನ.ಜೆಕ್ಷನ್ ಟ್ಯೂಬ್ ಸಿಕ್ಕುವುದಿಲ್ಲ ಆತ ಪ್ರಾಕ್ಟೀಸ್ ಮಾಡುವುದಕ್ಕೆ ಅವಕಾಶವಿಲ್ಲ. ಇದರಲ್ಲಿ ಒಂದು ಸಂದರ್ಭವನ್ನು ಹೇಳುತ್ತೇನೆ. ಪ್ರಾಕ್ಟೀಸ್ ಮಾಡುವ ವಿಷಯದಲ್ಲಿ ಬಹಳ ಹೇಳ ಬಹುದು. ಎಷ್ಟೋ ಜನ ಪ್ರಾಕ್ಟೀಸ್ ಮಾಡುತ್ತಾರೆ. ಅವರು ನಿಜವಾಗಿ ಅಕ್ರಮವಾಗಿ ದುಡ್ಡನ್ನು

(ಶ್ರೀ ಎಚ್. ಪುಟ್ಟದಾಸ್)

ವಸೂಲ್ಮಾಡಿದ ಪಕ್ಷದಲ್ಲಿ ಅಂಥವರಿಗೆ ಕಠಿಣವಾದ ಶಿಕ್ಷೆ ಕೊಡಲೇ ಬೇಕು. ಆತನು ಒಂದು ವೃತ್ತಿಯನ್ನು ಅವಲಂಬಿಸಿರುವುದರಿಂದ ಕೆಲವು ಸಂದರ್ಭಗಳಲ್ಲಿ ಆತನು ತೆಗೆದುಕೊಳ್ಳುವ ಫೀಸಿಗೆ ಸರ್ಕಾರದ ಮನ್ನಣೆ ಇರಬೇಕು, ಅದಕ್ಕೆ ಅವಕಾಶವಿರಬೇಕು.

ಕನಕಪುರ ತಾಲ್ಲೂಕಿನಲ್ಲಿ ಕಾಲರಾ ಕಂಟ್ರೋಲ್ ಮಾಡುವುದಕ್ಕೆ ಸರ್ಕಾರದಿಂದ 2,23,000 ರೂಪಾಯಿಗಳನ್ನು ಈ ಸಾರಿ ಮಂಜೂರು ಮಾಡಿದರು. ಎರಡು ಮೂರು ತಿಂಗಳಾಯಿತು. ಏನು ಕಂಟ್ರೋಲೋ ಏನೋ? ಟ್ರೆಂಚಗಳನ್ನು ಹೊಡೆದು ನೈಟ್ ಸಾಯಿಲ್ ಅದರಲ್ಲಿ ಹಾಕಬೇಕು ಎನ್ನುವ ವ್ಯವಸ್ಥೆ ಇದರಲ್ಲಿದೆ. ನಾನು ಇಡೀ ತಾಲ್ಲೂಕಿನಲ್ಲಿ ಇದುವರೆಗೂ ನೋಡಿದ್ದೇನೆ, ಒಂದು ದಿವಸವಾದರೂ ಜಾಡಮಾಲಿಗಳು ನನ್ನ ಕಣ್ಣಿಗೆ ಬಿದ್ದದ್ದು ಇಲ್ಲ.

ಕುಟುಂಬ ಯೋಜನೆಯ ವಿಷಯ. ಸರ್ಕಾರದವರು ಕೊಡತಕ್ಕ ಅಂಕಿ ಅಂಶಗಳಿಂದ ಇದು ಎಷ್ಟೇ ಯಶಸ್ವಿಯಾಗಿದೆ ಎಂದು ಹೇಳಿದರೂ ಕೂಡ ಅದು ಅಷ್ಟು ಯಶಸ್ವಿಯಾಗಿಲ್ಲ, Statistics are unreliable. People get looped, de-looped and re-looped for small money incentives. It has become a money making racket. ಇದಕ್ಕೆ ನನ್ನ ಸೂಚನೆ ಏನೆಂದರೆ ಯಾವ ಡಾಕ್ಟರುಗಳಿಗೆ ಈ ಕುಟುಂಬ ಯೋಜನೆಯಲ್ಲಿ ನಂಬಿಕೆ ಇದೆಯೋ ಅಂಥವರನ್ನು ಮಾತ್ರ ಈ ಕೆಲಸಕ್ಕೆ ಹಾಕಬೇಕೆಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಚುರ್ಚಿಹಾಳಮಠ (ಮುಂಡರಗಿ).—ಮಾನ್ಯ ಸಭಾಪತಿಗಳೇ, ಈಗ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆ ಮಂತ್ರಿಗಳಾದ ಕೆ. ಪುಟ್ಟಸ್ವಾಮಿಯವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸಿ, ಯಾವುದೇ ಒಂದು ದೇಶ ಸಂಪದ್ಭರಿತವಾಗಬೇಕಾಗಿದ್ದರೆ ಅಲ್ಲಿಯ ಪ್ರಜರು ಆರೋಗ್ಯವಾಗಿರಬೇಕು ಎನ್ನುವ ಮಾತು ಸಹಜವಾದ ಮಾತು. ಒಂದು ವೇಳೆ ಪ್ರಜರು ಅಶಕ್ತರಾಗಿದ್ದಾಗ ಅವರಲ್ಲಿ ಬುದ್ಧಿಶಕ್ತಿ, ಕ್ರಿಯಾಶಕ್ತಿ ಕುಂದಿ ಯಾವ ಕಾರ್ಯ ಮಾಡುವದೂ ಅಸಾಧ್ಯ ಎನ್ನುವ ಮಾತು ಸ್ಪಷ್ಟವಾಗಿದೆ. ಇದನ್ನು ಗಮನಿಸಿ ನಮ್ಮ ಮೈಸೂರು ಸರ್ಕಾರ ಎರಡು ಇಲಾಖೆಗಳನ್ನೂ ಒಟ್ಟುಗೂಡಿಸಿ ಕಾರ್ಯ ಮಾಡುವುದರಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದೆ ಎನ್ನುವ ಮಾತನ್ನು ಇಲ್ಲಿ ಹೇಳಬೇಕಾಗಿದೆ. ಇನ್ನು ಅನೇಕ ಮಾನ್ಯ ಸದಸ್ಯರು ಮಾಡಿರತಕ್ಕ ದೋಷಾರೋಪಣೆಗಳು ಕೆಲ ಮಟ್ಟಿಗೆ ನಿಜ ಎಂದು ನಾವು ಒಪ್ಪಿಕೊಳ್ಳಬಹುದು. ಆದರೆ ದೋಷಗಳನ್ನಷ್ಟೇ ಪರಿಗಣಿಸದೆ ಕಾರ್ಯ ಏನಾಗಿದೆ, ಎಷ್ಟಾಗಿದೆ ಎನ್ನುವುದರ ಕಡೆಗೆ ಸ್ವಲ್ಪ ಲಕ್ಷ್ಯ ಹೊರಳಿಸಿದಾಗ ಈ ವೈದ್ಯಕೀಯ ಮತ್ತು ಆರೋಗ್ಯ ರಕ್ಷಣೆ ಕಾರ್ಯದಿಂದ ನಮ್ಮ ದೇಶದಲ್ಲಿ ಸಾವಿನ ಪ್ರಮಾಣ ಕಡಮೆಯಾಗಿದೆ ಎಂದು ಹೇಳುವುದರಲ್ಲಿ ಅಡ್ಡಿ ಇಲ್ಲ. ಅನೇಕ ಮನೆಗಳು, ಒಂದು ಊರಲ್ಲ, ಎರಡು ಊರಲ್ಲ, ಇಡೀ ತಾಲ್ಲೂಕು ಸಹ ನಾಶವಾದ ಪರಿಸ್ಥಿತಿ ಇತ್ತು. ಪ್ಲೇಗ್, ಕಾಲರಾ, ಮೈಲಿ ಬೇನೆ ಇಂಥ ರೋಗಗಳಿಂದ ಹೀಗಾಗುತ್ತಿತ್ತು. ಮೈಲಿ ಬೇನೆಯಿಂದಲೇ ಪ್ರತಿ ವರ್ಷ ಮೂರು ಸಾವಿರ ಜನ ಸಾಯುತ್ತಿದ್ದರು ಎಂದು ನಮಗೆ ಅಂಕಿ ಸಂಖ್ಯೆಗಳಿಂದ ಗೊತ್ತಾಗುತ್ತದೆ. ಈಗ ಸಾವಿನ ಸಂಖ್ಯೆ 800ಕ್ಕೆ ಇಳಿದಿದೆ ಎಂದು ತಿಳಿಸಿದ್ದಾರೆ. ಇದೊಂದನ್ನೇ ನಾವು ನೋಡುವುದಾದರೂ ರಕ್ಷಣಾ ಕಾರ್ಯ ಸಾಕಷ್ಟು ಯಶಸ್ವಿಯಾಗಿದೆ ಎನ್ನುವುದನ್ನು ಹೇಳುವುದಕ್ಕೆ ಸಾಕ್ಷಿಯಾಗಿದೆ.

[Mr. Chairman SRI KOTHAWALE in the Chair]

ಇನ್ನು ಕುಡಿಯುವ ನೀರಿನ ವ್ಯವಸ್ಥೆ ಕೂಡ ಇದರ ಅಂಗವೇ ಇವೆ. ಅದರಲ್ಲಿಯೂ ನಮ್ಮ ರಾಜ್ಯ, ನಮ್ಮ ದೇಶ ಹಳ್ಳಿಗಳ ರಾಜ್ಯ. ನಮ್ಮ ಮೈಸೂರು ರಾಜ್ಯದಲ್ಲಿ 26,377 ಹಳ್ಳಿಗಳಿವೆ. ಅದರಲ್ಲಿ 8,377 ಹಳ್ಳಿಗಳಿಗೆ ನೀರಿನ ಅಭಾವವಿತ್ತು, ಕುಡಿಯುವ ನೀರಿನ ಸರಬರಾಜು ಇದ್ದಿದ್ದಿಲ್ಲ ಎಂದು ಮೊದಲು ಕೇಳುತ್ತಿದ್ದೆವು. ಈಗ ಈ ಯೋಜನೆಯ ಮುಖಾಂತರ ಎಂಟು ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಇರಿಸಿ ಸಾಮಾನ್ಯವಾಗಿ 429 ಸ್ಕೀಮುಗಳನ್ನು ಸಿದ್ಧಪಡಿಸಿ ಈಗಾಗಲೇ 8,377 ಗ್ರಾಮಗಳಿಗೂ ನೀರು ಇಲ್ಲ ಎನ್ನುವ ಅಂಕಿಯಲ್ಲಿ, ಏಳು ಸಾವಿರ ಗ್ರಾಮಗಳಿಗೆ ಈಡೇರಿಸಲ್ಪಟ್ಟಿದೆ ಎಂದು ಸ್ಪಷ್ಟವಾಗಿ ತಿಳಿಯುತ್ತಿದ್ದೇನೆ. ಇದನ್ನು ನೋಡಿದರೆ ಕುಡಿಯುವ ನೀರಿನ ಯೋಜನೆಯು ಕಾರ್ಯವೂ ಕೂಡ ಬಹುಮಟ್ಟಿಗೆ ಸಫಲವಾಗಿದೆ ಎನ್ನುವಂಥ ಮಾತನ್ನು ಇಲ್ಲಿ ನಾನು ಹೇಳಬೇಕಾಗಿದೆ.

ಇನ್ನು ಅನೇಕ ಆಸ್ಪತ್ರೆಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳ ಡಿಸ್ಪೆನ್ಸರಿಗಳಲ್ಲಿ ಕೆಲವು ಲೋಪದೋಷಗಳಿರುವುದೇನೋ ನಿಜ. ಸರ್ಕಾರವು ಯಾವುದೇ ಒಂದು ಯೋಜನೆಯನ್ನು ಮಾಡ

ಬೇಕಾದಾಗ ಅದಕ್ಕೆ ಬೇಕಾದ ಕಟ್ಟಡ, ಅದಕ್ಕೆ ಬೇಕಾದ ಡಾಕ್ಟರು, ನರ್ಸ್, ಔಷಧಿ ಎಲ್ಲವೂ ಇವೆಯೋ ಇಲ್ಲವೋ ಎನ್ನುವುದನ್ನು ನೋಡಿಕೊಂಡಾಗಲೀ, ಬೇಕಾದಷ್ಟು ರೊಕ್ಕ ಇದೆಯೋ ಇಲ್ಲವೋ ಎನ್ನುವುದನ್ನು ತಿಳಿದುಕೊಂಡಾಗಲೀ ಮಾಡಿದರೆ ಈ ದೋಷಗಳು ಕೂಡ ಬರುತ್ತಿದ್ದಿಲ್ಲ ಎನ್ನುವ ಮಾತು ತಿಳಿದು ಬರುತ್ತದೆ. ಏಕೆಂದರೆ ಒಟ್ಟು ಮೈಸೂರು ರಾಜ್ಯದಲ್ಲಿ 1720 ವೈದ್ಯಕೀಯ ಕೇಂದ್ರಗಳಿವೆ ಎಂದು ನನಗೆ ತಿಳಿದು ಬರುತ್ತದೆ. ಇಷ್ಟು ಕೇಂದ್ರಗಳಲ್ಲಿ ಈಗ ಮಾನ್ಯ ಸದಸ್ಯರುಗಳು ಟೀಕೆಯ ರೂಪವಾಗಿ ಅಥವಾ ಸಲಹಾ ರೂಪವಾಗಿ ಅಥವಾ ಅರಿಕೆಯ ರೂಪವಾಗಿ ಹೇಳಿರತಕ್ಕ ಕೆಲವು ಹಾಸ್ಪಿಟಲ್‌ಗಳಲ್ಲಿ ಅಥವಾ ಕೆಲವು ದವಾಖಾನೆಗಳಲ್ಲಿ ಮಾತ್ರ ದೋಷಗಳು ಕಂಡುಬರುತ್ತವೆ.

ಇನ್ನು ಫ್ಯಾಮಿಲಿ ಪ್ಲಾನಿಂಗ್ ವಿಚಾರದಲ್ಲಿ ಅನೇಕರು ತಮ್ಮ ಅಭಿಪ್ರಾಯಗಳನ್ನು ಹೇಳಿದರು. ಇದೀಗ ಅಭಿಪ್ರಾಯವನ್ನು ವ್ಯಕ್ತಮಾಡಿದ ಡಾಕ್ಟರು ಫ್ಯಾಮಿಲಿ ಪ್ಲಾನಿಂಗ್ ಬಹುತೇಕವಾಗಿ ಅಯಶಸ್ವಿಯಾಗಿದೆ ಎಂದು ಹೇಳಿದರು. ಆದರೆ ಅದು ಸರಿಯಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಅವರಿಗೆ ಅದರ ವಿಚಾರ ಸರಿಯಾಗಿ ಗೊತ್ತಿರುವ ಹಾಗೆ ಕಾಣುವುದಿಲ್ಲ. ಎಲ್ಲೂ ಕೂಡ ಅಯಶಸ್ವಿಯಾಗಿಲ್ಲ ಎಂಬುದು ಅನುಭವದಿಂದ ಮತ್ತು ಅನೇಕ ನಿದರ್ಶನಗಳಿಂದ ಕಂಡುಬಂದಿದೆ. ಆಪರೇಷನ್ ಆದಮೇಲೆ ಯಾರಾದರೂ ಗಂಡಸರು ತಪ್ಪುಮಾಡಿದರೆ ಮಕ್ಕಳಾಗುವುದುಂಟು ಎಂದು ಶಾಸ್ತ್ರವಿದೆ, ಅದಕ್ಕಿಂತ ಮುಂದೆ ಮಕ್ಕಳಾದರೆ ತಪ್ಪು ಎಲ್ಲಿದೆ ಎಂದು ಕಂಡುಹಿಡಿಯಲು ಪರೀಕ್ಷೆ ಮಾಡಿದಾಗ ಗಂಡಸರು ಮತ್ತು ವೈದ್ಯರಲ್ಲಿ ದೋಷವಿಲ್ಲ ಎಂಬುದು ಸ್ಪಷ್ಟವಾಗಿದೆ, ಬೇಕಾದರೆ ಅವರಿಗೆ ಸಿದ್ಧಮಾಡಿಕೊಡಲು ಸಾಧ್ಯವಿದೆ.

ಇನ್ನು ನಮ್ಮ ಸರಕಾರದವರು ಅನೇಕ ವೈದ್ಯರನ್ನು ಗ್ರಾಮಾಂತರಗಳಿಗೆ ಕಳುಹಿಸುತ್ತಿದ್ದಾರೆ. ಅಲ್ಲಿಗೆ ಡಾಕ್ಟರುಗಳು ಹೋಗಲು ಒಳ್ಳೆಯ ಮನೆಗಳಿರುವುದಿಲ್ಲ ಎಂಬ ಒಂದೇ ಒಂದು ಕಾರಣದಿಂದ ಅವರು ಅಲ್ಲಿಗೆ ಹೋಗಲು ಸಿದ್ಧವಿಲ್ಲ, ಅದಕ್ಕಾಗಿ ಡಾಕ್ಟರುಗಳು 5 ವರ್ಷ ಗ್ರಾಮಾಂತರಗಳಲ್ಲಿ ಹೋಗಿರಬೇಕು ಎಂದು ಅವರು ಕಲಿಯುವಾಗಲೇ ನಿರ್ಬಂಧ ಮಾಡಬೇಕು ಎಂದು ಕೆಲವರು ಸೂಚನೆಮಾಡಿದರು. ಆದರೆ ಅಂಥ ಮನೆ ಒದಗಿಸಿದರೂ ವೈದ್ಯರು ಗ್ರಾಮಾಂತರಗಳಿಗೆ ಹೋಗಲು ಇಷ್ಟಪಡುವುದಿಲ್ಲ. ಮನೆ ಎಷ್ಟೋ ಕಡೆ ಇದೆ. ಆದರೆ ಹುಡುಗರಿಗೆ ಕಾನ್‌ವೆಂಟಿಲ್ಲ, ಹೈಸ್ಕೂಲಿಲ್ಲ, ಸಿನೀಮಾನಾಟಕ ಇಲ್ಲ, ಕಾರಿನಲ್ಲಿ ಓಡಾಡುವುದಕ್ಕೆ ಒಳ್ಳೆಯ ರಸ್ತೆಯಿಲ್ಲ ಎಂದು ಡಾಕ್ಟರುಗಳು ಹೇಳುತ್ತಾರೆ. ಇವೆಲ್ಲಾ ಸೌಕರ್ಯಮಾಡಿಕೊಟ್ಟರೂ ವೈದ್ಯರು ಹಳ್ಳಿಗಳಿಗೆ ಹೋಗುವುದಿಲ್ಲವೆಂಬುದು ಸ್ಪಷ್ಟವಾಗಿದೆ.

ಇನ್ನು ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಿಗೆ ಅಲೋಪತಿ ಅಥವಾ ಆಯುರ್ವೇದ ಅಥವಾ ಹೋಮಿಯೋಪತಿ ಅಥವಾ ಯುನಾನಿ ವೈದ್ಯರಲ್ಲಿ ಯಾರ ಉಪಯೋಗ ಹೆಚ್ಚಾಗಿ ಆಗುತ್ತಿದೆ ಎಂದು ವಿಚಾರಮಾಡಿದರೆ ಪ್ರಾಮುಖ್ಯವಾಗಿ ಆಯುರ್ವೇದ ವೈದ್ಯರಿಂದಲೇ ಹೆಚ್ಚು ಜನರಿಗೆ ಉಪಯೋಗವಾಗುತ್ತಿದೆ ಎಂದು ಸರಕಾರದ ಅಂಕಿಸಂಖ್ಯೆಗಳಿಂದ ಸ್ಪಷ್ಟವಾಗುತ್ತದೆ. ಏಕೆಂದರೆ, 21 ಸಾವಿರ ಜನರಿರುವ ಪ್ರದೇಶದಲ್ಲಿ ಒಬ್ಬ ಎಂ.ಬಿ.ಬಿ.ಎಸ್. ಅಥವಾ ಎಲ್.ಎಂ.ಪಿ. ಆಗಿರುವ ವೈದ್ಯರನ್ನಿಡಬೇಕು ಎಂದು ನಿರ್ಣಯವಾದರೆ 50 ಸಾವಿರ ಜನರಿರುವ ಕಡೆ ದೇಶೀಯ ವೈದ್ಯರಿದ್ದರೆ ಸಾಕು ಎಂದು ತೀರ್ಮಾನಮಾಡಿದ್ದಾರೆ. ಇದನ್ನು ವಿಚಾರಮಾಡಬೇಕು.

ಇನ್ನು ಅಲ್ಲಲ್ಲಿ ಕಾಣುತ್ತಿರುವಂತೆ ಹೆಲ್ತ್‌ಯೂನಿಟ್ ಮತ್ತು ಹೆಲ್ತ್‌ಯೂನಿಟ್ ಟೈಪ್ ಆಸ್ಪತ್ರೆ, ಸಬ್ಸಿಡೈಜ್ಡ್ ಮೆಡಿಕಲ್ ಪ್ರಾಕ್ಟೀಸ್ ಹೀಗೆ ಅನೇಕ ರೀತಿ ಮುಂಬಯಿ ಪ್ರಾಂತದಿಂದ ಕರ್ಣಾಟಕಕ್ಕೆ ಸೇರಿರುವ ಭಾಗಗಳು ಮತ್ತಿತರ ಕರ್ಣಾಟಕದ ಭಾಗಗಳಲ್ಲಿ ಬೇರೆಬೇರೆ ವಿಧವಾದ ಪದ್ಧತಿಗಳಿವೆ. ಇವುಗಳ ಬಗ್ಗೆ ಮಂತ್ರಿಗಳು ಪರಿಶೀಲನೆಮಾಡಿ ಏಕರೂಪಕ್ಕೆ ತರಲು ಪ್ರಯತ್ನ ಮಾಡಬೇಕೆಂದು ಅವರಲ್ಲಿ ವಿಜ್ಞಾಪನೆಮಾಡಿಕೊಳ್ಳುತ್ತೇನೆ. ಎಸ್.ಎಸ್.ಸಿ. ವೈದ್ಯರಿಗೆ ಸರಿಯಾದ ಸ್ಥಾನಮಾನಗಳನ್ನು ಕಲ್ಪಿಸಿಕೊಡಬೇಕು.

ಇನ್ನು ಆಯುರ್ವೇದ ಭಾಗ ಒಂದು ದೊಡ್ಡ ವಿಭಾಗ, ನಮ್ಮ ದೇಶದಲ್ಲಿ ಇದಕ್ಕೆ ಬಹಳ ಮಹತ್ವವಿದೆ ಎಂದು ಸರಕಾರ ಸ್ವಲ್ಪ ಲಕ್ಷ್ಯವಹಿಸಿ ನೋಡಬೇಕು. ಏಕೆಂದರೆ ಆಯುರ್ವೇದವೆಂದರೆ ಕೆಲವು ಜನರು ಮೂಗು ಮುರಿಯುವುದನ್ನು ನೋಡುತ್ತಿದ್ದೇವೆ. ಅವರು ಮೂಗು ಮುರಿಯುವುದನ್ನು ಅಥವಾ ಟೀಕಿಸುವುದನ್ನು ಕೇಳಿದಾಗ ಅವರಿಗೆ ಆಯುರ್ವೇದ ಜ್ಞಾನವಿಲ್ಲ ಎಂದು ಸಮಾಧಾನ ಮಾಡಿಕೊಳ್ಳಬೇಕು ಅಷ್ಟೆ. ಏಕೆಂದರೆ ಆಯುರ್ವೇದಶಾಸ್ತ್ರ ವೇದಗಳ ಒಂದು ಭಾಗ. ವೇದಗಳನ್ನು ಹೇಗೆ ಅಲಕ್ಷ್ಯಮಾಡುವುದಕ್ಕಾಗುವುದಿಲ್ಲವೋ ಹಾಗೆಯೇ ಆಯುರ್ವೇದವನ್ನೂ ತಿರಸ್ಕಾರಮಾಡುವುದಕ್ಕಾಗುವುದಿಲ್ಲ. ಆಯುರ್ವೇದಕ್ಕೆ ಪುರಸ್ಕಾರ ತೋರಿಸಬೇಕಾದ್ದು ನಮ್ಮ ಕರ್ತವ್ಯ.

(ಶ್ರೀ ಸಿ. ಎಂ. ಚುರ್ಚಿಹಾಳಮಠ)

ಇನ್ನು ಆಯುರ್ವೇದದಲ್ಲಿ ಒಳ್ಳೆಯ ಫಾರ್ಮುಲ ಇಲ್ಲ ಎಂದು ಹೇಳುವುದನ್ನು ಕೇಳಿದ್ದೇವೆ. ಅದು ಶುದ್ಧ ತಪ್ಪು. ಅದನ್ನು ಹೇಳುವ ಮನುಷ್ಯ ಆಯುರ್ವೇದದಿಂದ ತನ್ನ ಆಯುಷ್ಯವನ್ನು ಹೆಚ್ಚಿಸಿಕೊಂಡಿರುತ್ತಾನೆ. ಈ ಶಾಸ್ತ್ರದಲ್ಲಿ ಫಾರ್ಮುಲ ಇಲ್ಲದೆ ಇಂದು ಮನುಷ್ಯ ತಿಂದು ಬೆಳೆದು ಹಷ್ಟಪುಷ್ಟವಾಗಿ ಹೇಗಾದ, ಯಾವ ಶಾಸ್ತ್ರದಮೇಲೆ ಬಲಿಷ್ಟರಾಗಿದ್ದೇವೆ ಎಂದು ಯೋಚನೆ ಮಾಡಿದರೆ ಆಯುರ್ವೇದ ಶಾಸ್ತ್ರದಮೇಲೆ ಎಂಬುದು ವ್ಯಕ್ತವಾಗುತ್ತದೆ. ಮನೆಯಲ್ಲಿರುವ ತಾಯಂದಿರು ಹೆಚ್ಚಾಗಿ ಇದನ್ನು ತಿಳಿದಿದ್ದಾರೆ. ಪರ್ಲ್, ಸಾರು, ಉಪ್ಪಿನಕಾಯಿ ಮುಂತಾದುವುಗಳಲ್ಲಿ ಯಾವ ದ್ರವ್ಯ ಹೆಚ್ಚಾಗಿದೆ, ಆದರಿಂದ ಯಾವ ಗುಣವಿದೆ ಎಂಬುದನ್ನು ವಿಚಾರಮಾಡಿದರೆ ಫಾರ್ಮುಲ ವಿಲ್ಲದೆ ಹೇಗೆ ಅದು ಮನುಷ್ಯನನ್ನು ರಕ್ಷಿಸುತ್ತದೆ ಎಂಬುದನ್ನು ಮನಗಾಣಬಹುದು.

ಇನ್ನು ವೇಳೆಯಿಲ್ಲದಿರುವುದರಿಂದ ಮುಖ್ಯವಾದ ಒಂದು ವಿಚಾರಮಾತ್ರ ಹೇಳುತ್ತೇನೆ. ಈಗ ಸರಕಾರದವರು ಬೋರ್ಡ್ ಆಫ್ ಸ್ಟಡೀಸ್ ಇನ್ ಇಂಡಿಯನ್ ಮೆಡಿಸಿನ್, ಬೋರ್ಡ್ ಆಫ್ ರೆಜಿಸ್ಟ್ರೇಷನ್ ಫಾರ್ ಆಯುರ್ವೇದಿಕ್ ಅಂಡ್ ಹೋಮಿಯೋಪತಿ ಎಂದು ಮುಂತಾಗಿ ಮೂರು ಬೋರ್ಡುಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಯಾವ ಸದಸ್ಯರಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬುದು ಸಾರ್ವಜನಿಕರ ಗಮನಕ್ಕೆ ಬಂದಿಲ್ಲ. ಬರುವಂತೆ ಮಾಡಬೇಕು. ರಿಜಿಸ್ಟ್ರೇಷನ್ನಿಗೇ ಒಂದು ಬೋರ್ಡನ್ನು ಮಾಡಿದ್ದಾರೆ ರಿಜಿಸ್ಟ್ರೇಷನ್ನಿಗೆ ಅರ್ಜಿ ತರಿಸಿ ಹಾಕಿದರೆ ಅವಕಾಶ ಸಿಕ್ಕುತ್ತದೆ. ಈ ಸಂದರ್ಭದಲ್ಲಿ ಯಾರು ಸರಿಯಾದ ವೈದ್ಯರು, ಯಾರು ಅಲ್ಲ ಎಂಬ ಪ್ರಸಂಗ ಬರುತ್ತದೆ. ಇದನ್ನು ಸಂಪೂರ್ಣವಾಗಿ ಪರಿಶೀಲಿಸಿ ಯೋಗ್ಯರಿಗೆ ಲೈಸೆನ್ಸ್ ಕೊಡಬೇಕು. ಇಲ್ಲದಿದ್ದರೆ ಕ್ಷೌರಿಕರು ಕೂಡ ರಿಜಿಸ್ಟರ್ ಮಾಡಿಸಿಕೊಂಡು ದವಾಖಾನೆ ಎಂದು ತಮ್ಮ ಅಂಗಡಿಗೆ ಬೋರ್ಡ್ ಹಾಕುವುದಕ್ಕೆ ಅವಕಾಶವಾಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು. ಅಲ್ಲದೆ ಜಾಯಿಂಟ್ ಡೈರೆಕ್ಟರ್ ಮತ್ತು ಆಸಿಸ್ಟೆಂಟ್ ಡೈರೆಕ್ಟರ ಹುದ್ದೆಗಳಿಗೆ ಆಯುರ್ವೇದ ಪದವೀಧರರನ್ನೇ ಹಾಕಬೇಕು ಎಂದು ಸೂಚಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಮನ್ನಣೆ ಸಲ್ಲಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರುವ ಪಬ್ಲಿಕ್ ಹೆಲ್ತ್ ಮತ್ತು ಮೆಡಿಕಲ್ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆಮಾಡಿ ಸರಕಾರದ ಕೆಲವು ಲೋಪದೋಷಗಳನ್ನು ಮಾನ್ಯ ಸಭೆಯಲ್ಲಿ ಪ್ರಸ್ತಾಪಿಸಬೇಕೆಂದಿದ್ದೇನೆ. ಈ ದಿವಸ ಮಾನ್ಯ ಮಂತ್ರಿಗಳು ಈ ಇಲಾಖೆಯಲ್ಲಿ ಕೆಲವು ಸುಧಾರಣೆಗಳನ್ನು ತರುತ್ತಿದ್ದಾರೆ. ಮೆಡಿಕಲ್ ಕಾಲೇಜಿನಲ್ಲಿ ಸರಕಾರಕ್ಕಿರುವ ಕೆಲವು ಸೀಟುಗಳನ್ನು ಕೂಡ ಸೆಲೆಕ್ಷನ್ ಕಮಿಟಿಯ ವ್ಯಾಪ್ತಿಗೆ ತಂದು ಅನ್ಯಾಯವಾಗುವುದನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡಿದ್ದಾರೆ. ಆದರೆ ಈ ಸಭೆಯಲ್ಲಿ ಒಂದು ವಿಷಯ ಪ್ರಸ್ತಾಪವಾಡುತ್ತೇನೆ. ಇಂದು ಇಂಟರ್‌ವ್ಯೂ ಮಾರ್ಕ್ಸ್ ತೆಗೆದಿದ್ದಾರೆ. ಅದರಲ್ಲಿರುವ ತೊಂದರೆಯೇನೆಂಬುದನ್ನು ತಿಳಿಸಬೇಕೆಂದು ಪ್ರಾರ್ಥನೆಮಾಡುತ್ತೇನೆ. ಗ್ರಾಮಾಂತರಗಳಿಂದ ಬಂದಿರುವ ಮಕ್ಕಳು ಪೇಟೆಯಲ್ಲೇ ಬೆಳೆದು ಬರುವ ಮಕ್ಕಳಷ್ಟು ಅನುಭವ ಪಡೆದಿರುವುದಿಲ್ಲ. ಎಂ.ಬಿ.ಬಿ.ಎಸ್. ತರಗತಿಗೆ ವಿದ್ಯಾರ್ಥಿಗಳನ್ನು ಚುನಾಯಿಸುವಾಗ ಗ್ರಾಮಾಂತರಗಳಿಂದ ಬಂದಿರುವವರಿಗೆ ಬಹಳ ಅನ್ಯಾಯವಾಗುತ್ತದೆ. ಅಂಕಗಳ ಆಧಾರದಮೇಲೆ ಗ್ರಾಮಾಂತರಗಳವರಿಗೆ ಅವಕಾಶ ದೊರೆಯುವುದಿಲ್ಲ. ಇದಕ್ಕೇನಾದರೂ ಮಾಡಬೇಕಾದರೆ ರಾಜ್ಯಾಂಗ ಅಡ್ಡ ಬರುತ್ತದೆಂದು ಮುಖ್ಯ ಮಂತ್ರಿಗಳು ಹೇಳಿದರು. ಆದರೆ ಚುನಾವಣೆಯಲ್ಲಿ ಬಹಳ ಹಿಂದುಳಿದ ಜನರಿಗೆ ಸೌಲಭ್ಯ ಕೊಡಬೇಕಾದರೆ ರಾಜ್ಯಾಂಗ ತಿದ್ದುಪಡಿ ಮಾಡಬೇಕೆಂದು ಹೇಳಿದರೇ ಎಂದು ಪ್ರಶ್ನೆ ಮಾಡುತ್ತೇನೆ. ಸರಕಾರ ಕೆಲವು ಸಂದರ್ಭಗಳಲ್ಲಿ ಕೋರ್ಟಿನ ಸೂಚನೆ ಪ್ರಕಾರ ರಾಜ್ಯಾಂಗವನ್ನು ತಿದ್ದುಪಡಿ ಮಾಡಿದೆ. ಇದು ತಮ್ಮ ಪರಿಮಿತಿಯಲ್ಲಿಲ್ಲದಿದ್ದರೂ ಕೇಂದ್ರ ಸರ್ಕಾರದ ಪರಿಮಿತಿಯಲ್ಲಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಿಗೆ ಜ್ಞಾಪಕವಿರಬಹುದು. 1951 ರಲ್ಲಿ ಹಿಂದುಳಿದವರ ವರ್ಗಗಳಿಗೆ ವಿಶೇಷ ಸೌಲಭ್ಯ ಕಲ್ಪಿಸಿಕೊಡಲು, ಅವರಿಗೆ ಒಂದು ರಕ್ಷಣೆ ಕೊಡಲು ರಾಜ್ಯಾಂಗ ಶಾಸನಕ್ಕೆ ತಿದ್ದುಪಡಿಯಾಗಿದೆ.

ಶ್ರೀ ಎಚ್. ಡಿ. ದೇವೇ ಗೌಡ.—ಆದರೆ ತಾವು ಹೇಳಿದಂತೆ ನಾನು ಇಲ್ಲಿ ಅನಲೈಸು ಮಾಡಿ ಹೇಳುವುದಾದರೆ ಇವೊತ್ತಿಗೂ ತಾವು ಏನು ಸೂಚನೆ ಕೊಟ್ಟಿದ್ದೀರಿ ಅದರಂತೆ ಇಲ್ಲಿ ನಡೆಯುವುದು ಕಷ್ಟ ಮತ್ತು ಈಗ ಸೆಲೆಕ್ಷನ್ ಕಮಿಟಿಯಲ್ಲಿ ಏನು ಸೂತ್ರ ಇಡಬೇಕೆಂದು ಮಾಡಿದ್ದೀರೋ ಅದರಂತೆ ಮಾಡಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ಈಗೇನೋ ನೀವು ಸೆಲೆಕ್ಷನ್ ಕಮಿಟಿಯಲ್ಲಿ ಶೇಕಡಾ 25 ರಷ್ಟು ಮಾರ್ಕ್ಸ್ ಕೊಡುವುದನ್ನು ಕೈಬಿಡಬೇಕೆಂದು ಹೇಳಿದ್ದೀರಿ. ಇದನ್ನು ತಾವು ಮಾಡಿರುವುದು

ಸರಿಯಿಲ್ಲ ಅದಕ್ಕಾಗಿ ತಮ್ಮನ್ನು ತೆಗಳಬೇಕು ಎಂದು ನಾನು ಇಲ್ಲಿ ಹೇಳುತ್ತಿಲ್ಲ, ಸರಕಾರದವರು ಇಲ್ಲಿಯವರೆಗೆ ಏನು ಸೀಟುಗಳನ್ನು ಇಟ್ಟುಕೊಳ್ಳಬೇಕೆಂದು ಇದ್ದರು ಅದನ್ನೂ ಕಿತ್ತು ಹಾಕಬೇಕೆಂದು ತಾವು ಮಾಡಿರುವ ಕೆಲಸ ಶ್ಲಾಘನೀಯವಾದರೂ ಅದರಿಂದ ಜನರಿಗೆ ಹೆಚ್ಚು ಸೌಲಭ್ಯಗಳು ದೊರಕುತ್ತದೆಯೇ ಎನ್ನುವುದನ್ನೂ ತಾವು ಇಲ್ಲಿ ಆಲೋಚನೆ ಮಾಡಬೇಕು. ನಾವು ನೋಡಿದ ಹಾಗೆ ಮೆಡಿಕಲ್ ಕಾಲೇಜಿಗೆ ಸೀಟು ಸಿಕ್ಕುವ ವರ್ಗ ಎಂದರೆ ಒಂದು ಅವರು ಶ್ರೀಮಂತರಾಗಿರಬೇಕು, ಇನ್ನೊಂದು ಉನ್ನತ ವರ್ಗದವರೊಡನೆ ಸಂಪರ್ಕ ಹೊಂದಿದವರಾಗಿರಬೇಕು, ಇವೆರಡು ವರ್ಗದವರಿಗೆ ಮಾತ್ರ ಇಂದು ಸೀಟುಗಳು ಸಿಗುತ್ತಿವೆ, ನಾನು ಇದರಲ್ಲಿ ಜಾತೀಯವಾದವನ್ನು ತರುವುದಕ್ಕೆ ಇಷ್ಟಪಡುವುದಿಲ್ಲ, ಈಗ ಎಲ್ಲ ಮೆಡಿಕಲ್ ಕಾಲೇಜುಗಳಲ್ಲೂ ಸೀಟುಗಳನ್ನು ಹೇಗೆ ಕೊಟ್ಟಿದ್ದಾರೆ ಎನ್ನುವುದನ್ನು ನಾವು ಯೋಚನೆ ಮಾಡಿ ನೋಡುವುದಾದರೆ ನಾನು ಹೇಳಿದ ಮೇಲಿನ ಎರಡು ವರ್ಗದವರಿಗೇ ಸೀಟು

4–00 P.M.

ಗಳನ್ನು ಹಂಚಿರುವುದು ಗೊತ್ತಾಗುತ್ತದೆ, ಒಟ್ಟಿನಲ್ಲಿ ಸೀಟುಗಳನ್ನು ಹಂಚುವುದರಲ್ಲಿ ಧೋಕಾ ಆಗುತ್ತಿದೆ ಎಂದು ಇಷ್ಟು ಮಾತ್ರ ಹೇಳುತ್ತಿದ್ದೇನೆ, ಇದರ ಬಗ್ಗೆ ಸರಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಇದನ್ನು ಮಾಡಲು ಬೇಕಾದರೆ ರಾಜ್ಯಾಂಗಕ್ಕೆ ಸೂಕ್ತವಾದ ಒಂದು ತಿದ್ದುಪಡಿಯನ್ನು ಬೇಕಾದರೂ ತಂದು ಇದನ್ನು ಸರಿಪಡಿಸಬೇಕೆಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ರೂರಲ್ ಹಾಸ್‌ಪಿಟಲ್‌ಗಳ ಗೊಂದಲದ ಬಗ್ಗೆ ನಾನು ಇಲ್ಲಿ ಸ್ವಲ್ಪ ಹೇಳಬೇಕಾಗಿದೆ, ರೂರಲ್ ಹಾಸ್‌ಪಿಟಲ್‌ಗಳಿಗಾಗಿ ಇಲ್ಲಿ ತಾವು ಸುಮಾರು ಅರವತ್ತು ಲಕ್ಷ ಎಂದು ತೋರಿಸಿದ್ದೀರಿ, ಆದರೆ ಹೊರಗಿನ ಹಾಸ್‌ಪಿಟಲ್‌ಗಳಿಗಾಗಿ ತಾವು ಬರೀ 19 ಲಕ್ಷ ಎಂದು ಮಾತ್ರ ಇಲ್ಲಿ ಪ್ರೊವೈಡು ಮಾಡಿದ್ದೀರಿ, ಇದೇಕೆ ಈ ವ್ಯತ್ಯಾಸ ? ನಾನು ನಮ್ಮ ತಾಲ್ಲೂಕು ಹೊಳೆನರಸೀಪುರಕ್ಕೂ ಹಳೆಯ ಮೈಸೂರಿನ ಇತರ ಭಾಗಗಳಿಗೂ ಹೋಲಿಸಿ ಹೇಳುತ್ತಿಲ್ಲ, ಸುಮಾರು ಶೇಕಡಾ ಎಪ್ಪತ್ತರಷ್ಟು ಇರುವ ರೈತಾಪಿ ಜನರ ಅನುಕೂಲಕ್ಕಾಗಿ ಆಸ್ಪತ್ರೆಗಳನ್ನು ಮಾಡಿಸಿ ಅನುಕೂಲ ಮಾಡಿಸಿಕೊಡುವಾಗ ಇದರ ಕಡೆಗೆ ಸರಕಾರ ಏತಕ್ಕೆ ಗಮನ ಹರಿಸಲಿಲ್ಲ ಎಂದು ನಾನು ಇಲ್ಲಿ ಸರಕಾರವನ್ನು ಕೇಳಬೇಕಾಗಿದೆ. ಇದರಲ್ಲಿ ತಾವು ಹೇಳಿರುವಂತೆ ಮೊಫ್ಯೂಸಲ್ ಹಾಸ್‌ಪಿಟಲ್ಸ್‌ಗಳಿಗೆ ಮಾತ್ರ ಸುಮಾರು 19 ಲಕ್ಷ ಎಂದು ಒದಗಿಸಿದ್ದೀರಿ ಇದರಲ್ಲಿ ಎಲ್ಲ ಖರ್ಚುಗಳೂ ಸೇರುತ್ತದೆ, ತಾವು ಆರೋಗ್ಯ ಇಲಾಖೆಗಾಗಿ ಸುಮಾರು ಹನ್ನೊಂದು ಕೋಟಿ ಮೊವ್ವತ್ತಾರು ಲಕ್ಷದಷ್ಟು ಹಣ ಖರ್ಚು ಮಾಡುತ್ತಿರುವಾಗ ಮೊಫ್ಯೂಸಲ್ ಹಾಸ್‌ಪಿಟಲ್ಸ್ ಬಾಬಿಗಾಗಿ ಕೇವಲ 19 ಲಕ್ಷ ಎಂದೇಕೆ ನಿಗದಿ ಮಾಡಿದ್ದೀರಿ ? ಇದರ ಬಗ್ಗೆ ಮಾತನಾಡುತ್ತಾ ಶ್ರೀಮಾನ್ ನಾರಾಯಣಸ್ವಾಮಿಗಳೂ ಇಲ್ಲಿ ಹೇಳಿದರು ಪಂಚಾಯಿತಿಗಳವರು ಇಲ್ಲವೇ ತಾಲ್ಲೂಕಾ ಬೋರ್ಡಿನವರು ಆಸ್ಪತ್ರೆ ಕಟ್ಟಡಗಳನ್ನು ಕಟ್ಟಿಸಿ ಡಾಕ್ಟರುಗಳಿಗೆ ಕ್ವಾರ್ಟರುಗಳನ್ನು ಕಟ್ಟಿಸಿಕೊಟ್ಟರೆ ಆ ಮೇಲೆ ಸರಕಾರ ಇಲ್ಲಿಗೆ ಆಸ್ಪತ್ರೆ ಕೊಡಬೇಕು ಎಂದು ಅವರು ಹೇಳಿದರು ಇಲ್ಲಿ ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ, ತಾಲ್ಲೂಕು ಬೋರ್ಡು ಅಥವಾ ಪಂಚಾಯಿತಿಗಳು ಮಾಡದೇ ಇದ್ದರೆ ಅಲ್ಲಿ ಸರಕಾರದವರೇ ಆಸ್ಪತ್ರೆಗಳನ್ನು ತೆಗೆಯುತ್ತಾರೆ. ಈ ಸಂದರ್ಭದಲ್ಲಿ ನಮ್ಮ ಹೊಳೆನರಸೀಪುರದಲ್ಲಿರುವ ಒಂದು ಅಪ್‌ಗ್ರೇಡೆಡ್ ಡಿಸ್‌ಪೆನ್‌ಸರಿ ಬಗ್ಗೆ ಇಲ್ಲಿ ಹೇಳಬೇಕಾಗಿದೆ, ಸುಮಾರು ಐದು ವರ್ಷಗಳಿಂದಲೂ ಇದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತಲೇ ಇದ್ದೇನೆ, ಏತಕ್ಕಾಗಿ ಹೇಳುತ್ತಿದ್ದೇನೆ ಎಂದರೆ, ಸರಕಾರದ ಜನರಲ್ ಪಾಲಿಸಿಯನ್ನು ರಿವೈವ್ ಮಾಡುವುದಕ್ಕಾಗಿ ಇಲ್ಲಿ ಹೇಳುತ್ತಿದ್ದೇನೆ, ಮತ್ತು ತಮ್ಮ ಗಮನವನ್ನು ಇದರ ಕಡೆಗೆ ಸೆಳೆಯಲೂ ಇಷ್ಟಪಡುತ್ತೇನೆ, ತಾವು ಆಸ್ಪತ್ರೆಗಳನ್ನು ಕೊಡುವಾಗ ಏನು ಒಂದು ಷರತ್ತು ಹಾಕುತ್ತೀರಿ ಎಂದರೆ, ತಾಲ್ಲೂಕಾ ಬೋರ್ಡುಗಳವರು ಹಾಗೂ ಮುನಿಸಿಪಾಲಿಟಿಗಳವರು ರಿಕರಿಂಗ್ ಎಕ್ಸ್‌ಪೆಂಡಿಚರು ಇಷ್ಟು ನಾನ್ ರೆಕರಿಂಗ್ ಎಕ್ಸ್‌ಪೆಂಡಿಚರು ಇಷ್ಟು ಕೊಡಬೇಕೆಂದು ಒಂದು ಷರತ್ತನ್ನು ಹಾಕಿದ್ದೀರಿ, ಆದರೆ ಸರಕಾರದಲ್ಲಿ ನಾನು ಇದರ ಬಗ್ಗೆ ಪ್ರಶ್ನೆ ಮಾಡುವುದು ಒಂದೊಂದು ಕಡೆಗೆ ಒಂದೊಂದು ರೀತಿಯಾಗಿ ವ್ಯತ್ಯಾಸ ಮಾಡಿ ನಿಯಮಗಳನ್ನು ಏಕೆ ಬದಲಾವಣೆ ಮಾಡುತ್ತೀರಿ ಎಂದು. ಕೃಷ್ಣರಾಜನಗರದಲ್ಲಿ ಒಂದು ಅಪ್‌ಗ್ರೇಡೆಡ್ ಡಿಸ್‌ಪೆನ್ಸರಿ ತೆಗೆಯುವಾಗ ಖಾಸಗೀಯವರಿಂದ ಮೂರನೇ ಒಂದು ಭಾಗದಷ್ಟು ಹಣ ಕೊಟ್ಟು ಉಳಿಕೆಯಾದ ಮೂರನೆ ಎರಡು ಭಾಗ ಹಣ ಸರಕಾರದವರು ಒದಗಿಸಿ ರಿಕರಿಂಗ್ ಎಕ್ಸ್‌ಪೆನ್‌ಸಸ್‌ಗಾಗಿ ತಾಲ್ಲೂಕಾ ಬೋರ್ಡಿನವರು ಹಾಗೂ ಪಂಚಾಯಿತಿಗಳವರು ತಲಾ 25% ಕೊಡಬೇಕೆಂದು ಮಾಡಿದ್ದಾರೆ. ಕೆಲವು ಕಡೆ ಶೇಕಡಾ ಐವತ್ತರಷ್ಟು ಸರಕಾರದವರೇ ರೆಕರಿಂಗ್ ಎಕ್ಸ್‌ಪೆಂಡಿಚರಿಗಾಗಿ ಕೊಟ್ಟಿರುತ್ತಾರೆ, ನನ್ನ ಊರಿನಲ್ಲಿರುವ ಒಂದು ಆಸ್ಪತ್ರೆಗೇ ಒಂದು ರೀತಿ ಬೇರೆ ಊರಿನಲ್ಲಿರುವ ಒಂದು ಆಸ್ಪತ್ರೆಗೇ ಒಂದು ರೀತಿಯಾಗಿ ತಾರತಮ್ಯವೇಕೆ ಮಾಡುತ್ತೀರಿ ಎಂದು ಇಲ್ಲಿ ಕೇಳಬೇಕಾಗಿದೆ. ಇದು ತಮ್ಮ ಕಾಲದಲ್ಲಿ ಆಗಿಲ್ಲ, ಆದರೂ ಈಗ ತಾವು ಇದರ ಬಗ್ಗೆ ಒಂದೇ ರೀತಿ

(ಶ್ರೀ ಎಚ್. ಡಿ. ದೇವೇಗೌಡ)

ಯಾದ ನೀತಿಯನ್ನು ಜಾರಿಗೆ ತರಲು ಪ್ರಯತ್ನ ಮಾಡಬೇಕೆಂದು ಇಲ್ಲಿ ತಮ್ಮ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ. ಈಗ ಇರುವ ತಾಲ್ಲೂಕಾ ಬೋರ್ಡುಗಳ ಆಸ್ಪತ್ರೆ ಹಾಗೂ ಪಂಚಾಯತಿಗಳ ಆಸ್ಪತ್ರೆಗಳ ಆಡಳಿತವನ್ನು ಸರಕಾರವೇ ವಹಿಸಿಕೊಳ್ಳುವುದು ಸೂಕ್ತ, ಮತ್ತು ತಾಲ್ಲೂಕಾ ಬೋರ್ಡುಗಳಲ್ಲಿರುವ ಹಾಗೂ ಪಂಚಾಯತಿಗಳಲ್ಲಿರುವ ಆಸ್ಪತ್ರೆಗಳಲ್ಲಿ ತಾರತಮ್ಯ ಮಾಡುವುದು ಸರಿಯಲ್ಲ. ಇದರ ಬಗ್ಗೆ ಪ್ರಸ್ತಾಪ ಮಾಡುತ್ತಾ ಮಾನ್ಯ ಮಂತ್ರಿಗಳ ಗಮನವನ್ನು ಇನ್ನೊಂದು ವಿಚಾರದ ಬಗ್ಗೆ ಸೆಳೆಯಬೇಕೆಂದು ಇಚ್ಛೆಪಡುತ್ತೇನೆ. ತಾಲ್ಲೂಕಾ ಬೋರ್ಡುಗಳವರೇ ಆಯುರ್ವೇದದ ಆಸ್ಪತ್ರೆಗಳನ್ನು ಮೇಂಟೇನ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದೀರಿ, ಅದಕ್ಕಾಗಿ ಸುಮಾರು 500-600 ರೂಪಾಯಿಗಳಷ್ಟು ಗ್ರಾಂಟನ್ನೂ ಕೊಡುತ್ತಿದ್ದೀರಿ ತಾಲ್ಲೂಕು ಬೋರ್ಡುಗಳಿಗೆ ಕೆಲವು ಕಡೆ ಹೆಚ್ಚು ಹಣ ಕೂಡ ಕೊಡುತ್ತಿದ್ದೀರಿ. ಇದರಲ್ಲಿ ಅಲ್ಲಿರುವ ಡಾಕ್ಟರುಗಳ ಸಂಬಳಕ್ಕೆ ಸುಮಾರು ಮೂರು-ಮೂರೂವರೆ ಸಾವಿರದಷ್ಟು ಖರ್ಚು ಬರುತ್ತದೆ, ಇದರಿಂದಾಗಿ ಆ ಬೋರ್ಡುಗಳವರು ಆಸ್ಪತ್ರೆಗಳನ್ನು ನಡೆಸಲು ಶಕ್ತಿ ಇರುವುದಿಲ್ಲ, ಇದಕ್ಕಾಗಿ ಸರಕಾರದವರೇ ಈ ಆಸ್ಪತ್ರೆಗಳ ಆಡಳಿತವನ್ನು ವಹಿಸಿಕೊಂಡರೆ ಅನುಕೂಲವಾಗುತ್ತದೆ, ಈಗ ತಾಲ್ಲೂಕಾ ಬೋರ್ಡುಗಳವರೇ ಕೆಲವು ಕಡೆಗಳಲ್ಲಿ ಆಸ್ಪತ್ರೆಗಳನ್ನೂ ಮೇಂಟೇನ್ ಮಾಡಬೇಕು, ಹೈಸ್ಕೂಲುಗಳನ್ನು ಮೇಂಟೇನ್ ಮಾಡಬೇಕು ಮತ್ತು ಇನ್ನಿತರ ಸೌಕರ್ಯಗಳನ್ನೂ ಮಾಡಬೇಕು ಎಂದು ಇರುವಾಗ ಇವರಿಗೆ ಹಣದ ಕೊರತೆ ಹೆಚ್ಚಾಗಿ ಬರುತ್ತದೆ, ಈಗ ಸರಕಾರದವರೇನೋ ಶೇಕಡಾ ಐವತ್ತರಷ್ಟು ಕೊಡುತ್ತೇವೆ, ಪಂಚಾಯತಿ ಹಾಗೂ ತಾಲ್ಲೂಕು ಬೋರ್ಡುಗಳವರು ಶೇಕಡಾ ಐವತ್ತರಷ್ಟು ಕೊಡಬೇಕು ಎಂದು ಮಾಡಿದ್ದರೂ ಇವರಲ್ಲಿ ಹಣ ಕೊಡಲು ಶಕ್ತಿ ಸಾಲದೇ ಇರುವುದರಿಂದ ಸರಕಾರದವರೇ ಇದರ ಆಡಳಿತವನ್ನೆಲ್ಲಾ ವಹಿಸಿಕೊಳ್ಳುವುದು ಸೂಕ್ತವಾಗಿದೆ. ಇದರ ಬಗ್ಗೆ ತಾವು ಸ್ವಲ್ಪ ಆಲೋಚನೆ ಮಾಡಬೇಕು, ಮತ್ತು ಒಂದು ಯೂನಿಫಾರಂ ಪಾಲಿಸಿಯನ್ನು ಹಾಕಿಕೊಂಡು ಕೆಲಸ ಮಾಡಬೇಕು. ಈಗೇನೋ ಪಂಚಾಯತಿಗಳವರು ಶೇಕಡಾ 25 ರಷ್ಟು ತಾಲ್ಲೂಕು ಬೋರ್ಡುಗಳವರು ಶೇಕಡಾ 25 ರಷ್ಟು ಕೊಡಬೇಕು, ಸರಕಾರದವರು ಉಳಿಕೆಯಾದ ಐವತ್ತರಷ್ಟು ಕೊಡುತ್ತಾರೆ ಎಂದು ಇದೆ. ಇದನ್ನು ಶಕ್ತಿ ಇರುವ ಪಂಚಾಯತಿಗಳು ಕೊಡುತ್ತವೆ. ಆದರೆ ಕೆಲವು ಕಡೆ ಇರುವ ಪಂಚಾಯತಿಗಳಲ್ಲಿ ಹಾಗೂ ತಾಲ್ಲೂಕು ಬೋರ್ಡುಗಳಲ್ಲಿ ಇಷ್ಟು ಹಣ ಕೊಡಲು ಶಕ್ತಿ ಇರುವುದಿಲ್ಲ ಅದರಿಂದಾಗಿ ನಾನು ಸರಕಾರದವರಲ್ಲಿ ಹೇಳುವುದು ಸರಕಾರದವರೇ ಈಗಿರುವ ಶೇಕಡಾ ಐವತ್ತು ಪರ್ಸೆಂಟನ್ನೂ ಕೊಟ್ಟು ಇಂತಹ ಕಡೆಗಳಲ್ಲಿ ಆಸ್ಪತ್ರೆಗಳನ್ನು ನಡೆಸಬೇಕು ಎಂದು ನಾನು ಸೂಚಿಸುತ್ತೇನೆ. ಇದಕ್ಕಾಗಿ ಸ್ವಲ್ಪ ನಿಯಮವನ್ನು ಬದಲಾವಣೆ ಮಾಡುವುದು ಅಗತ್ಯವಾದರೆ ಅದನ್ನೂ ಮಾಡಿಕೊಂಡು ಮಾಡುವುದು ಸೂಕ್ತವಾಗಿದೆ. ಒಂದು ವೇಳೆ ಆಗುವುದಿಲ್ಲ ಎಂದರೆ ನಾನ್ ರಿಕರಿಂಗ್ ಎಕ್ಸ್‌ಪೆಂಡಿಚರನ್ನಾದರೂ ಕೊಟ್ಟು ರೆಕರಿಂಗ್ ಎಕ್ಸ್‌ಪೆಂಡಿಚರನ್ನು ಪ್ರಪೋರ್ಷನೇಟ್ ಆಗಿ ಇತರರಿಗೆ ಹಂಚಿಕೆ ಮಾಡಿಕೊಂಡು ತಾಲ್ಲೂಕು ಬೋರ್ಡುಗಳು ಹಾಗೂ ಸ್ಥಳೀಯ ಸಂಸ್ಥೆಗಳು ಆಸ್ಪತ್ರೆಗಳನ್ನು ಸರಿಯಾಗಿ ನಡೆಸಲು ಪ್ರಯತ್ನ ಮಾಡಬೇಕು, ಇದನ್ನು ಸರಕಾರ ಸೂಕ್ತ ರೀತಿಯಲ್ಲಿ ಸರಿಪಡಿಸಬೇಕು ಎಂದು ನಾನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನೊಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಹೇಳಲು ಇಷ್ಟಪಡುತ್ತೇನೆ. ನಾವು ಎಷ್ಟೋ ದೊಡ್ಡ ಆಸ್ಪತ್ರೆಗಳಲ್ಲಿ ಔಟ್ ಪೇಷೆಂಟ್ ಶಾಖೆಯನ್ನು ನೋಡುತ್ತಿರುತ್ತೇವೆ. ಈ ಔಟ್ ಪೇಷೆಂಟ್ ವಾರ್ಡ್‌ಗಳಲ್ಲಿ ಆಯಾ ಡಿಸ್ಟ್ರಿಕ್ಟ್‌ಗಳಲ್ಲಿ ಅಲ್ಲಿನ ಡಿ. ಎಂ. ಒ. ದರ್ಜೆಯ ಡಾಕ್ಟರು ಇರುತ್ತಾರೆ. ಅವರೇ ಎಲ್ಲರನ್ನೂ ನೋಡಬೇಕು. ಆದರೆ ಇಲ್ಲಿ ನಾವು ನೋಡಿದ ಹಾಗೆ ಡಿ. ಎಂ. ಒ. ಗೆ ತಿಳಿದಿರುವವರು ಅಥವ ಉನ್ನತ ವರ್ಗದ ಶ್ರೀಮಂತರು ಬಂದರೆ ಅವರಿಗಾಗಿ ಸ್ಪೆಷಲ್ ಟ್ರೀಟ್‌ಮೆಂಟ್ ಕೊಡಲು ಹೋಗುತ್ತಾರೆ. ಇಲ್ಲಿ ಔಟ್‌ಪೇಷಂಟ್ ವಾರ್ಡ್‌ನಲ್ಲಿ ಯಾರೋ ಒಬ್ಬರು ಹೊಸ ವೈದ್ಯರು ನೋಡಲು ಇರುತ್ತಾರೆ. ಇದರಿಂದ ರೋಗಿಗಳ ರೋಗವನ್ನು ಸರಿಯಾಗಿ ಡಯಾಗ್ನೋಸ್ ಮಾಡುವುದಕ್ಕೆ ಆಗುವುದಿಲ್ಲ. ಇಂತಹ ಪದ್ಧತಿಗಳನ್ನು ಸರಕಾರ ತಪ್ಪಿಸಲಿಕ್ಕೆ ಪ್ರಯತ್ನ ಮಾಡಬೇಕು.

Sri K. PUTTASWAMY.—There may be such instances. But I would only like the Hon'ble Member to avoid generalisation. Once I paid a visit at 3 O'clock in the aft ernoon to a district hospital and found that the district surgeon was attending to patients in the out-patient ward. If I generalise that always district surgeon himself attends to patients in out-patient wards, that would also be not correct.

ಶ್ರೀ ಎಚ್. ಡಿ. ದೇವೇಗೌಡ.—ನಾನು ಇಲ್ಲಿ ಹೇಳುತ್ತಿರುವುದು, ಸಾಮಾನ್ಯವಾಗಿ ದೊಡ್ಡ ಆಸ್ಪತ್ರೆಗಳಲ್ಲಿ ಬೆಳಗ್ಗೆ ಎಂಟೂವರೆ ಗಂಟೆಯಿಂದ ಹನ್ನೆರಡೂವರೆಗಂಟೆವರಗೆ ಔಟ್ ಪೇಷಂಟ್ ಇಲಾಖೆ ತೆರದು ಇರುತ್ತಾರೆ, ಮತ್ತು ಈ ವೇಳೆಯಲ್ಲಿ ಇಲ್ಲಿ ಜನರ ಒತ್ತಡ ಬಹಳ ಜಾಸ್ತಿ ಇರುತ್ತದೆ, ಇಂತಹ ಸಂದರ್ಭದಲ್ಲಿ ಅಲ್ಲಿ ಡಿ. ಎಂ. ಒ. ರವರೇ ಇದ್ದು ರೋಗಿಗಳನ್ನು ಪರೀಕ್ಷೆ ಮಾಡುವುದು ಉತ್ತಮ. ಇತರರು ಯಾರಾದರೂ ಬಂದರೆ ಅವರನ್ನು ಬಿಟ್ಟು ಅವರಿಗಾಗಿ ಬೇರೆಯವರಿಗೆ ಟ್ರೀಟ್‌ಮೆಂಟು ಕೊಡಲಿಕ್ಕೆ ಆಗ ಹೋಗುವುದು ಸರಿಯಲ್ಲ, ಇದನ್ನು ತಪ್ಪಿಸಬೇಕು, ಇದಕ್ಕಾಗಿ ಸರಕಾರ ಬೇಕಾದರೆ ಒಂದು ಸ್ಪೆಷಲ್ ಸರ್‌ಕ್ಯುಲರ್‌ನ್ನಾದರೂ ಕೊಟ್ಟು ಈ ಪದ್ಧತಿಯನ್ನು ತಪ್ಪಿಸಬೇಕೆಂದು ನಾನು ಇಲ್ಲಿ ಸರಕಾರದ ಗಮನವನ್ನು ಸೆಳೆಯಲು ಇಚ್ಛೆಪಡುತ್ತೇನೆ. ಕೊನೆಯದಾಗಿ ನಾನು ಮೊದಲೇ ರೂರಲ್ ಹಾಸ್‌ಪಿಟಲ್‌ನ ಬಗ್ಗೆ ಹೇಳುವಾಗ ಹೇಳಿದ್ದೆ, ಇದಕ್ಕೆ ಸರಕಾರ ಕೊಡುವ ಹಣವನ್ನು ಇನ್ನೂ ಜಾಸ್ತಿ ಕೊಡಬೇಕು, ಈಗ ಕೊಡುತ್ತಿರುವ ಹಣ ಸಾಲದು, ಇದರಿಂದ ನಮ್ಮ ಹಳ್ಳಿಯಲ್ಲಿರುವ ಜನಕ್ಕೆ ಬಹಳ ಅನ್ಯಾಯಗಳು ಆಗುತ್ತಿವೆ. ಇನ್ನು ಒಂದೇ ಒಂದು ನಿದರ್ಶನವನ್ನು ಇಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಇವತ್ತು ಹಳ್ಳಿಯಿಂದ ಯಾರಾದರೂ ಒಬ್ಬ ಪೇಷಂಟು ಮೇಜರ್ ಆಪರೇಷನ್‌ಗೆ ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಗೆ 100-200 ಮೈಲಿ ದೂರದಿಂದ ಬಂದರೆ ಅವರನ್ನು ಯಾವ ರೀತಿ ಟ್ರೀಟ್ ಮಾಡುತ್ತಾರೆ ಎಂಬುದನ್ನು ತಾವು ಸ್ವಲ್ಪ ಗಮನಿಸಬೇಕು. ನಾನೇ ಒಬ್ಬ ಪೇಷಂಟನ್ನು ಅಲ್ಲಿಗೆ ಕರೆದು ಕೊಂಡು ಹೋಗಿ ನೋಡಿಸಿದ್ದೇನೆ. ಅಲ್ಲಿ ಏನು ಮಾಡುತ್ತಾರೆ ಎಂದರೆ, ಆತನನ್ನು ಒಂದು ಸೆಕ್ಷನ್ ನಿಂದ ಇನ್ನೊಂದು ಸೆಕ್ಷನ್‌ಗೆ ಡೈರೆಕ್ಟ್ ಮಾಡುತ್ತಾರೆ. ಒಂದು ಸೆಕ್ಷನ್‌ನಲ್ಲಿ ಇವತ್ತಿನ ದಿನ ಎಕ್ಸಾಮಿನ್ ಮಾಡಿದಮೇಲೆ ಇನ್ನೊಂದು ಸೆಕ್ಷನ್‌ಗೆ 8 ದಿನ ಬಿಟ್ಟುಕೊಂಡು ಬಾ ಎಂದು ಅನ್ನುತ್ತಾರೆ. ಅದು ಆದಮೇಲೆ ನ್ಯೂರಾಲಜಿ ಡಿಪಾರ್ಟಮೆಂಟಿಗೆ ಹೋಗಬೇಕು, ಅಲ್ಲಿಗೆ ಹೋಗಬೇಕು ಇಲ್ಲಿಗೆ ಹೋಗ ಬೇಕು ಅಂತ ಹೇಳಿ ಆ ಪೇಷೆಂಟಿಗೆ ಪ್ರಿಲಿಮಿನರಿ ಎಕ್ಸಾಮಿನೇಷನ್ ಮುಗಿಯುವ ಹೊತ್ತಿಗೆ ಎರಡು ಮೂರು ತಿಂಗಳು ಆತ ತಿರುಗಿ ತಿರುಗಿ ಆತನಿಗೆ ಪ್ರಾಣ ಹೋಗತಕ್ಕ ನಿದರ್ಶನಗಳು ಇವೆ. ಬೆಂಗಳೂರಿನಲ್ಲಿರತಕ್ಕ ಈ ಆಸ್ಪತ್ರೆಯಲ್ಲಿ ಸಾಮಾನ್ಯ ಜನರಿಗೆ ಯಾವ ಒಂದು ಅನುಕೂಲವೂ ದೊರೆಯುವುದಿಲ್ಲ, ತುಂಬಾ ಕಿರುಕುಳ ಆಗುತ್ತಾ ಇದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳು ವುದಕ್ಕೆ ಇಚ್ಛಿಸುತ್ತೇನೆ. 200 ಮೈಲಿ ದೂರದಿಂದ ಬಂದು ಮತ್ತೆ ಪುನಃ ಎಂಟು ದಿವಸದ ಮೇಲೆ ಇನ್ನೊಂದು ಸೆಕ್ಷನ್‌ನಲ್ಲಿ ಪರೀಕ್ಷೆ ಮಾಡಿಸಿಕೊಳ್ಳಲಿಕ್ಕೆ ಬರಬೇಕೆಂದರೆ ಸಾಮಾನ್ಯ ಜನರಿಗೆ ಬಹಳ ಕಷ್ಟ. ಈ ಕಿರುಕುಳವನ್ನು ತಪ್ಪಿಸಿ ಹಳ್ಳಿಗಾಡಿನಿಂದ ಬರತಕ್ಕ ಜನರಿಗೆ ದೊರೆಯಬೇಕಾದ ಸೌಲಭ್ಯ ಏನಿದೆ ಅದನ್ನು ಒಂದೇ ಕಂಟಿನ್ಯೂಯಸ್ ಪ್ರೊಸೆಸ್‌ನಲ್ಲಿ ದೊರಕಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಸಲಹೆಮಾಡಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri H. C. LINGA REDDY (Malur).— Mr. Chairman Sir, I rise to accord my support to the Demands placed before this Hon'ble House by the Minister for Health and while doing so Sir, I would like to make a few observations.

The Hon'ble Minister for Health the other day said that till we will be in a position to give doctors, we will not be in a position to start new hospitals. At present, there are a number of hospitals without doctors and where there are doctors, there are no medicines in sufficient quantities. Even essential materials such as syringe bandage material, etc., are not sufficiently available. In the rural areas, there are a number of hospitals, I think to the extent of about of more than one-third, where there are no doctors at all; and now there are eight medical colleges in the State—four Government medical colleges and four private medical colleges. From these colleges, there are a number of students coming out successful with the M.B.B.S. degree every year. In spite of this, we see that there are no sufficient number of doctors to man our hospitals. I think our Health Department has been following a very salutary principle of giving one hospital for every 15 thousand population and

(SRI I. C. LINGA REDDY)

not 30,000 population, as one Hon'ble Member suggested this morning. At this rate, we will have to give a number of doctors and I think many more health units and dispensaries will also have to be opened. The dearth of doctors in the State creates a very serious situation, so much so, it is very necessary that we should seriously consider this aspect of the matter and find out the exact reason why we do not have sufficient number of doctors to man the hospitals. I am told that we have a few M.B.B.S. doctors available at present recruited by the P.S.C. but because all the hospitals in the taluks are not upgraded, except the taluk head-quarters hospitals, the Government are not in a position to post the M.B.B.S. doctors to the mofussil hospitals. Therefore, I request the Government to take a decision very early so that all the available M.B.B.S. doctors may be posted to the rural hospitals.

Again Sir, with regard to giving of seats in these medical colleges, which are eight in number—it is a very big number—no other State can boast of so many as eight medical colleges. When we have so many medical colleges, we have to plan and see that we get sufficient number of doctors to man our hospitals. Why is that we do not have sufficient number of doctors ? These M.B.B.S. doctors after passing out of the colleges, will not be anxious to go back to the villages. It is necessary that we should take an agreemenet from them that at least for a period of five years, they should serve in the mofussil areas and that unless they do so, they will not be given seats or they will not be given the degree of M.B.B.S. Unless we do some such thing, we cannot force them to go to mofussil areas.

Again Sir, in mofussil areas, it is not necessary that we should have M.B.B.S. only. Some time ago, we had the L.M.Ps. and we had two medical schools in the State. I do not think there would have been much harm caused if the two medical schools continued to turn out L.M.P.s, because these L.M.Ps. would be content to live in rural areas and render service to the rural folk. But now, once the Doctors get their M.B.B.S. degree, they want to go to foreign countires because of their high qualification and they want to have their practice in big places like Bangalore where there is the Bowring Hospital, the Victoria Hospital and where there is good scope for their development. They want city life. Therefore Sir, even now I suggest, it is high time that the Government thinks of re-introducing the L.M.P. course so that these people may go and serve in the mofussil areas.

There is one more reason why many of our hospitals remain unmanned by Doctors. We see a number of doctors resigning from Government service. That is because of the wrong policy which the Government has been following with regard to transfer of doctors. It is only in the Medical Department, we have this rule of transferring doctors and other staff every two years very rigidly enforced. In the other Departments also, there is that rule. Every 2 to 3 years, they

will be transferred. But here, automatically, they will be transferred irrespective of the distance and irrespective of ones convenience. For this reason, many doctors feel compelled to resign and set up private practice. Doctors when they see that they get good remuneration from private practice, they do not see why they should go to distant places.

Another reason is, the Medical Department is OFFICERS' RAJ. We do not have PEOPLES RAJ in the Medical Department. The Director of Health Service and his subordinates are not treating doctors properly. Because of this principle of transfer of these doctors, every two years, these doctors, lady doctors, as well as male doctors will have to keep the Director of Health Services in good humour for a period of two years. If they do so, they will have easy access to him and so they get convenient places. These doctors who will not have easy access to him, they will be shunted to long distances very arbitrarily. And again in our own district of Kolar, there is a D.H.O. who is an L.M.P, It is usually a place where an MBBS Doctor should have been posted.

Sri K. PUTTASWAMY.—As a result of States Reorganisation he came into that grade. What shall we do ?

Sri H. C. LINGA REDDY.—This Doctor is so dictatorial that there are so many complaints against him. I have also the very same complaints made by others against him but I would not like to divulge them in the open assembly here; I will convey them to the hon. Minister privately. In spite of all these complaints, he is going on merrily in the District without caring for the conveneince of his subordinate Doctors, mid-wives and nurses in several places in the hospitals; and the result is the Medical Department in that District is not working properly.

Next, I would like to emphasise that we should have Mobile Hospitals. It is not possible to have mobile hospitals for each Taluk because it may prove very costly. We may have one mobile hospital for three or four Taluks or for each Sub-Division. If there is one mobile van and if it could go round with a Doctor and with medicines and equipment to several areas where there will be communicable diseases, the villagers will be in a position to see the Doctor and take his advice and medical treatment. That will be of very great help. In Kolar District leprosy is very rampant. It is very necessary that some arrangement should be made for treatment of these leprosy patients, unmixed with the other patients and kept in a separate colony. An Isolation Hospital may be opened for the leprosy patients and they may be treated in that place.

With regard to the distribution of seats in the Medical Colleges, better we follow the system of Madras. They are giving a few seats district-wise and even in our State it is better we follow that system. It is better that we abolish the capitation fee system. This capitation fee system is benefiting the Andhras, the Keralites and the Maharashtrians. This is a very vicious system also. Our students will be deprived of a number of seats. I hope Government would follow up my suggestions very early.

With these few remarks, I welcome the Demand placed before the House by the hon. Minister.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇಟ್ಟಿರುವ ಇಂದಿನ ಬೇಡಿಕೆ ಏನು ಇದೆಯೋ ಅದನ್ನು ವಿರೋಧಿಸುತ್ತಾ ಸರ್ಕಾರದವರು ಕೆಲವು ಇಲಾಖೆಗಳಲ್ಲಿ ಖರ್ಚು ಮಾಡಿರತಕ್ಕ ಹಣ ಯಾವ ರೀತಿ ಅಕ್ರಮವಾಗಿ ಖರ್ಚಾಗಿದೆ ಎನ್ನುವ ವಿಷಯ ವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಆಡಿಟ್ ರಿಪೋರ್ಟ್ಸ್ ಆನ್ ದಿ ಅಕೌಂಟ್ಸ್ ಫಾರ್ 1965-66ರ ಪೇಜು 60ರಲ್ಲಿ ನಮ್ಮಲ್ಲಿ ಹೆಲ್ತ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುತ್ತಾ ಹೀಗೆ ಹೇಳಿದ್ದಾರೆ

"Issue of diet in excess of scale—The scale of 'milk and bread diet' for convalescent patients prescribed by Government includes plantains of the weight of 2 ounces (56 grammes approximately) and milk at $\frac{3}{4}$ litre per patient. Two instances in which issues exceeded the scale are mentioned below :

(i) in the General Hospital, Mandya, plantains were issued at the scale of 8 ounces (227 grammes approximately) during the period April, 1962 to May, 1964 resulting in an excess expenditure of about Rs. 11,000. The District Surgeon, Mandya, stated in May, 1966 that in his opinion, his office 'must have misinterpreted the Government Orders and made issues as noted above.'

The matter was also reported to Government in March, 1965 ; their reply is still awaited (November 1966)."

ಹೆಲ್ತ್ ಸರ್ವಿಸ್ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟು ಖರ್ಚು ಮಾಡಬೇಕೋ ಅದಕ್ಕಿಂತ 11 ಸಾವಿರ ರೂಪಾಯಿಗಳನ್ನು ಹೆಚ್ಚು ಖರ್ಚು ಮಾಡಿದ್ದಾರೆ. ಇದನ್ನು ಡಿಸ್ಟ್ರಿಕ್ಟ್ ಸರ್ಜನ್ನೇ ಒಪ್ಪಿಕೊಂಡಿ ದ್ದಾರೆ. ಇದಕ್ಕೆ ಕಾರಣ ಸರ್ಕಾರಿ ನೌಕರರಿಂದ ಆರ್ಡರ್ ಇಂಟರ್‌ಪ್ರಿಟ್ ಆಗಿರುವುದು ಎಂದು ಹೇಳುತ್ತಾರೆ. ಇಲ್ಲಿಯವರೆಗೆ ಸರ್ಕಾರದಿಂದ ಹಾಗೆ ಖರ್ಚು ಮಾಡಿರುವುದಕ್ಕೆ ಉತ್ತರ ಬಂದಿಲ್ಲ ಅನ್ನತಕ್ಕಂಥಾದ್ದು ಈ ವರದಿಯಿಂದ ಗೊತ್ತಾಗುತ್ತದೆ. ಅದೇ ರೀತಿ ಕೋಲಾರ ಗೋಲ್ಡ್‌ಫೀಲ್ಡ್ ನಲ್ಲಿರತಕ್ಕಂಥ ಆಸ್ಪತ್ರೆಯಲ್ಲಿ ಹಾಲಿಗಾಗಿ ಇಷ್ಟೇ ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದಾರೆ. 750 ಲೀಟರ್ ಕೊಡಬೇಕು ಎಂದು ಇದ್ದರೆ, 852 ಕೊಟ್ಟು ಹೆಚ್ಚಾಗಿ ಖರ್ಚಾಗಿರುವುದರಿಂದ ಒಟ್ಟು 7,110 ರೂಪಾಯಿ ಹೆಚ್ಚು ಖರ್ಚಾಗಿದೆ ಇದು ಅಕ್ರಮ. ಇದನ್ನು ಮಂತ್ರಿವರ್ಯರ ಗಮನಕ್ಕೆ ಏತಕ್ಕಾಗಿ ತರುತ್ತಿದ್ದೇನೆ ಎಂದರೆ, ಜಾಸ್ತಿ ಕೊಟ್ಟಿರುವುದಕ್ಕೆ ಯಾವುದಕ್ಕೆ ಕೊಟ್ಟಿದ್ದಾರೆ ಎನ್ನುವ ಜವಾಬು ಇನ್ನೂ ಬಂದಿಲ್ಲ. ಇದನ್ನು ಸಭೆಯ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

ಒಂದು ಓಮ್ನಿ ಬಸ್ಸನ್ನು ಕರ್ನಾಟಕ ಮೆಡಿಕಲ್ ಕಾಲೇಜಿಗಾಗಿ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಹೀಗೆ ಹೇಳಿದ್ದಾರೆ :

" A Fargo omnibus costing about Rs. 46,500 purchased for use by the Karnatak Medical College was received in December 1962. The bus was found to be oversized and could not be put on the road till August 1965."

ಅದು 1962ರಲ್ಲಿ ಕಾಲೇಜಿಗೆ ಬಂತು. ಅದು ಓವರ್‌ಸೈಜ್ ಆದ್ದರಿಂದ ಅದನ್ನು ಆಗಸ್ಟ್ 1965ರವರೆಗೂ ರಸ್ತೆ ಮೇಲೆ ಉಪಯೋಗಿಸುವುದಕ್ಕೆ ಆಗಲಿಲ್ಲ. ನನಗೆ ತಿಳಿದ ಹಾಗೆ ಇಷ್ಟು ದಿವಸದವರೆಗೆ ಕೆಲಸ ಮಾಡದೇ ಹಾಗೆಯೇ ಇತ್ತು. ಇದರ ಜೊತೆಗೆ 4 ಜನ ಡ್ರೈವರುಗಳಿಗೆ ಕೆಲಸ ಇಲ್ಲದೆ 7,059 ರೂಗಳನ್ನು ಅದಕ್ಕಾಗಿ ಖರ್ಚು ಮಾಡಿದ್ದೀರಿ. ಇದನ್ನು ನೋಡಿದರೆ ನಮ್ಮ ಸರ್ಕಾರಿ ಹಣ ಹೇಗೆ ಅನಾವಶ್ಯಕವಾಗಿ ಖರ್ಚಾಗುತ್ತಿದೆ ಎಂದು ಗೊತ್ತಾಗುತ್ತದೆ. ಈ ಬಸ್ಸಿನ ಖರೀದಿ 46½ ಸಾವಿರ ರೂಪಾಯಿ. ಗೌರ್ನಮೆಂಟ' ಆಡಿಟ್ ರಿಪೋರ್ಟ್ 1965-66 ಪ್ರಕಾರ ಈ ರೀತಿ ಸರ್ಕಾರ ಖರ್ಚು ಮಾಡಿದ್ದೇ ಆದರೆ ನಮ್ಮ ಹಣವನ್ನು ಯಾವ ರೀತಿ ಸರಿ ತೂಗಿಸಬಹುದೆಂಬುದನ್ನು ವಿಚಾರ ಮಾಡಬೇಕಾಗಿದೆ.

ಹೀಗೆ ನಮಗೆ ಈ ಮೂರು ಬಾಬುಗಳಲ್ಲಿ ಅಪಾರ ನಷ್ಟವಾಗಿದೆ. 25,159 ರೂಪಾಯಿಗಳನ್ನು ಅನಾವಶ್ಯವಾಗಿ ಕೊಡುವುದರ ಜೊತೆಗೆ 46,500 ರೂಪಾಯಿಗಳ ಆಸ್ತಿಯೂ ಹಾಳಾಗಿ ಹೋಗಿವೆ, ಓಮ್ನಿ ಬಸ್ಸು ಅಪ್ರಯೋಜಕವಾಗಿವೆ ಅನ್ನತಕ್ಕ ವಿಷಯವನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಇನ್ನು ಒಂದು ವಿಷಯವಾಗಿ ಮಂತ್ರಿಗಳಿಗೆ ಸಲಹೆಯನ್ನು ಮಾಡುವುದಕ್ಕೆ ಇಚ್ಛೆಪಡತ್ತೇನೆ. ಏತಕ್ಕೆಂದರೆ ಯಾವಾಗಲೂ ವಿರೋಧ ಪಕ್ಷದವರು ಟೀಕೆ ಮಾಡತಕ್ಕ ಒಂದು ಮನೋಭಾವ ಮಾತ್ರ ಅವರಲ್ಲಿ ಬೆಳೆದು ಬಂದಿದೆ ಎಂದು ಆಳುವ ಪಕ್ಷದವರು ಹೇಳುತ್ತಿದ್ದಾರೆ. ಅದು ಸರಿಯಲ್ಲ. ಅದಕ್ಕಾಗಿ ನಾನು ಈಗ ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ: ಮರಾಠಿ ಭಾಷೆಯಲ್ಲಿ "ಪ್ರಪಂಚ" ಎಂಬ ಒಂದು ಚಲನಚಿತ್ರವು ಕುಟುಂಬ ಯೋಜನೆಗೆ ಸಂಬಂಧಪಟ್ಟ ಹಾಗೆ ತಯಾರಾಗಿದ್ದುದನ್ನು ಹಿಂದೀ ಭಾಷೆಯಲ್ಲಿ ತಯಾರಿಸಿ ಅದನ್ನು ದೇಶಾದ್ಯಂತವೂ ಪ್ರಚಾರ ಮಾಡುತ್ತಿದ್ದಾರೆ. ಅದರಿಂದ ಜನರಿಗೆ ಬಹಳ ಅನುಕೂಲವಾಗಿದೆ ಎಂದು ಹೇಳಿ ರಾಷ್ಟ್ರಾಧ್ಯಕ್ಷರಿಂದ ಪದಕದ ಪ್ರಶಸ್ತಿ ಕೂಡ ಸಿಕ್ಕಿದೆ ಎಂದು ಬರೆದಿದ್ದಾರೆ. ಅದನ್ನು ನಮ್ಮ ಸರ್ಕಾರದವರು ಕನ್ನಡಕ್ಕೆ ತರ್ಜುಮೆ ಮಾಡಿಸಿ ಆ ಚಲನ ಚಿತ್ರವನ್ನು ನಮ್ಮ ದೇಶದ ಎಲ್ಲಾ ಭಾಗಗಳಲ್ಲೂ ಪ್ರಚಾರ ಮಾಡಿದರೆ, ಪ್ರದರ್ಶನಗಳನ್ನು ನಡೆಸಿದರೆ ಜನರಿಗೆ ಬಹಳ ಉಪಕಾರ ಆಗುತ್ತದೆಂದು ಒಂದು ಸಲಹೆಯನ್ನು ಮಾಡಬಯಸುತ್ತೇನೆ.

4-30 P.M.

ಇನ್ನು ನಮ್ಮ ದೇಶದಲ್ಲಿರತಕ್ಕ ಆಸ್ಪತ್ರೆಗಳ ವಿಷಯದಲ್ಲಿ ಅನೇಕರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೆ ಮಲೆನಾಡಿನಲ್ಲಿರತಕ್ಕ ಆಸ್ಪತ್ರೆಗಳ ಬಗ್ಗೆ ಹೇಳುವುದಾದರೆ, ಅನೇಕ ಆಸ್ಪತ್ರೆಗಳಲ್ಲಿ ಲೇಡಿ ಡಾಕ್ಟರುಗಳಿರುವುದಿಲ್ಲ. ದೇಶದಲ್ಲಿ ಲೇಡಿ ಡಾಕ್ಟರುಗಳಿಗೆ ತುಂಬಾ ಕೊರತೆಯಿದೆ. ಇದನ್ನು ಅನೇಕಾವರ್ತಿ ಸರ್ಕಾರದವರ ಗಮನಕ್ಕೆ ತರಲಾಗಿದೆ. ಚಿಕ್ಕಮಗಳೂರು ಟೌನಿನಲ್ಲಿರತಕ್ಕ ಜನರಲ್ ಆಸ್ಪತ್ರೆಯಲ್ಲಿ ಲೇಡಿ ಡಾಕ್ಟರಿಲ್ಲದೆ ಬಹಳ ವರ್ಷಗಳಾಯಿತು. ಆ ಜಾಗವನ್ನು ಇನೂ ಭರ್ತಿಮಾಡಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಚಿಕ್ಕಮಗಳೂರಿಗೆ ಒಬ್ಬ ಸರ್ಜನನ್ನು ಪೋಸ್ಟ್ ಮಾಡಲಾಗಿದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಬಹಳ ಸಂತೋಷ; ಅದಕ್ಕಾಗಿ ತಮಗೆ ಧನ್ಯವಾದಗಳು. ಹೀಗೆ ಅನೇಕ ಕಡೆಗಳಲ್ಲಿ ಖಾಲಿ ಬಿದ್ದಿರತಕ್ಕ ಜಾಗಗಳನ್ನು ಬೇಗ ಭರ್ತಿಮಾಡಿ ಜನರಿಗೆ ಸಹಾಯ ಮಾಡಬೇಕೆಂದು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ನಮ್ಮ ಆಸ್ಪತ್ರೆಯಲ್ಲಿದ್ದ ಎಕ್ಸ್‌ರೇ ಡಾಕ್ಟರನ್ನು ಬದಲಾವಣೆ ಮಾಡಿ 2 ವರ್ಷಗಳಾಯಿತು. ಆದರೆ ಅಲ್ಲಿಗೆ ಯಾರನ್ನೂ ಇನ್ನೂ ಪೋಸ್ಟ್ ಮಾಡಿಲ್ಲ. ಇನ್ನು ಗ್ರಾಮಾಂತರ ಆಸ್ಪತ್ರೆಗಳ ವಿಚಾರಕ್ಕೆ ಬಂದರೆ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳು, ನರ್ಸುಗಳೂ ಇರುವುದಿಲ್ಲ. ಅವುಗಳನ್ನೆಲ್ಲಾ ಭರ್ತಿ ಮಾಡಿ ತತ್ಕಾಲ ಹಿಂದುಳಿದ ಪ್ರದೇಶದಲ್ಲಿರತಕ್ಕ ಪ್ರಜೆಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ನಾಲ್ಕು ಖಾಸಗಿ ಮೆಡಿಕಲ್ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ಸೀಟುಗಳ ವ್ಯಾಪಾರ ನಡೆಯುತ್ತಿದೆ. ಸೀಟುಗಳನ್ನು ಹರಾಜು ಹಾಕುತ್ತಿರುವಂತೆ ಆ ಸೀಟುಗಳ ಹಂಚಿಕೆ ವಿಚಾರ ನನಗೆ ಭಾಸವಾಗುತ್ತಿದೆ. ಮೆರಿಟ್ಟಿನ ತಾರತಮ್ಯವನ್ನೇ ನೋಡುತ್ತಿಲ್ಲ. ಯಾರು ಯಾರು ಹಣವನ್ನು ಜಾಸ್ತಿ ಕೊಡುತ್ತಾರೋ ಅಂಥವರು 45 ಪರ್ಸೆಂಟ್ ನಂಬರುಗಳನ್ನು ಪಡೆದಿದ್ದರೂ ಸೀಟುಗಳನ್ನು ಕೊಡುತ್ತಿದ್ದಾರೆ. ಅಂಥವರಿಗೆ ಸೀಟುಗಳು ದೊರೆಕಿ ಅವರು ನಾಳೆ ಡಾಕ್ಟರುಗಳಾಗಿ ಬಂದಾಗ ಅವರು ಸರ್ಜರಿಗೆ ನಿಂತಾಗ ರೋಗಿಗಳ ಪ್ರಾಣ ಉಳಿಯುತ್ತದೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಇದು ಅವರಿಂದ ಖಂಡಿತಾ ಸಾಧ್ಯವಿಲ್ಲ. ನಾವು ಸಾಧಾರಣವಾಗಿ ವರ್ಷಂ ಪ್ರತಿ ಇಲ್ಲಿ 500 ಜನ ಡಾಕ್ಟರುಗಳನ್ನು ತಯಾರು ಮಾಡುತ್ತಿದ್ದೇವೆ. ಆದರೂ ಇಲ್ಲಿ ಡಾಕ್ಟರುಗಳಿಗೆ ಕೊರತೆಯಿದೆ ಎಂದು ಹೇಳಲಾಗುತ್ತಿದೆ. ಇದನ್ನು ತಪ್ಪಿಸಲು ಸೀಟನ್ನು ಹಂಚುವಾಗಲೇ ಸರ್ಕಾರದವರು ಒಂದು ಷರತ್ತನ್ನು ಹಾಕಿ ಕನಿಷ್ಠಪಕ್ಷ 5 ವರ್ಷಗಳಾದರೂ. ಎಂ.ಬಿ.ಬಿ.ಎಸ್. ಡಿಗ್ರಿ ಪಡೆದು ಬರತಕ್ಕ ಜನ ನಮ್ಮ ರಾಜ್ಯದಲ್ಲಿ ಸರ್ವೀಸನ್ನು ಮಾಡಲೆಬೇಕೆಂಬ ಷರತ್ತನ್ನು ಹಾಕಿದರೆ ಅಂಥಾ ಒಂದು ಅಗ್ರಿಮೆಂಟನ್ನು ಮಾಡಿಕೊಂಡರೆ ಆಗ ಈ ಕೊರತೆ ತಪ್ಪಬಹುದು. ಈ ವಿಚಾರದಲ್ಲಿ ಸರ್ಕಾರದವರೂ ಕೂಡ ಒಂದು ತಪ್ಪನ್ನು ಮಾಡುತ್ತಿದ್ದಾರೆ. ಅದೇನೆಂದರೆ, ಮೆಡಿಕಲ್ ಡಿಗ್ರಿ ಪಡೆದವರನ್ನು ಪರದೇಶಕ್ಕೆ ಕಳುಹಿಸುತ್ತಿದ್ದಾರೆ. ಅದನ್ನು ಉತ್ತೇಜನ ಕೊಟ್ಟು ಟ್ರೈನಿಂಗನ್ನು ಮಾಡಿಸಿದರೂ ಒಳ್ಳೆಯದೆ, ಆದರೆ ಅವರು ಆ ದೇಶಾಭಿಮಾನವನ್ನು

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ತೊರೆದಿರುವುದರಿಂದ ಪರದೇಶಕ್ಕೆ ವಿದ್ಯಾಭ್ಯಾಸಕ್ಕೆ ಹೋದವರು ಮತ್ತೆ ವಾಪಸ್ಸು ಬರುವುದೇ ಇಲ್ಲ. ಹೀಗೆ ಸರ್ಕಾರದವರು ಗಮನಕೊಟ್ಟು ದೇಶದಲ್ಲಿರತಕ್ಕ ಡಾಕ್ಟರ್ ಕೊರತೆಯನ್ನು ನೀಗಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ (ಹಡಗಲಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಆರೋಗ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಯನ್ನು ನಾನು ಸಮರ್ಥಿಸುತ್ತಾ ಈ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಆರೋಗ್ಯ ಹಾಗೂ ವೈದ್ಯಕೀಯ ಆಡಳಿತೆಯ ಬಗ್ಗೆ ಹಾಗೂ ಜನರಿಗೆ ಇರತಕ್ಕ ಕುಂದುಕೊರತೆಗಳ ಬಗ್ಗೆ ಕೆಲವು ವಿಚಾರಗಳನ್ನು ನಾನೀಗ ಸರ್ಕಾರದವರ ಗಮನಕ್ಕೆ ತರಲು ಇಚ್ಛಿಸಿರುವುದರಿಂದ ಎರಡು ಮಾತುಗಳನ್ನಾಡಬೇಕೆಂದಿದ್ದೇನೆ. ಈ ನಮ್ಮ ರಾಜ್ಯದಲ್ಲಿ ಇರತಕ್ಕ ಆಸ್ಪತ್ರೆಗಳಲ್ಲಿ ಒಂದು ಏಕರೂಪತೆಯ ಆಡಳಿತವಿರುವುದಿಲ್ಲ. ಒಂದೊಂದು ಕಡೆ ಒಂದೊಂದು ರೀತಿಯ ಆಡಳಿತವಿದ್ದು ಒಂದೊಂದು ಕಡೆ ಒಂದೊಂದು ರೀತಿಯ ಆಸ್ಪತ್ರೆಗಳಿರುತ್ತವೆ. ನನಗೆ ತಿಳಿದಿರುವಂತೆ ರಾಜ್ಯದಲ್ಲಿ ಇಂದು 14 ರೀತಿಯಾದ ಆಸ್ಪತ್ರೆಗಳಿರುತ್ತವೆಂದು ಗೊತ್ತಾಗಿದೆ. ಇವು ಈಗ ಒಂದು confused state of affairs ನಲ್ಲಿರುವಂತೆ ನನಗೆ ಭಾಸವಾಗುತ್ತಿದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ರೂರಲ್ ಆಸ್ಪತ್ರೆ ಎಂದು ಕೆಲವು, ಸಬ್‌ರೂರಲ್ ಡಿಸ್ಪೆನ್ಸರಿ ಎಂದು ಕೆಲವು, ಕಂಬೈಂಡ್ ಡಿಸ್ಪೆನ್ಸರಿ ಎಂತ ಕೆಲವೂ, ಅಪ್‌ಗ್ರೇಡೆಡ್ ಡಿಸ್ಪೆನ್ಸರಿ ಎಂತ ಕೆಲವು, ಏಯಿಡೆಡ್ ಡಿಸ್ಪೆನ್ಸರಿ ಎಂತ ಕೆಲವು ಹೀಗೆ 14 ವಿಧವಾದ ಡಿಸ್ಪೆನ್ಸರಿಗಳಿವೆಯೆಂದು ಗೊತ್ತಾಗುತ್ತಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನೂ ಜಾಸ್ತಿ ಇರುತ್ತವೆ.

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ.—ಆದರೆ ಹೀಗೆ ವೈವಿಧ್ಯಮಯವಾಗಿರತಕ್ಕ ಆಸ್ಪತ್ರೆಗಳನ್ನು ಮಾಡುವುದರ ಬದಲು ಶಾಸ್ತ್ರೀಯವಾಗಿ ಆಸ್ಪತ್ರೆಗಳ ಶ್ರೇಣಿಯನ್ನು ನಿರ್ಧಾರ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ಸಲಹೆ ಮಾಡಬಯಸುತ್ತೇನೆ.

ಇನ್ನು ತಾಲ್ಲೂಕು ಬೋರ್ಡಿನ ಸಹಾಯ ಪಡೆದು ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ನಡೆಸುತ್ತಿರುವ ಆಸ್ಪತೆಗಳಲ್ಲಿ ರೋಗಿಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕೆಂಬುದು ನೇಮುಗಳಲ್ಲಿ ಅಡಕವಾಗಿದೆ. ಆದರೆ ಸರ್ಕಾರದವರು ಇತ್ತ ಕಡೆಗೆ ಲಕ್ಷ್ಯ ಕೊಟ್ಟಿಲ್ಲ. ತಾಲ್ಲೂಕ್ ಬೋರ್ಡ್ ಆಡಳಿತದಲ್ಲಿ ಇರತಕ್ಕ ಆಸ್ಪತ್ರೆಗಳನ್ನು ಯಾವ ರೀತಿ ಉತ್ತಮ ಪಡಿಸಬೇಕು, ಅಲ್ಲಿಯ ಜನರಿಗೆ ಹೇಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು ಅನ್ನುವ ವಿಚಾರದಲ್ಲಿ ಸರ್ಕಾರದವರು ತಾತ್ಸಾರ ಭಾವನೆ ಇಲ್ಲವೇ ಉದಾಸೀನದಿಂದ ನೋಡುತ್ತಿರುವವಂತೆ ನನಗೆ ಕಂಡು ಬರುತ್ತಿದೆ. ಅಲ್ಲಿರತಕ್ಕ ಅವ್ಯವಸ್ಥೆಗಳನ್ನು ನಿವಾರಣೆ ಮಾಡಿ ಅಲ್ಲಿ ಒಂದು ವ್ಯವಸ್ಥಿತ ರೀತಿಯಲ್ಲಿ ಕೆಲಸ ನಡೆಯುವುದಕ್ಕೆ ಬೇಕಾದ ಯಾವ ಒಂದು ಸಹಾಯವನ್ನೂ ಸರ್ಕಾರದವರು ನೀಡುತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರಕ್ಕೂ ತಾಲ್ಲೂಕು ಬೋರ್ಡುಗಳಿಗೂ ಒಂದು ಹೊಂದಾಣಿಕೆ ಇರುವುದಿಲ್ಲ. ಇದನ್ನು ನಾನು ಸಂಪೂರ್ಣವಾಗಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಈ ವಿಚಾರದಲ್ಲಿ ಸರ್ಕಾರದವರು ಆಸ್ಥೆ ವಹಿಸಬೇಕು. ಇನ್ನು ಮುಂದೆ ತಾಲ್ಲೂಕ್ ಬೋರ್ಡ್ ಎಲ್ಲಿಯಾದರೂ ಒಂದು ಡಿಸ್ಪೆನ್ಸರಿಯನ್ನು ಪ್ರಾರಂಭಿಸಬೇಕಾಗಿದ್ದರೆ ಮೊದಲು ಅದಕ್ಕೆ ಸರ್ಕಾರದವರಿಂದ ರೆಕಾಗ್ನಿಷನ್ ಪಡೆಯದೆ ಅದನ್ನು ಮಾಡುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಅಷ್ಟೇ ಅಲ್ಲ, ಅಲ್ಲಿನ ಎಲ್ಲಾ ಟೆಕ್ನಿಕಲ್ ಕಂಟ್ರೋಲನ್ನೂ ಸರ್ಕಾರದವರೇ ವಹಿಸಿಕೊಳ್ಳಬೇಕೆಂದೂ ಮತ್ತು ಅವುಗಳಿಗೆ ಗ್ರಾಂಟ್ ರೂಪದಲ್ಲಿ ಹಣವನ್ನು ಒದಗಿಸಬೇಕೆಂದೂ ಕೇಳಿಕೊಳ್ಳುತ್ತೇನೆ. ಇನ್ನು ಮುಂದೆ ಗ್ರಾಮೀಣ ಪ್ರದೇಶದಲ್ಲಿ ಆಸ್ಪತ್ರೆಗಳನ್ನು ಜನರ ಮರ್ಜಿ ಮತ್ತು ಖುಷಿಗಳಿಗೆ ಬಿಡಬಾರದು ಎಂದು ಹೇಳುತ್ತೇನೆ. ವೈದ್ಯಕೀಯ ವಿಚಾರ ಎಂದರೆ ಇದು ಬಹಳ ಗಹನವಾದದ್ದು. ಇದು ಜನರ ಪ್ರಾಣಗಳನ್ನು ಉಳಿಸುವ ವಿಚಾರ. ಇದು ಪಟ್ಟಣದಲ್ಲಾದರೆ ಎಷ್ಟೋ ಹಳ್ಳಿಗಳಲ್ಲಾದರೂ ಅಷ್ಟೇ. ಆದುದರಿಂದ ಸರ್ಕಾರದವರು ಇಲ್ಲಿ ನಗರದಲ್ಲಿ ಇರತಕ್ಕ ವಿಕ್ಟೋರಿಯಾ ಅಥವಾ ಬೌರಿಂಗ್ ಆಸ್ಪತ್ರೆಗಳ ವಿಚಾರದಲ್ಲಿ ಹೇಗೆ ಒಂದು ಆಸಕ್ತಿಯನ್ನು ವಹಿಸಿ ನೋಡಿಕೊಳ್ಳುತ್ತಿದ್ದಾರೋ ಅಷ್ಟೇ ಆಸಕ್ತಿಯಿಂದ ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಆಸ್ಪತ್ರೆಗಳನ್ನೂ ನೋಡಿಕೊಳ್ಳಬೇಕು, ಅವುಗಳ ವಿಚಾರದಲ್ಲೂ ಅಷ್ಟೇ ಆಸಕ್ತಿ ವಹಿಸಬೇಕು. ಏಕೆಂದರೆ ಈ ಪಟ್ಟಣಗಳಲ್ಲಿರತಕ್ಕ ಜನರ ಪ್ರಾಣ ಮತ್ತು ಹಳ್ಳಿಗಾಡುಗಳಲ್ಲಿರತಕ್ಕ ಜನರ ಪ್ರಾಣ ಎರಡೂ ಒಂದೆ; ಇವುಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಆದುದರಿಂದ ಎಲ್ಲಾ ಆಸ್ಪತ್ರೆಗಳ ಬಗ್ಗೆ ಸರ್ಕಾರದವರು ಒಂದೇ ವಿಧವಾದ ಆಸಕ್ತಿಯನ್ನು ವಹಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಆಮೇಲೆ ಇನ್ನೊಂದು ವಿಧವಾದ ವ್ಯವಸ್ಥೆ ಇದೆ. ತಾಲ್ಲೂಕು ಮಟ್ಟದಲ್ಲಿ ಒಂದು ಕಂಬೈಂಡ್ ಡಿಸ್ಪೆನ್ಸರಿ ಎಂದು ಇದೆ. ಅದರಲ್ಲಿ ಡಾಕ್ಟರ್ ಸಂಬಳ ಮಾತ್ರ ಸರ್ಕಾರದವರು ಕೊಡುತ್ತಿದ್ದಾರೆ. ಉಳಿದುದನ್ನು ಎಲ್ಲಾ ತಾಲ್ಲೂಕು ಬೋರ್ಡಿನವರೇ ನೋಡಿಕೊಳ್ಳಬೇಕು. ಇದರಿಂದಾಗಿ ಅವರೊಳಗೆ ಭಿನ್ನಾಭಿಪ್ರಾಯ ಬಂದು ಆಸ್ಪತ್ರೆ ನಡೆಯುದಂತಹ ಪ್ರಸಂಗ ಬರುತ್ತಿದೆ; ಮತ್ತು ಇದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತದೆ. ಅದನ್ನು ಮಾನ್ಯ ಸಚಿವರು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿ ಅಥವಾ ತಾಲ್ಲೂಕಿನಲ್ಲಿ ಒಂದಾದರೂ ಸಂಪೂರ್ಣ ಸರ್ಕಾರಿ ಆಸ್ಪತ್ರೆ ಇರಬೇಕು ಮತ್ತು ಅದು ಸರ್ವವಿಧದಲ್ಲೂ ಜನರಿಗೆ ಅನುಕೂಲವಾಗಿರಬೇಕು; ಮತ್ತು ಅದಕ್ಕೆ ಒಂದು ವಾಹನ ಕೂಡ ಇರಬೇಕು. ಇಂಥದನ್ನು ತಾಲ್ಲೂಕು ಬೋರ್ಡಿನವರು ಮತ್ತು ಸರ್ಕಾರದವರು ಒಟ್ಟುಗೂಡಿ ಮಾಡುವುದು ಸರಿಯಲ್ಲ. ಅಲ್ಲಿ ಒಂದು ಏಕರೂಪವಾಗಿರತಕ್ಕ ಆಡಳಿತ ಮಾಡಬೇಕೇ ವಿನಾ ತಾಲ್ಲೂಕು ಬೋರ್ಡಿನವರೂ ಸರ್ಕಾರದವರೂ ಒಟ್ಟುಗೂಡಿ ಮಾಡುವುದು ಸರಿಯಲ್ಲ ಮತ್ತು ಅಲ್ಲಿ ಭಿನ್ನಾಭಿಪ್ರಾಯಗಳು ಬಂದು ಅಲ್ಲಿಯ ಆಡಳಿತ ಕೆಡುವ ಸಂದರ್ಭವಿದೆ. ಉದಾಹರಣೆಗೆ ನಮ್ಮ ಹಡಗಲಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಇರತಕ್ಕ ಆಸ್ಪತ್ರೆಯನ್ನು ಸರ್ಕಾರಕ್ಕೆ ವಹಿಸಿಕೊಳ್ಳಬೇಕೆಂದು ನನ್ನ ವಿಜ್ಞಾಪನೆ.

ಆಮೇಲೆ ಪ್ರೈಮರಿ ಹೆಲ್ತ್ ಸೆಂಟರ್ಸ್ ಸ್ಥಾಪನೆ ಮಾಡಲು ಗ್ರಾಮಸ್ಥರು ಹನ್ನೆರಡೂವರೆ ಸಾವಿರ ರೂಪಾಯಿ ಕಂಟ್ರಿಬ್ಯೂಷನ್ ಕಟ್ಟಡಕ್ಕೋಸ್ಕರ ಕೊಟ್ಟಿದ್ದಾರೆ. ಆದರೆ ಇದುವರೆಗೂ ಅಲ್ಲಿ ಡಾಕ್ಟರ್ ಮತ್ತು ಮಿಡ್‌ವೈಫ್ ವಿನಾ ಬೇರೇನೂ ಇಲ್ಲ. ಸಬ್ ಸೆಂಟರುಗಳನ್ನು ತೆರೆಯುವುದಕ್ಕೆ ಸರ್ಕಾರವು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಪ್ರೈಮರಿ ಹೆಲ್ತ್ ಸೆಂಟರುಗಳು ಸರಿಯಾಗಿ ನಡೆಯಬೇಕಾದರೆ, ಅಲ್ಲಿಗೆ ಬೇಕಾದ ಉಪಕರಣಗಳನ್ನು ಹಾಗೂ ಇನ್ನಿತರ ಬೇಕಾದ ಸಲಕರಣೆಗಳನ್ನು ಸರ್ಕಾರ ಒದಗಿಸಿ ಕೊಡುವುದು ಅವಶ್ಯಕ. ಉದಾಹರಣೆಗೆ ಹಡಗಲಿ ತಾಲ್ಲೂಕು ಇಟ್ಟಿಗೆ ಮತ್ತು ಹೊಳಲು ಪ್ರೈಮರಿ ಹೆಲ್ತ್ ಸೆಂಟರುಗಳು ಮಂಜೂರಾಗಿ ಮೂರು ವರ್ಷವಾಯ್ತು. ಅಲ್ಲಿ ಡಾಕ್ಟರು ಇಲ್ಲ ಮತ್ತು ಸರಿಯಾದ ಕಟ್ಟಡವಿಲ್ಲ. ಸಬ್ ಸೆಂಟರ್ ಕೂಡ ಆಗಿಲ್ಲ. ಸರ್ಕಾರದವರು ಈ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇ ರೀತಿ ಅನೇಕರು ಇಲ್ಲಿ ಹೇಳಿದಂತೆ, ಲೇಡಿ ಡಾಕ್ಟರುಗಳ ಕೊರತೆ ಬಹಳ ಇದೆ. ಹಡಗಲಿಯಲ್ಲಿ ಸುಮಾರು ಆರೇಳು ವರ್ಷದಿಂದ ಲೇಡಿ ಡಾಕ್ಟರು ಇಲ್ಲದೆ ಅಲ್ಲಿಯ ಜನತೆಗೆ ತುಂಬಾ ತೊಂದರೆಯಾಗಿದೆ. ಮೆಟರ್ನಿಟಿ ಹೋಮಿಗೆ ಲೇಡಿ ಡಾಕ್ಟರು ಇಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಲೇಡಿ ಡಾಕ್ಟರ್ಸ್‌ಗೆ ಹೆಚ್ಚು ಹೆಚ್ಚು ಜನರು ಮುಂದೆ ಬಂದು ಕಲಿಯಲು ಒಂದು ಒಳ್ಳೆಯ ವ್ಯವಸ್ಥೆಯನ್ನು ಯೂನಿವರ್ಸಿಟಿಯಲ್ಲಿ ಮಾಡಬೇಕು. ಈಗ ಏನು ಪರ್‌ಸೆಂಟೇಜ್ ಪಾಸ್ ಆಗಲಿಕ್ಕೆ ಇಟ್ಟಿದ್ದಾರೆ, ಅದನ್ನು ಈ ಲೇಡಿ ಅಭ್ಯರ್ಥಿಗಳಿಗೆ ಇನ್ನೂ ಸಡಿಲಗೊಳಿಸಿ, ಅವರಿಗೆ ಇನ್ನೂ ಹೆಚ್ಚಿನ ಸೌಲಭ್ಯ ದೊರಕುವಂತೆ ಗ್ರೇಸ್ ಮಾರ್ಕ್ಸ್ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ವಿಜ್ಞಾಪನೆ ಮಾಡುತ್ತೇನೆ.

ಇನ್ನೊಂದು ಅತಿ ಮುಖ್ಯವಾದ, ಮೂಲಭೂತವಾದ ವಿಚಾರ. ಆಯುರ್ವೇದ ಮತ್ತು ಅಲೋಪತಿ, ಇದರಲ್ಲಿ ಸರ್ಕಾರ ಯಾವ ಒಂದು ನಿರ್ದಿಷ್ಟವಾದ ನಿರ್ಣಯವನ್ನೂ ಅನುಸರಿಸುತ್ತಾ ಇಲ್ಲ. ಅನೇಕ ಆಯುರ್ವೇದ ಡಾಕ್ಟರುಗಳು ಅಲೋಪತಿ ಪ್ರಾಕ್ಟೀಸ್ ಮಾಡತಕ್ಕ ಪದ್ಧತಿ ಬಂದಿದೆ. ಇಂಜಕ್ಷನ್ ಕೊಡಲು ಗೊತ್ತಿಲ್ಲದವರೂ ಇಂಜಕ್ಷನ್ ಕೊಡುವ ಪದ್ಧತಿ ಬಂದಿದೆ. ಆಯುರ್ವೇದದ ಪ್ರಕಾರ ಈ ವ್ಯವಸ್ಥೆ ಇಲ್ಲವೆಂದೆನಿಸುತ್ತದೆ. ಉದಾಹರಣೆಗೆ ಆಯುರ್ವೇದ ಒಂದು ಕಾಲೇಜಿಗೆ ಅಲೋಪತಿ ಆಗಿರುವವರನ್ನು ಪೋಸ್ಟು ಮಾಡಿದ್ದಾರೆ. ಇದರಲ್ಲಿ ಯಾವುದು ಆಯುರ್ವೇದ, ಯಾವುದು ಅಲೋಪತಿ ಎಂಬುದು ಗೊತ್ತಾಗುವುದಿಲ್ಲ. ಇನ್ನೊಂದು ಜಾಯಿಂಟ್ ಡೈರೆಕ್ಟರ್, ಎ.ಡಿ.ಎಂ.ಎಸ್. ಇದಕ್ಕೆಲ್ಲಾ ಎಂ.ಬಿ.ಬಿ.ಎಸ್. ಓದಿದವರನ್ನು ಹಾಕುತ್ತಾರೆ. ಅವರು ಆಯುರ್ವೇದ ವಿಷಯಗಳನ್ನು ಹೇಗೆ ನೋಡಿಕೊಳ್ಳುತ್ತಾರೆ ಎಂದು ಗೊತ್ತಾಗುವುದಿಲ್ಲ. ಅದಕ್ಕೆ ಆ ರೀತಿ ಮಾಡದೆ ಆಯುರ್ವೇದ ಡಾಕ್ಟರುಗಳನ್ನೇ ಹಾಕಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಚಾರ. ಹಿಂದೆ ವ್ಯಾಸ ಸಮಿತಿ ಎಂದು ನೇಮಕ ಮಾಡಿದ್ದರು. ಅವರು ಭಾರತೀಯ ಆಯುರ್ವೇದದ ಬೆಳವಣಿಗೆ ಬಗ್ಗೆ ಶಿಫಾರಸು ಮಾಡಿದ್ದರು. ಅದರೊಳಗೆ ಬಿ.ಎಸ್.ಎ.ಎಂ. ಎಂದು ಒಂದು ಡಿಗ್ರಿ ಓಪನ್ ಮಾಡಬೇಕೆಂದು ಶಿಫಾರಸು ಮಾಡಿದ್ದರು. ಹಿಂದಿನ ಆರೋಗ್ಯ ಮಂತ್ರಿಗಳಾದ ಶ್ರೀ ನಾಗಪ್ಪ ಆಳ್ವರು ಅದರ ಮೇಲೆ ಆಶ್ವಾಸನೆಯನ್ನು ಕೊಟ್ಟಿದ್ದರು. ಸರ್ಕಾರದವರು ಉತ್ತರ ಕೊಡುವಾಗ ಕೂಡ ಹೇಳಿದ್ದಾರೆ. ಆದರೆ ನಂತರ ಆಯುರ್ವೇದದಲ್ಲಿ ಒಂದು ಡಿಪ್ಲೋಮಾ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಇಷ್ಟರಲ್ಲೇ ಸ್ಥಳೀಯ ವಿದ್ಯಾರ್ಥಿಗಳು ಒಂದು ಚಳುವಳಿ ಹೂಡಬೇಕೆಂಬ ಭಾವನೆಯಿಂದ ಉದ್ರೇಕಗೊಂಡಿದ್ದಾರೆ. ಸರ್ಕಾರವೇ ಒಪ್ಪಿಕೊಂಡಿರುವ ಈ ಸಲಹೆಯನ್ನು ಪೂರೈಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ)

ಇನ್ನು ಈ ಕಂಡೆನ್ಸ್‌ಡ್ ಎಂ.ಬಿ.ಬಿ.ಎಸ್. ಅವರನ್ನು ರೆಗ್ಯುಲರ್ ಎಂ.ಬಿ.ಬಿ.ಎಸ್. ಇವರ ಜೊತೆಗೆ ಪರಿಗಣನೆ ಮಾಡದೆ ಅವರಿಗೆ ಕೊಡತಕ್ಕ ಪ್ರಮೋಷನ್ ಮತ್ತು ಇನ್ನಿತರ ಸೌಲಭ್ಯಗಳನ್ನು ಕೊಡುತ್ತಾ ಇಲ್ಲ. ಅದನ್ನು ಕೂಡ ಸರ್ಕಾರ ಗಮನಿಸಿ ತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಈ ಆರೋಗ್ಯ ಇಲಾಖೆಯಲ್ಲಿ ನೊಣ ನಿರ್ಮೂಲನಾ ಸಪ್ತಾಹ ನಡೆಯುತ್ತಿದೆ. ನೊಣದ ನಿರ್ಮೂಲನಾ ಸಪ್ತಾಹ ಕಾಲದಲ್ಲಿ ಸಭೆ ನಡೆಸಿ ಭಾಷಣದ ಮಳೆಗರೆದರು. ಸಭೆಯಲ್ಲಿ ತಿಂಡಿ ಕಾಫಿಯ ಮೇಲೆ ಮುಕುರಿದ್ದ ನೊಣಗಳನ್ನು ಕೈಯಿಂದ ಝಾಡಿಸಿದರು. ಆದ್ದರಿಂದ ಅಂಥ ಯೋಜನೆಗಳನ್ನು ಮಾಡದೆ, ನಮ್ಮ ಹೆಲ್ತ್ ಇಲಾಖೆಯವರು ಒಳ್ಳೆ ಪರಿಣಾಮಕಾರಿಯಾದ ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಈ ಬೇಡಿಕೆಗಳನ್ನು ನಾನು ಸಮರ್ಥನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H. SIDDAVEERAPPA.—Before the Minister rises and gives reply, I am making a request to him. I remember in the last session I mentioned about some incident in the T. B. Hospital. I think the Minister is appraised of it. No reply is given to me so far about it. I want to know whether any enquiry is conducted; if so, what was the result. As per the request of the Chief Minister, I remember, I passed on the relevant document through the Chair. I am eagerly awaiting for a reply on that taking advantage of this occasion.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಮಾನ್ಯ ಸಭಾಪತಿಗಳೇ, ಪಬ್ಲಿಕ್ ಹೆಲ್ತ್ ಮತ್ತು ಮೆಡಿಕಲ್ ಬಡ್ಜೆಟ್ಟನ್ನು ನಾನು ವಿರೋಧಿಸುತ್ತಾ ಎರಡು ಅಂಶಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಈಗಾಗಲೇ ನನ್ನ ಮಿತ್ರರು ಅನೇಕರು ಆಸ್ಪತ್ರೆಗಳಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ಹೇಳಿದ್ದಾರೆ. ನಾನು ತಮ್ಮ ಗಮನಕ್ಕೆ ತರುವುದು ಕೇವಲ ಮೂರು ನಿದರ್ಶನಗಳು. ಬೆಂಗಳೂರು ನಗರ ದೊಡ್ಡ ನಗರ. ನಮ್ಮ ಈ ರಾಜಧಾನಿಯಲ್ಲಿ 15-20ಲಕ್ಷ ಜನಗಳು ಇದ್ದರೂ ಬೇರೆ ಊರುಗಳಿಂದ ವಿಕ್ಟೋರಿಯಾ ಆಸ್ಪತ್ರೆ ಮತ್ತು ಬೌರಿಂಗ್ ಆಸ್ಪತ್ರೆಗಳಿಗೆ ಬಹಳ ಜನರು ಬರುತ್ತಿದ್ದಾರೆ. ಆದರೂ ಈ ಆಸ್ಪತ್ರೆಗಳ ಪರಿಸ್ಥಿತಿ ತೀರಾ ಹದಗೆಟ್ಟಿದೆ ಎಂಬುದಾಗಿ ಬಹಳ ಜನರು ಹೇಳಿದ್ದಾರೆ. ಅಲ್ಲಿ ಬೆಡ್‌ಗಳಾಗಲೀ, ಲಿನನ್ ಆಗಲೀ, ಟ್ರೀಟ್‌ಮೆಂಟ್ ಆಗಲೀ ಎಲ್ಲಾ ವಿಷಯಗಳಲ್ಲೂ ಬಹಳ ಮೋಸ ಕೃತ್ಯಗಳು ನಡೆಯುತ್ತಿವೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಬೌರಿಂಗ್ ಆಸ್ಪತ್ರೆಯಲ್ಲಿ ಕೆಲವು ದಿನಗಳ ಹಿಂದೆ ಯಾವ ರೀತಿಯಾಗಿ ರೋಗಿಗಳನ್ನು ಉಪಚರಿಸಿದ್ದಾರೆಂಬುದನ್ನು ಸರ್ಕಾರದವರು ನೋಡಬೇಕು. ಒಂದು ಚಿಕ್ಕ ಮಗು ಅಳುತ್ತಾ ಇತ್ತು. ಡಾಕ್ಟರ್ ಹೆಸರನ್ನು ಇಲ್ಲಿ ನಾನು ಹೇಳುವುದಿಲ್ಲ. ಅದನ್ನು ಮಂತ್ರಿಗಳಿಗೆ ಮಾತ್ರ ಪ್ರತ್ಯೇಕ ವಾಗಿ ಹೇಳುತ್ತೇನೆ. ಮಗು ಅಳುತ್ತಿರುವಾಗ ಹೋಟೇಲ್ ಸರ್ವರ್ ಬಾಬು ಎಂಬಾತನು ಕಿಟಕಿ ಯಿಂದ ನೋಡಿದ. ಅದಕ್ಕಾಗಿ ಡಾಕ್ಟರ್‌ಗೆ ಕೋಪ ಬಂದು ಅಲ್ಲಿದ್ದ ಒಂದು ಆಸಿಡ್ ಬಾಟಲನ್ನು ತೆಗೆದು ಅವರು ಬಿಸಾಡಿದರು. ಅದು ಆ ಹುಡುಗನ ಮುಖಕ್ಕೆ ತಗುಲಿ ಆ ಆಸಿಡ್ಡೆಲ್ಲಾ ಮುಖದ ಮೇಲೆ ಬಿದ್ದು ಮುಖ ಬೆಂದು ಹೋಯಿತು. ಆಗ ಹೊರಗಡೆ ಬಂದು ಈ ವಿಚಾರವಾಗಿ ಸಂಬಂಧಪಟ್ಟವರು ಪೋಲೀಸಿಗೆ ದೂರು ಕೊಟ್ಟಿದ್ದಾರೆ. ಈ ವಿಚಾರವನ್ನು ಡೀನ್ ಅವರಿಗೆ ಹೇಳಿದ್ದೂ ಆಯಿತು. ಎಲ್ಲಾ ಡಾಕ್ಟರುಗಳನ್ನೂ ಕೇಳಿದ್ದಾಯಿತು. ಹುಡುಗ ಇಂತಹವನೇ ಡಾಕ್ಟರ್ ಎಂದು ತೋರಿಸಿದ್ದೂ ಆಯಿತು. ಕೊನೆಗೆ ಸರ್ಕಾರಕ್ಕೂ ಮನವಿ ಮಾಡಿದ್ದೂ ಆಯಿತು. ಹಿಂದಿದ್ದ ಆರೋಗ್ಯ ಮಂತ್ರಿಗಳಿಗೂ ಹೇಳಿದ್ದು ಆಯಿತು. ಈಗಿರತಕ್ಕ ಮಂತ್ರಿಗಳಿಗೂ ಹೇಳಿದ್ದು ಆಯಿತು. ಆ ಹುಡುಗನ ಫೋಟೊ ಕೂಡ ನಾನು ತಂದಿದ್ದೇನೆ. (ಆ ಮಗುವಿನ ಮುಖ ಯಾವ ರೀತಿ ಬೆಂದಿದೆ ಎಂಬುದನ್ನು ಆ ಮಗುವಿನ ಫೋಟೋವನ್ನು ಸಭೆಯಲ್ಲಿ ಪ್ರದರ್ಶನ ಮಾಡಿದರು) ಇದಕ್ಕೆ ಕಾರಣರು ಯಾರು ಎಂಬುದನ್ನು ಸರ್ಕಾರ ಯೋಚಿಸಬೇಕು. ಈ ರೀತಿಯಾಗಿ ಅಮಾನುಷವಾಗಿ ಡಾಕ್ಟರುಗಳು ವರ್ತಿಸಿದ್ದು ಖಂಡಿತ ಸರಿಯಲ್ಲ. ಡಾಕ್ಟರುಗಳಿಗೆ ಮಾನವೀಯತೆಯ ದೃಷ್ಟಿ ಇರಬೇಕು. ಆ ಭಾವನೆ ಅನೇಕ ಡಾಕ್ಟರುಗಳಲ್ಲಿಲ್ಲ. ಇದು ಸುಮಾರು ನಾಲ್ಕೈದು ತಿಂಗಳುಗಳಲ್ಲಿ ಬೆಂಗಳೂರು ನಗರದ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಮಗು ಫೋಟೋ ಕೂಡ ಪತ್ರಿಕೆಗಳಲ್ಲಿ ಪ್ರಿಂಟಾಗಿದೆ.

ಪೋಲೀಸಿನವರು ಇದಕ್ಕೆ ಸಾಕ್ಷಿಗಳಿಲ್ಲವೆಂದು ಈ ಕೇಸನ್ನೇ ತೆಗೆದುಕೊಳ್ಳಲಿಲ್ಲ. ಸರ್ಕಾರಕ್ಕೆ ಈ ವಿಚಾರವಾಗಿ ಬರೆದರೆ ಮಂತ್ರಿಗಳು ಇದುವರೆಗೂ ಉತ್ತರ ಕೊಡಲಿಲ್ಲ, ಇದು ಒಂದು ನಿದರ್ಶನ.

ಇನ್ನೊಂದು ನಿದರ್ಶನ ಬೌರಿಂಗ್ ಆಸ್ಪತ್ರೆಯಲ್ಲಿಯೇ ನಡೆದಂಥಾದ್ದು. ಡಾಕ್ಟರುಗಳು ಆಸ್ಪತ್ರೆಯಲ್ಲಿ ಯಾವ ರೀತಿಯಾಗಿ ರೋಗಿಗಳನ್ನು ನೋಡಿಕೊಳ್ಳುತ್ತಾರೆಂಬುದನ್ನು ತಿಳಿಸಬೇಕಾಗಿದೆ. ಹೋದವರ್ಷ ರಾಮಕೃಷ್ಣ ಎಂಬ ಹೆಸರಿನ ಒಬ್ಬ ರೋಗಿ ಅಲ್ಲಿಗೆ ಅಡ್ಮಿಟ್ ಆದರು. ಅವರಿಗೆ ಬ್ಲಡ್ ಪ್ರೆಷರ್ ಇತ್ತು. ಅಂತಹವರು ಆಸ್ಪತ್ರೆಗಳಲ್ಲಿ ಮಂಚದಿಂದ ಕೆಳಗೆ ಇಳಿಯಕೂಡದು ಎಂಬ ಕಟ್ಟಾಜ್ಞೆ ಇತ್ತು. ಡಾಕ್ಟರುಗಳು ಯಾರೂ ಅಲ್ಲಿಗೆ ಬರುತ್ತಿರಲಿಲ್ಲ. ನರ್ಸುಗಳೂ ಸಹ ಬರುತ್ತಿರಲಿಲ್ಲ. ಇದು ಮೆಡಿಕಲ್ 'ಸಿ' ವಾರ್ಡ್‌ನಲ್ಲಿ ನಡೆದದ್ದು. ಆ ರೋಗಿ ಒಂದು ಸಾರಿ ಮೂತ್ರ ವಿಸರ್ಜನೆಗೆ ಹೋಗಬೇಕು ಎಂದು ಕೇಳಿಕೊಂಡ. ಯಾರೂ ಅತನಿಗೆ ಬಾಟಲ್ ಕೊಡಲಿಲ್ಲ. ಬಹಳ ಹೊತ್ತಾದಮೇಲೆ ಯಾರು ಬರಲಿಲ್ಲವೇ ಅಂದುಕೊಂಡು ತಾನೇ ಬಾತ್ ರೂಮಿಗೆ ಹೋದ. ಅಲ್ಲಿ ಅನೇಕ ದಿನಗಳಿಂದ ಲೈಟ್ ಇರಲಿಲ್ಲ, ಕತ್ತಲು, ಕಾಣದೆ ಜಾರಿಬಿದ್ದು ಹೋದ. ಕೂಡಲೆ ಪ್ರಾಣ ಹೋಯಿತು, ಅರ್ಧಗಂಟೆಯಾದರೂ ಯಾರೂ ಬರಲಿಲ್ಲ. ಅವನ ಪರಿಸ್ಥಿತಿ ಏನಾಯಿತೆಂಬುದನ್ನು ಯಾರೂ ವಿಚಾರ ಮಾಡಲಿಲ್ಲ. ಅಲ್ಲಿದ್ದ ಬೇರೆ ರೋಗಿ ಪಕ್ಕದಲ್ಲಿದ್ದ ರೋಗಿ ಬಾತ್‌ರೂಮಿಗೆ ಹೋದವನು ಬರಲೇ ಇಲ್ಲವೆಂದು ದೂರು ಮಾಡಿದಮೇಲೆ ಕೊನೆಯಲ್ಲಿ ಒಂದು ಕಾಗದ ಅಥವಾ ಬಟ್ಟೆಗೆ ಬೆಂಕಿ ಹಚ್ಚಿ ಒಳಗೆ ಹೋಗಿ ನೋಡಿದರೆ ರೋಗಿಯ ಬದಲು ಅಲ್ಲಿ ಶವ ಬಿದ್ದಿದೆ. ಇದರ ಬಗ್ಗೆ ತನಿಖೆ ನಡೆಸಬೇಕು ಎಂದು ಕೇಳಿದರೂ ಏನೂ ಮಾಡಿಲ್ಲ. ಶವ ಪರೀಕ್ಷೆಯಾಗಬೇಕು ಎಂದು ಹೇಳುತ್ತಾರೆಯೇ ವಿನಾ ಮತ್ತೇನೂ ಇಲ್ಲವೆಂದು ಹೇಳಿದರು. ಇದರ ಬಗ್ಗೆ ದೂರು ಕೊಟ್ಟರೂ ಡೈರೆಕ್ಟರ್ ಆಫ್ ಮೆಡಿಕಲ್ ಅಂಡ್ ಪಬ್ಲಿಕ್ ಹೆಲ್ತ್ ಮತ್ತು ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಯಾರೂ ಬರಲಿಲ್ಲವೆಂದು ಕೇಳಿದ್ದೇನೆ. ಕೊನೆಗೆ ಆ ರೋಗಿಯನ್ನು ಎಲ್ಲಿಗೆ ಸಾಗಿಸಿದರು ಎಂಬುದೇ ಗೊತ್ತಾಗಲಿಲ್ಲ. ಅದು ಎಲ್ಲಿಂದ ಅವರಿಗೆ ಸೂಚನೆ ಬಂತೋ ಗೊತ್ತಿಲ್ಲ. ಆ ಕೇಸು ಏನಾಯಿತು ಎಂಬುದೇ ಗೊತ್ತಾಗಲಿಲ್ಲ. ಇದರ ಬಗ್ಗೆ ಒಂದು ಅರ್ಜಿಯನ್ನು ಸರ್ಕಾರಕ್ಕೆ ಕೊಟ್ಟಿದ್ದರೂ ಇದುವರೆಗೂ ಏನು ತೀರ್ಮಾನವಾಗಲಿಲ್ಲ.

ಮತ್ತೊಂದು ನಿದರ್ಶನವನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಬೌರಿಂಗ್ ಆಸ್ಪತ್ರೆಯಲ್ಲಿ ನಡೆದುದೇ. ಇತ್ತೀಚೆಗೆ ಅದೇ ರೀತಿಯಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿಯೂ ನಡೆಯುತ್ತಿದೆ. ಅಲ್ಲಿ ಗ್ಲೂಕೋಸ್ ತಯಾರು ಮಾಡತಕ್ಕ ಕಾರ್ಖಾನೆಯನ್ನು ಒಂದು ಸಣ್ಣ ಪ್ರಮಾಣದಲ್ಲಿಟ್ಟಿರಬೇಕು. ಹಣವನ್ನು ಉಳಿಸುವುದಕ್ಕೋಸ್ಕರ ಅಲ್ಲಿನ ಭಾರಿ ಭಾರಿ ಡಾಕ್ಟರುಗಳು ಯೋಚನೆ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಅದನ್ನು ಸರ್ಕಾರದವರು ವಿಚಾರ ಮಾಡಬೇಕು. ಲೈಸೆನ್ಸ್ ಇಲ್ಲದೆಯೇ ಅಲ್ಲಿ ಗ್ಲೂಕೋಸ್ ತಯಾರು ಮಾಡುತ್ತಿದ್ದಾರೆ. ನರ್ಸುಗಳನ್ನು ಇದಕ್ಕೆ ನೇಮಕ ಮಾಡಿ ಈ ರೀತಿ ಮಾಡುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಒಂದು ದ್ರಾವಕ ಬಾಟಲನ್ನು ಮತ್ತೊಂದು ಬಾಟಲಿನಲ್ಲಿ ಬೆರೆಸುತ್ತಿದ್ದಾಗ ಫಿಲೊಮಿನಾ ಎಂಬ ನರ್ಸಿಗೆ ಗಾಜಿನ ಚೂರು ಸಿಡಿದು ಆ ದ್ರಾವಕದಿಂದ ಮುಖ ಸುಟ್ಟು ಹೋಯಿತು. ಅದನ್ನು ಬೇರೆಯವರಿಗೆ ತಿಳಿಸಿದರೆ ಎಲ್ಲಿ ಅಪರಾಧವಾಗುತ್ತದೋ ಎಲ್ಲಿ ಅವಮಾನವಾಗುತ್ತದೋ ಎಂದು ಒಳಗೆ ರಹಸ್ಯವಾಗಿ ಕರೆದುಕೊಂಡು ಹೋಗಿ ಸ್ಪೆಷಲ್ ವಾರ್ಡಿನಲ್ಲಿ ಟ್ರೀಟ್‌ಮೆಂಟ್ ಕೊಟ್ಟು ಕಳುಹಿಸಿದ್ದಾರೆ. ಈ ವಿಚಾರದಲ್ಲಿಯೂ ಆ ಪೇಷಂಟಿನ ಪರಿಸ್ಥಿತಿ ಏನಾಯಿತು ಎಂಬುದೇ ತಿಳಿಯಲಿಲ್ಲ. ಇಂತಹ ಅನೇಕ ನಿದರ್ಶನಗಳಿವೆ. ಆದರೆ ಈ ಸಭೆಯಲ್ಲಿ ಎಲ್ಲಾ ನಿದರ್ಶನಗಳನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದಕ್ಕೆ ಸಾಕಷ್ಟು ಕಾಲಾವಕಾಶವೂ ಸಹ ಇಲ್ಲ. ಈ ಮೂರು ನಿದರ್ಶನಗಳಿಂದ ನಮಗೆ ಏನು ಗೊತ್ತಾಗುತ್ತದೆಂದರೆ, ಮಾನವೀಯತೆಯಿಂದ ಡಾಕ್ಟರುಗಳು ವರ್ತಿಸುತ್ತಾ ಇಲ್ಲವೆಂದು ತಿಳಿಯುತ್ತದೆ, ಆದರೆ ಎಲ್ಲಾ ಡಾಕ್ಟರುಗಳೂ ಆ ರೀತಿಯಾಗಿಲ್ಲ. ಒಳ್ಳೆಯವರು ಕೆಲವರು ಇದ್ದಾರೆ. ಆದ್ದರಿಂದ ಆಗಾಗ್ಗೆ ಕೆಲವು ಮುಖ್ಯಾಧಿಕಾರಿಗಳು ಹಾಗೂ ಮಾನ್ಯ ಮಂತ್ರಿಗಳು ಇಂತಹ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿ ಹೇಗೆ ಲಿನನ್ ಸರಬರಾಜು ಆಗುತ್ತಿದೆ, ರೋಗಿಗಳಿಗೆ ಸರಿಯಾದ ಉಪಚಾರವಿದೆಯೇ ಅವರ ಹಾಸಿಗೆ ಹೊದಿಕೆಗಳು ಶುಭ್ರವಾಗಿವೆಯೇ ಎಂಬುದನ್ನು ನೋಡಬೇಕು.

ಇನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನನಗೆ ತಿಳಿದಿರುವ ಪ್ರಕಾರ ರೋಗಿಗಳಿಗೆ ಒಳ್ಳೆಯ ಶುಭ್ರವಾದ ದುಪಟಿಗಳನ್ನು ಹೊದಿಸುತ್ತಾ ಇಲ್ಲ. ಬಹಳ ಗಲೀಜು ಆಗಿರುತ್ತದೆ. ಅಲ್ಲಿ ರೋಗಿಯಾದ ಮನುಷ್ಯನು ಮಲಗುವ ಹಾಗೆಯೇ ಇಲ್ಲ. ಎರಡು ಮಂಚಗಳ ಮಧ್ಯೆ ಹಾಸಿಗೆಗಳನ್ನು ನೆಲದ ಮೇಲೆ ಹಾಸಿದ್ದಾರೆ. ಬಹಳ ಮೋಸವಾದ ಪರಿಸ್ಥಿತಿ ಇದೆ. ಅವನ್ನೆಲ್ಲಾ ಕೂಡಲೇ ಸರಿಮಾಡಬೇಕು. ಹಿಂದೆಯೇ ಈ ಆಸ್ಪತ್ರೆಗೆ ಎಲೆಕ್ಟ್ರಿಕ್ ಲಾಂಡ್ರಿಯನ್ನು ತರಿಸಬೇಕೆಂದು ತೀರ್ಮಾನ ಮಾಡಿದ್ದರು. ಇದನ್ನು ತರಿಸಿದ್ದರೂ ಇದುವರೆಗೆ ಚಾಲು ಆಗಲಿಲ್ಲ. ಏತಕ್ಕಾಗಲಿಲ್ಲವೆಂದು ಪರಿಶೀಲನೆ

(ಶ್ರೀ ಎಂ. ಎಸ್. ಕೃಷ್ಣನ್)

ಮಾಡಿದ್ದಾರೆಯೇ ಎಂದರೆ ಅದೂ ಆಗಿಲ್ಲ. ಲಕ್ಷಾಂತರ ರೂಪಾಯಿಗಳಷ್ಟು ಹಣ ಹಾಕಿ ಅವನ್ನು ತಂದು ಏನೂ ಪ್ರಯೋಜನವಾಗಲಿಲ್ಲ. ಅವು ಚಾಲು ಆಗಿದ್ದರೆ ಸ್ವಲ್ಪಮಟ್ಟಿಗೆ ಪರಿಸ್ಥಿತಿ ಉತ್ತಮವಾಗುತ್ತಿತ್ತು. ಹೀಗಿರುವುದರಿಂದ ಸರ್ಕಾರದವರು ಈ ಕಡೆಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ನನ್ನ ಮಿತ್ರರು ಬೇರೆ ಹೇಳಿದ ಹಾಗೆ ನರ್ಸಸ್ ಮತ್ತು ಆಯಾಗಳ ಸರ್ವಿಸ್ ಕಂಡೀಷನ್ಸ್ ಉತ್ತಮ ಪಡಿಸಬೇಕು. ಅವರ ಪರಿಸ್ಥಿತಿ ಬಹಳ ಅಧೋಗತಿಗೆ ಬಂದಿದೆ. ಅದನ್ನು ಕೂಡಲೇ ಸರಿಪಡಿಸಬೇಕು. ಇಷ್ಟು ಹೇಳಿ ನನಗೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ನಾನು ಮೊದಲನೆಯದಾಗಿ ಹಳ್ಳಿಯ ಕಷ್ಟವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದುವರೆಗೂ ಅನೇಕ ಸದಸ್ಯರು ಪಟ್ಟಣದಲ್ಲಿರತಕ್ಕ ಆಸ್ಪತ್ರೆಗಳ ಬಗ್ಗೆ ಮಾತ್ರ ಮಾತನಾಡಿದ್ದಾರೆ. ಇವತ್ತು ಮಾನ್ಯ ಆರೋಗ್ಯ ಸಚಿವರು 67-68ನೇ ಸಾಲಿಗೆ ಅಂದಾಜು ಬೇಡಿಕೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದನ್ನು ಸ್ವಾಗತಿಸುತ್ತಾ ನಾನು ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ಇವತ್ತಿನ ದಿವಸ ನಮಗೆ ತಿಳಿದಿರುವ ಹಾಗೆ ಹಳ್ಳಿಗಾಡುಗಳಲ್ಲಿ ಜನರಿಗೆ ಆರೋಗ್ಯ ಸೌಕರ್ಯಗಳನ್ನು ಕಡಿಮೆ ಮಟ್ಟದಲ್ಲಿ ಕೊಡುತ್ತಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಕಾರಣವಿಷ್ಟೆ. ಯಾವ ಹಳ್ಳಿಯಲ್ಲಿರತಕ್ಕ ಆಸ್ಪತ್ರೆಗಳನ್ನು ನೋಡಿದರೂ ಅಲ್ಲಿ ಡಾಕ್ಟರುಗಳೇ ಇಲ್ಲ. ಯಾವ ಆಸ್ಪತ್ರೆಯಲ್ಲಿ ಕೇಳಿದರೂ ಡಾಕ್ಟರುಗಳು ಇಲ್ಲವೇ ಇಲ್ಲವೆಂದು ಹೇಳುತ್ತಾರೆ. ಕೆಲವು ಕಡೆಗಳಿಗೆ ಆಸ್ಪತ್ರೆಗಳು ಮಂಜೂರು ಆಗಿರುತ್ತವೆ. ಸಿಬ್ಬಂದಿಯನ್ನೇ ನೇಮಿಸಿರುವುದಿಲ್ಲ. ಗ್ರಾಮಾಂತರ ಜನರಿಗೆ ಒಂದು ತೃಪ್ತಿ ಏನೆಂದರೆ, ನಮ್ಮ ಊರಿನಲ್ಲಿ ಒಂದು ಆಸ್ಪತ್ರೆ ಮಂಜೂರಾಗಿದೆ ಎಂಬುದು.

5-00 P. M.

ಇನ್ನು ಕೆಲವು ನಿದರ್ಶನಗಳನ್ನು ಹೇಳುವುದಾದರೆ ಆಸ್ಪತ್ರೆಗಳಲ್ಲಿ ಔಷಧಿ ಇರುವುದಿಲ್ಲ. ಡಾಕ್ಟರುಗಳನ್ನು ಕೇಳಿದರೆ ಔಷಧಿಯನ್ನು ತರಿಸುವುದಕ್ಕೆ ಇನ್‌ಡೆಂಟ್ ಕಳುಹಿಸಿಕೊಟ್ಟು ಎಷ್ಟೋ ದಿವಸಗಳಾಯಿತು, ಇನ್ನೂ ಸಾಮಾನುಗಳು ಬಂದಿಲ್ಲ, ಅವು ಐ. ಟಿ. ಎಲ್. ನಿಂದ ಬರಬೇಕು, ನಾವು ಔಷಧಿಯನು ಕೊಂಡುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಇದರಿಂದ ಹಳ್ಳಿಗಾಡಿನ ಜನತೆಗೆ ವೈದ್ಯಕೀಯ ಸೌಲಭ್ಯ ದೊರೆಯುವುದು ಬಹಳ ಕಷ್ಟವಾಗಿ, ಈ ವಿಷಯವನ್ನು ಜನಗಳು ಅನೇಕ ವೇಳೆ ಸ್ಥಳದಲ್ಲಿರತಕ್ಕ ಅಧಿಕಾರಿಗಳಿಗೆ ಹೇಳಿದ್ದಾರೆ. ಆದರೂ ಸಹ ಯಾವುದೇ ವಿಧವಾದ ಪ್ರತಿಫಲ ಅದರಿಂದ ಆಗಿಲ್ಲ ಎಂದು ನನಗೆ ಅನಿಸುತ್ತದೆ. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು ಇದ್ದಾರೆ. ಅವರು ಬರೀ ಕುಟುಂಬ ಯೋಜನೆಗೆ ಇದ್ದಾರೇನೋ ಬೇರೆ ಯಾವುದಕ್ಕೂ ಇಲ್ಲ ಎನ್ನುವ ಮನೋಭಾವ ಇದೆ. ಅದಕ್ಕೆ ಕಾರಣ ಇಷ್ಟೆ. ಅವರಿಗೆ ಸಂಬಳದ ಜೊತೆಗೆ ಅಲೋಯನ್ಸ್ ಕೂಡ ಕೊಡುತ್ತಾರೆ. ಆದ್ದರಿಂದ ಕುಟುಂಬ ಯೋಜನೆಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಶೇಖರಿಸುವುದು ಇತ್ಯಾದಿ ಕೆಲಸಕಾರ್ಯಗಳನ್ನು ಮಾಡುವುದರಲ್ಲಿಯೇ ನಿರತಾಗಿರುತ್ತಾರೆ. ತಮ್ಮ ಮುಖ್ಯವಾದ ಕರ್ತವ್ಯ ಮಾಡಬೇಕು ಎನ್ನುವ ಮನೋಭಾವನೆಯೇ ಇಲ್ಲ. ಈ ಕುಟುಂಬ ಯೋಜನೆಗೆ ಇಂಡಿಯಾ ಸರ್ಕಾರದವರು ಬೇಕಾದಷ್ಟು ಹಣವನ್ನು ಕೊಡುತ್ತಾರೆ. ಇದು ನಿಜವಾಗಿಯೂ ಸಮರ್ಪಕವಾದ ರೀತಿಯಲ್ಲಿ, ಉಪಯೋಗವಾಗುತ್ತಿಲ್ಲ. ಈಗ ಸರ್ಕಾರದವರು ಹೊಸದಾಗಿ ಅಂಕಿಅಂಶಗಳನ್ನು ಇಟ್ಟರೆ ಒಳ್ಳೆಯದು. ಈಗ ಎಷ್ಟು ಜನ ಲೂಪು ಹಾಕಿಸಿಕೊಂಡರು ಎಷ್ಟು ಜನ ಲೂಪು ತೆಗೆಸಿಕೊಂಡರು ಎನ್ನತಕ್ಕಂತ ಒಂದು ಅಂಕಿಅಂಶವನ್ನು ಇಟ್ಟರೆ ಒಳ್ಳೆಯದು. ಈ ವಿವರಗಳನ್ನು ಸರಿಯಾಗಿ ಶೇಖರಣೆ ಮಾಡಿದರೆ ಇದು ಯಶಸ್ವಿಯಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ನಾನು ಅನೇಕ ಕಡೆ ಕೇಳಿದ್ದೇನೆ. ಲೂಪನ್ನು ತೆಗೆಸಿರುವವರು ಜಾಸ್ತಿ. ಇದಕ್ಕೆ ಕಾರಣವೇನೆಂದರೆ, ಲೂಪು ಹಾಕಿಸಿಕೊಂಡವರಿಗೆ ದುಡ್ಡು ಕೊಡುವ ಪದ್ಧತಿ ಇದೆ. ಆದ್ದರಿಂದ ಲೂಪನ್ನು ಹಾಕಿಸಿಕೊಳ್ಳುವುದಕ್ಕೆ ಹೆಂಗಸರನ್ನು ಕರೆದುಕೊಂಡು ಬರತಕ್ಕ ಏಜೆಂಟುಗಳು ಇದ್ದಾರೆ. ಹಿಂದೆ ಕಾಫೀ ಎಸ್ಟೇಟಿಗೆ ಕೂಲಿಗಳನ್ನು ರವಾನೆ ಮಾಡುವುದಕ್ಕೆ ಯಾವರೀತಿ ಏಜೆಂಟುಗಳು ಇದ್ದರೋ ಅದೇರೀತಿಯಲ್ಲಿ ಈ ಕುಟುಂಬ ಯೋಜನೆಗೂ ಏಜೆನ್ಸಿಗಳು ಇದ್ದಾರೆ. ಲೂಪು ಹಾಕಿಸಿಕೊಂಡವರಿಗೆ 5 ರೂಪಾಯಿಗಳಿಂದ 15 ರೂಪಾಯಿಗಳನ್ನು ಸರ್ಕಾರದವರು ಕೊಡುತ್ತಾರೆ. ಈ ಒಂದು ಪದ್ಧತಿ ಈ ಕುಟುಂಬ ಯೋಜನೆಯಲ್ಲಿದೆ. ಈಗ ಎಷ್ಟು ಜನ ಲೂಪು ಹಾಕಿಸಿಕೊಂಡಿದ್ದಾರೆಯೋ ಅಷ್ಟು ಜನಗಳೂ ತೆಗೆಸಿದ್ದಾರೆ. ಅದರ ಒಂದು ಅಂಕಿ ಅಂಶಗಳನ್ನು ಸರ್ಕಾರದವರು ಶೇಖರಣೆ ಮಾಡಿದರೆ ಅದು ಅವರಿಗೆ ಗೊತ್ತಾಗು

ತ್ತದೆ. ಇದು ಅಷ್ಟಾಗಿ ಯಶಸ್ವಿಯಾಗಿಲ್ಲ, G. O. S. P. ಆಸ್ಪತ್ರೆ ವ್ಯಾನುಗಳನ್ನು ಸಂಪೂರ್ಣವಾಗಿ ಈ ಕುಟುಂಬ ಯೋಜನೆಗಾಗಿಯೇ ಉಪಯೋಗಿಸುತ್ತಿದ್ದಾರೆ. ಜನಗಳನ್ನು ಕರೆದುಕೊಂಡು ಬರುವುದು, ಕಳುಹಿಸುವುದು ಇದೇ ಈ ವ್ಯಾನುಗಳಿಗೆ ಕೆಲಸವಾಗಿದೆ. ಹಳ್ಳಿಗಾಡಿನ ಜನಗಳಿಗೆ ಹೆಚ್ಚಿನ ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕೆಂದು ಸರ್ಕಾರದವರು ವಾಹನಗಳನ್ನು ಕೊಟ್ಟಿದ್ದಾರೆಯೋ ಅದು ಬರೀ ಕುಟುಂಬ ಯೋಜನೆಗೆ ಮಾತ್ರ ಆ ವಾಹನಗಳು ಪ್ರಯೋಜನವಾಗುತ್ತಿದೆ, ಬೇರೆ ಯಾವ ಪ್ರಯೋಜನವೂ ಆಗುತ್ತಿಲ್ಲ. ನಾನು ತಮಗೆ ತುಮಕೂರು ಜಿಲ್ಲೆಯ ವಿಷಯವನ್ನು ಹೇಳುವುದಾದರೆ, ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ. ಒಂದು ತಾಲ್ಲೂಕಿನಲ್ಲಿ 6 ಆಸ್ಪತ್ರೆಗಳಿದ್ದರೆ ಅದರಲ್ಲಿ 3 ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇಲ್ಲ ಎಂದು ಹೇಳುತ್ತಾರೆ. ಜನಗಳನ್ನು ಯಾರನ್ನು ಕೇಳಲಿ ಆಸ್ಪತ್ರೆಯಲ್ಲಿ ಡಾಕ್ಟರಿಲ್ಲ ಎಂದು ಹೇಳುತ್ತಾರೆ. ಸರ್ಕಾರದವರು ಬೇಕಾದಷ್ಟು ಕೆಲಸಗಳನ್ನು ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಆಸ್ಪತ್ರೆಗಳಿಗೆ ಬೇಕಾದ ಡಾಕ್ಟರುಗಳನ್ನು ಒದಗಿಸುವುದಕ್ಕಾಗುವುದಿಲ್ಲವೇ ಎಂದು ಹಳ್ಳಿಗಾಡುಗಳಲ್ಲಿ ಹೇಳುತ್ತಾರೆ.

ಇನ್ನು ತಾಲ್ಲೂಕು ಬೋರ್ಡುಗಳ ಆಸ್ಪತ್ರೆಗಳ ವೈಖರಿಯನ್ನು ಹೇಳುವುದು ಬಹಳ ಕಷ್ಟವಾಗಿದೆ. ತಾಲ್ಲೂಕು ಬೋರ್ಡುಗಳ ಆಸ್ಪತ್ರೆಗಳನ್ನು ಸರ್ಕಾರದವರು ಮಂಜೂರು ಮಾಡಿದರು. ಆ ಆಸ್ಪತ್ರೆಗಳಿಗೆ ಮೆಡಿಕಲ್ ಡಿಪಾರ್ಟ್‌ಮೆಂಟಿನವರು ತಮ್ಮದೇ ಆದ ಸಿಬ್ಬಂದಿಯನ್ನು ನೇಮಿಸಿದರು. ತಾಲ್ಲೂಕು ಬೋರ್ಡ್ ಅಧ್ಯಕ್ಷರ ಅನುಮತಿಯನ್ನು ಪಡೆಯದೆ ಆ ಅಧಿಕಾರಿಗಳನ್ನು ವರ್ಗ ಮಾಡಿದರು. ವರ್ಗ ಮಾಡಿದ ಆಸ್ಪತ್ರೆಗೆ ಪುನಃ ಸಿಬ್ಬಂದಿಯನ್ನು ನೇಮಿಸಲಿಲ್ಲ. ತಾಲ್ಲೂಕು ಬೋರ್ಡಿನವರು ಕೇಳಿದಲ್ಲಿ ಹೇಳುತ್ತಾರೆ. ಈಗ ಅವರು ನಾವು ಇಂಥಾ ಸಿಬ್ಬಂದಿಯನ್ನು ಈ ಆಸ್ಪತ್ರೆಗಳಿಗೆ ಹಾಕಿದ್ದೇವು, ಈಗ ನಾವು ಅವರನ್ನು ತೆಗೆದುಕೊಳ್ಳುತ್ತೇವೆ, ನಿಮಗೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳಿ ಎಂದು ತಾಲ್ಲೂಕು ಬೋರ್ಡಿನವರಿಗೆ ಹೇಳೇ ಸರ್ಕಾರದವರು ಅವರ ಸಿಬ್ಬಂದಿಯನ್ನು ಕರೆಸಿಕೊಳ್ಳಲು ಆರ್ಡರು ಮಾಡಿದರು. ಕೊನೆಯಪಕ್ಷ ತಾಲ್ಲೂಕು ಬೋರ್ಡಿನವರನ್ನು ಒಂದು ಮಾತನ್ನಾದರೂ ಕೇಳೋಣ ಎನ್ನುವ ಯೋಚನೆ ಮಾಡಲಿಲ್ಲ. ತಕ್ಷಣ ತಮ್ಮ ಸಿಬ್ಬಂದಿಯನ್ನು ಸರ್ಕಾರದವರು ವರ್ಗಮಾಡಿದರು. ಈಗ ತಾಲ್ಲೂಕು ಬೋರ್ಡಿನವರು ತಾಲ್ಲೂಕು ಬೋರ್ಡಿನ ಆಸ್ಪತ್ರೆಗಳನ್ನು ನಡೆಸುವುದು ಬಹಳ ಕಷ್ಟವಾಗಿದೆ ಅನಿಸುತ್ತದೆ. ಇದರ ಜೊತೆಗೆ ತುಮಕೂರು ಜಿಲ್ಲೆಯಲ್ಲಿ ಎರಡು ದೊಡ್ಡ ಆಸ್ಪತ್ರೆಗಳಿವೆ. ತುಮಕೂರಿನಲ್ಲಿ ಒಂದು ಇದೆ, ಇನ್ನೊಂದು ತಿಪಟೂರಿನಲ್ಲಿದೆ. ತಿಪಟೂರಿನಲ್ಲಿರತಕ್ಕ ಆಸ್ಪತ್ರೆಗೆ ಅನೇಕ ಜನ ಉದಾರವಾಗಿ ದಾನ ಮಾಡಿದ್ದಾರೆ. ಉತ್ತಮವಾದ ಬಿಲ್ಡಿಂಗ್ ಕಟ್ಟಿಸಿಕೊಟ್ಟಿದ್ದಾರೆ. ಎಕ್ಸರೇ ಎಕ್ವಿಪ್‌ಮೆಂಟ್‌ಗೋಸ್ಕರ ಒಬ್ಬರು ಹಣವನ್ನು ಉದಾರವಾಗಿ ಸಹಾಯ ಮಾಡಿದ್ದಾರೆ. ಅನೇಕ ವರ್ಷಗಳಾದರೂ ಕೂಡ ಅಲ್ಲಿ ಎಕ್ಸರೇ ಪ್ಲಾಂಟ್ ಹಾಕಿಲ್ಲ. ಯಾರು ದಾನವನ್ನು ಮಾಡಿದ್ದಾರೆಯೋ ಅವರು ತಿಪಟೂರು ಆಸ್ಪತ್ರೆಯಲ್ಲಿ ಎಕ್ಸರೇ ಪ್ಲಾಂಟ್ ಹಾಕಿಸಿಕೊಡುವಂತೆ ಸರ್ಕಾರದವರನ್ನು ಕೇಳಿದ್ದಾರೆ. ಮತ್ತು ತಿಪಟೂರಿನ ಜನತೆ ಕೇಳಿದ್ದಾರೆ. ಆದರೂ ಸಹ ಸಂಬಂಧಪಟ್ಟ ಇಲಾಖೆಯವರು ಆ ಕೆಲಸವನ್ನು ಮಾಡಿಲ್ಲ, ಎಕ್ಸರೇ ಪ್ಲಾಂಟನ್ನು ಹಾಕಿಸಿಕೊಟ್ಟಿಲ್ಲ, ಆದ್ದರಿಂದ ಅದನ್ನು ಆದಷ್ಟು ಜಾಗ್ರತೆಯಾಗಿ ಹಾಕಿಸಿಕೊಡಬೇಕೆಂದು ನಾನು ಕಳಕಳಿಯಿಂದ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ನಿನ್ನೆ ದಿವಸ ಶ್ರೀಮತಿ ನಾಗರತ್ನಮ್ಮನವರೂ ಈ ವಿಷಯವನ್ನು ಹೇಳಿದರು. ಅದೇನೆಂದರೆ, ಒಬ್ಬ ಡಾಕ್ಟರು ಬರೆದಂತಹ ಚೀಟಿಯನ್ನು ನೋಡಿ ಇನ್ನೊಬ್ಬ ಡಾಕ್ಟರು ಕೆಲಸ ಮಾಡಬಾರದು ಎನ್ನತಕ್ಕಂಥ ಒಂದು ನಿಯಮವನ್ನು ಪಾಲನೆ ಮಾಡುತ್ತಿದ್ದಾರೆ. ವೈದ್ಯೋ ನಾರಾಯಣೋ ಹರಿಃ ಎನ್ನುವ ಹಾಗೆ ವೈದ್ಯರನ್ನು ಪರಮಾತ್ಮ ಸ್ವರೂಪ ಎಂದು ಹೇಳಬಹುದು. ಹೀಗಿರುವಾಗ ನಾವು ಉತ್ತಮವಾದ ಸಂಸ್ಕೃತಿಯಲ್ಲಿ ಬೆಳೆದ ಜನ ಬೌರಿಂಗ್ ಆಸ್ಪತ್ರೆಯಲ್ಲಿ ಒಬ್ಬ ಪೇಷೆಂಟಿಗೆ ಅರ್ಜಂಟಾಗಿ ಎಕ್ಸರೇ ಮಾಡಬೇಕು ಎಂದು ಒಬ್ಬ ಡಾಕ್ಟರು ಬರೆದರು. ಆಸ್ಪತ್ರೆಯಲ್ಲಿ 15 ದಿವಸಗಳಾದರೂ ಎಕ್ಸರೇ ಮಾಡಲಿಲ್ಲ. ಕೊನೆಗೆ ಅದನ್ನು ಸರ್ಕಾರದವರ ಗಮನಕ್ಕೆ ತಂದು ಸರ್ಕಾರದಿಂದ ಹೇಳಿಸಿದರೂ ಕೂಡ ಎಕ್ಸರೇ ಮಾಡಲಿಲ್ಲ. ಇಂಥಾ ಪ್ರಸಂಗಗಳು ನಡೆಯುತ್ತವೆ. ಎಷ್ಟೋ ಸಂದರ್ಭಗಳಲ್ಲಿ ಜನತೆಗೆ ಉತ್ತಮವಾದ ವೈದ್ಯಕೀಯ ಸೌಲಭ್ಯಗಳು ಸಿಕ್ಕುವುದಿಲ್ಲ. ಕೊನೆಗೆ ಆ ರೋಗಿಯನ್ನು ವೆಲ್ಲೂರಿಗೆ ಕರೆದುಕೊಂಡು ಹೋಗತಕ್ಕಂಥ ಪರಿಸ್ಥಿತಿ ಉಂಟಾಯಿತು. ಆಸ್ಪತ್ರೆಗೆ ಹೋದ ತಕ್ಷಣ ದೇವಸ್ಥಾನಕ್ಕೆ ಹೋದಂತಹ ಭಾವನೆ ಬರಬೇಕು. ಆಸ್ಪತ್ರೆಗೆ ಹೋಗಿ ಡಾಕ್ಟರನ್ನು ನೋಡಿದಾಗ ಮನಸ್ಸಿನಮೇಲೆ ಒಂದು ಒಳ್ಳೆಯ ಪರಿಣಾಮವನ್ನುಂಟುಮಾಡತಕ್ಕ ವಾತಾವರಣ ಇರಬೇಕು. ಅಂಥಾ ವಾತಾವರಣ ಹೋಗಿ ಆಸ್ಪತ್ರೆಯಲ್ಲಿಯೂ ರಾಜಕೀಯ ಇದೆ, ಎನ್ನುವ ಪರಿಸ್ಥಿತಿ ಬಂದಿದೆ ಸರ್ಕಾರದವರು ದಯವಿಟ್ಟು ಅದನ್ನು ಕಡಿಮೆ ಮಾಡಬೇಕೆಂದು ನಾನು ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಎಂ. ಎನ್. ರಾಮಣ್ಣ)

ಇನ್ನು ಎರಡನೆಯದಾಗಿ ತಿಪಟೂರು ಆಸ್ಪತ್ರೆ ಊರಿಗೆ ಬಹಳ ದೂರ ಇದೆ. ತುಮಕೂರು ಆಸ್ಪತ್ರೆಯಲ್ಲಿ ಹೇಗೆ ಅಂಬ್ಯುಲೆನ್ಸ್ ಕೊಟ್ಟಿದ್ದೀರೋ ಅದೇರೀತಿಯಲ್ಲಿ ಅಲ್ಲಿಗೂ ಒಂದು ಅಂಬ್ಯುಲೆನ್ಸ್ ಕೊಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತುರುವೇಕೆರೆಯಲ್ಲಿ ಹೆರಿಗೆ ಆಸ್ಪತ್ರೆ ಸ್ಥಾಪನೆಯಾಗಿದೆ. ಜನಗಳ ಸಹಕಾರದಿಂದ ಅಲ್ಲಿ ಪೌರಸಭೆಯವರು ಮತ್ತು ತಾಲ್ಲೂಕು ಬೋರ್ಡಿನವರು 30 ಸಾವಿರ ರೂಪಾಯಿಗಳನ್ನು ಆಸ್ಪತ್ರೆಗೋಸ್ಕರ ಡಿಪಾಜಿಟ್ ಮಾಡಿದ್ದಾರೆ. ಹಿಂದಿನ ಆರೋಗ್ಯಮಂತ್ರಿಗಳು ಈ ಆಸ್ಪತ್ರೆಗೆ ಶಂಕುಸ್ಥಾಪನೆ ಮಾಡಿ 4 ವರ್ಷಗಳಾದವು. ಈ ಆಸ್ಪತ್ರೆ ಸಂಬಂಧಪಟ್ಟ ಅಂದಾಜು ಮೇಲಿನಿಂದ ಕೆಳಗೆ ಕೆಳಗಿನಿಂದ ಮೇಲೆ ಓಡಾಡುತ್ತಿದೆ. ವರ್ಷಗಳು ಕಳೆದರೂ ಕೆಲಸಗಳು ಆಗುತ್ತಿಲ್ಲ. ಇದನ್ನು ನೋಡಿದರೆ ಹಳ್ಳಿಗಾಡುಗಳಿಗೆ ಕೊಡಬೇಕಾಗಿದ್ದ ವೈದ್ಯಕೀಯ ಸೌಲಭ್ಯ ಸರಿಯಾಗಿ ಸಿಕ್ಕುತ್ತಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಅನೇಕ ಆಸ್ಪತ್ರೆಗಳಲ್ಲಿ ಅದರಲ್ಲೂ ಹಳ್ಳಿಗಾಡುಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ನರ್ಸುಗಳು ಇರುವುದಿಲ್ಲ. ಆ ಆಸ್ಪತ್ರೆಗಳಲ್ಲಿರತಕ್ಕ ಡಾಕ್ಟರುಗಳನ್ನು ಕೇಳಿದರೆ ಅವರು ನಾವೇನು ಮಾಡೋಣ ಡಿ. ಎಚ್. ಓ ಅವರನ್ನು ಕೇಳಿ ಎಂದು ಹೇಳುತ್ತಾರೆ. ಡಿ.ಎಚ್.ಓ. ಕಂಡರೆ ಅವರು ಡಿ.ಪಿ.ಎಚ್. ಕೇಳಿ ಎಂದು ಹೇಳುತ್ತಾರೆ. ಇಂಥಾ ಒಂದು ಪರಿಸ್ಥಿತಿ ಉಂಟಾಗಿದೆ. ಈ ರೀತಿಯಾಗಿ ಹಳ್ಳಿಗಾಡಿನವರಿಗೆ ಸರಿಯಾದಂಥ ವೈದ್ಯಕೀಯ ಸೌಲಭ್ಯ ದೊರೆಯುತ್ತಿಲ್ಲ. ಆದ್ದರಿಂದ ಹಳ್ಳಿಗಾಡಿನಲ್ಲಿ ಇರತಕ್ಕ ಆಸ್ಪತ್ರೆಗಳಲ್ಲಿ ಎಲ್ಲೆಲ್ಲಿ ಸೂಲಗಿತ್ತಿಯವರು ಇಲ್ಲವೋ ಅಂಥಾ ಕಡೆಗಳಿಗೆಲ್ಲಾ ತಕ್ಷಣ ಸೂಲಗಿತ್ತಿಯವರನ್ನು ನೇಮಿಸುವಂತೆ ಒಂದು ಸೂಚನೆಯನ್ನು ಸರ್ಕಾರ ಅಧಿಕಾರಿಗಳಿಗೆ ಕೊಡಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಅಧಿಕಾರಿಗಳ ವರ್ಗಾವರ್ಗಿ ವಿಷಯದಲ್ಲಿ ಈ ಇಲಾಖೆಯಲ್ಲಿ ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಅವರು ಬಹಳ ಕಠಿಣವಾಗಿ ನಡೆದುಕೊಳ್ಳುತ್ತಾರೆ ತಮಗೆ ಬೇಕಾದವರಿಗೆ ಮಾತ್ರ ವರ್ಗಾ ಮಾಡಿದ್ದರೂ ಸಹ ಕ್ಯಾನ್ಸಲ್ ಮಾಡುತ್ತಾರೆ. ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಒಬ್ಬ ಡಾಕ್ಟರರು ಟ್ರಾನ್ಸಫರ್ ಆರ್ಡರ್ ತೆಗೆದುಕೊಂಡು ಒಂದು ಊರಿಗೆ ಹೋಗಿ ರಿಪೋರ್ಟ್ ಮಾಡಿದ ತಕ್ಷಣ ಇನ್ನೊಂದು ಊರಿಗೆ ಹೋಗಿ ಚಾರ್ಜ್ ತೆಗೆದುಕೊಳ್ಳಬೇಕೆಂದು ಮತ್ತೊಂದು ಆರ್ಡರ ಮಾಡಿದರು. ಆ ಊರಿನಲ್ಲಿ ಇದ್ದುದು ಒಂದೇದಿವಸ. ಮರುದಿವಸವೇ ಬೇರೆ ಊರಿಗೆ ಹೋಗಬೇಕಾಯಿತು. ಈ ರೀತಿ ಮಾಡುವುದು ಸರಿಯಿಲ್ಲ ಎಂದು ಹೇಳುತ್ತೇನೆ.

ನಿಜವಾಗಿಯೂ ಒಬ್ಬ ಮಂತ್ರಿಯನ್ನು ಸುಲಭವಾಗಿ ನೋಡಬಹುದು. ಆದರೆ ಡೈರೆಕ್ಟರರನ್ನು ನೋಡುವುದಕ್ಕಾಗುವುದಿಲ್ಲ. ಅವರ ಆಫೀಸಿನಲ್ಲಿ ಅರ್ಧಗಂಟೆ ನಿಲ್ಲಬೇಕಾಗುತ್ತದೆ. ಕುಳಿತುಕೊಳ್ಳುವುದಕ್ಕೆ ಜಾಗವಿಲ್ಲ. ಅಲ್ಲಿಗೆ ಹೋಗಿ ನೋಡಿದರೆ ಬಹಳ ನಿರಾಶೆಯಾಗುತ್ತದೆ. ಒಂದು ಊರಿನಿಂದ ಇನ್ನೊಂದು ಊರಿಗೆ ಟ್ರಾನ್ಸ್‌ಫರ್ ಮಾಡುತ್ತಾರೆ, ತಕ್ಷಣ ಮತ್ತೊಂದು ಊರಿಗೆ ವರ್ಗಮಾಡುತ್ತಾರೆ. ಫುಟ್‌ಬಾಲ್ ಆಟದಲ್ಲಿ ರಬ್ಬರ್ ಚೆಂಡನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಕಾಲಿನಿಂದ ಹೇಗೆ ಒದೆಯುತ್ತಾರೋ ಹಾಗೆ ವರ್ಗಮಾಡುತ್ತಾರೆ. ನಮ್ಮ ಸಂಸ್ಕೃತಿಯಲ್ಲಿ ವೈದ್ಯೋ ನಾರಾಯಣೋ ಹರಿಃ ಎಂಬ ಆರ್ಯೋಕ್ತಿ ಇದೆ. ಉತ್ತಮ ಸಂಸ್ಕೃತಿ ನಡತೆ ಡಾಕ್ಟರರಲ್ಲಿ ಇರಬೇಕು. ಆದುದರಿಂದ ಮಾನ್ಯಮಂತ್ರಿಗಳಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಉತ್ತಮ ಡಾಕ್ಟರರಾಗಿ ಉತ್ತಮ ನಡತೆ ಇರುವಂತೆ ವ್ಯವಸ್ಥೆಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಐದು ನಿಮಿಷ ಅವಕಾಶ ಕೊಟ್ಟುದಕ್ಕೆ ಅಧ್ಯಕ್ಷರನ್ನುವಂದಿಸಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ಕೆಲವು ದಿನಗಳ ಹಿಂದೆ ಒಂದು ದಿನ ಮುಂಜಾನೆ ಬೆಂಗಳೂರಿನ ಗುಟ್ಟಹಳ್ಳಿಯ ಒಬ್ಬರನ್ನು ಕರೆದುಕೊಂಡು ಹುಚ್ಚಾಸ್ಪತ್ರೆಗೆ ಡಾಕ್ಟರರಿಗೆ ತೋರಿಸುವುದಕ್ಕೆ ಹೋಗಿದ್ದರು. ಅಲ್ಲಿ ಡಾಕ್ಟರರನ್ನುಕಂಡು ನಮಗೆ ಹುಚ್ಚು ಹಿಡಿದೀತು ಎನ್ನುವ ಹಾಗೆ ಆಯಿತು. ಮೊದಲು ಒಬ್ಬ ಡಾಕ್ಟರರಿಗೆ ತೋರಿಸಿದಮೇಲೆ ಅವರು ಹೇಳಿದ್ದೇನೆಂದರೆ, ಇವರಿಗೆ ಹುಚ್ಚುಹಿಡಿದಿದೆ ಇದು ನಮಗೆ ಸಂಬಂಧಪಟ್ಟದಲ್ಲ ಪಕ್ಕದಲ್ಲಿರುವ ಡಾಕ್ಟರರಿಗೆ ತೋರಿಸಿ ಎಂದು ಹೇಳಿದರು. ಪಕ್ಕದಲ್ಲಿರುವ ಡಾಕ್ಟರರಿಗೆ ತೋರಿಸಿದರೆ ಇದು ನಮಗೆ ಸಂಬಂಧಪಟ್ಟದ್ದಲ್ಲ ಪಕ್ಕದಲ್ಲಿರುವ ವಾರ್ಡ್‌ನಲ್ಲಿ ತೋರಿಸಿ ಎಂದು ಹೇಳಿದರು. ಹೀಗೆ ಬೆಳಿಗ್ಗೆ ಒಂಬತ್ತು ಗಂಟೆಗೆ ಅಲ್ಲಿಗೆ ಹೋದವರಿಗೆ ಒಂದೂವರೆ ಗಂಟೆಯವರೆಗೆ ಇಲ್ಲಿಂದ ಅಲ್ಲಿಗೆ ಅಲ್ಲಿಂದ ಇಲ್ಲಿಗೆ ಓಡಾಡುವುದೇ ಆಯಿತು. ಇದರಿಂದ ಕರೆದುಕೊಂಡು ಹೋದವರಿಗೆ ಹುಚ್ಚುಹಿಡಿಯುವಂತೆ ಆಯಿತು. ಹುಚ್ಚಾಸ್ಪತ್ರೆಗೆ ಯಾರನ್ನಾದರೂ ಕರೆದುಕೊಂಡು ಹೋದರೆ ಕರೆದುಕೊಂಡು ಹೋದವರಿಗೆ ಹುಚ್ಚು

ಹಿಡಿಯಿತು. ಅವರು ನನ್ನ ಆಫೀಸಿಗೆ ಬಂದು ಇದನ್ನು ಹೇಳಿದರು ಮತ್ತು ದಯವಿಟ್ಟು ನಾನು ಅವರ ಕೂಡ ಬರಬೇಕೆಂದು ಕೇಳಿಕೊಂಡರು. ನಾನು ಅವರಿಗೆ ಹೇಳಿದೆ. ಹೆಲ್ತ್ ಮಿನಿಸ್ಟರ್ ಅವರನ್ನು ಬೇಕಾದರೆ ಕರೆದುಕೊಂಡುಹೋಗಿ ಅವರಿಗೆ ಬೇಕಾದರೆ ಹುಚ್ಚುಹಿಡಿಯಲಿ ಎಂದು ಹೇಳಿದೆ. ಹುಚ್ಚಾಸ್ಪತ್ರೆಗೆ ಹುಚ್ಚು ಹೋಗುತ್ತದೆಂದು ಹೋದರೆ ಅಲ್ಲಿ ಅವರಿಗೆ ಹುಚ್ಚುಹಿಡಿಯುತ್ತದೆ. ಇಂಥ ಪರಿಸ್ಥಿತಿ ಅಲ್ಲಿ ಇದೆ. ಇದನ್ನು ಎಲ್ಲರ ಗಮನಕ್ಕೆ ತಂದಿದ್ದೇನೆ. ಇನ್ನೊಂದುಸಲ ವಿಕ್ಟೋರಿಯಾ ಆಸ್ಪತ್ರೆಗೆ ಒಬ್ಬ ರೋಗಿಯನ್ನು ಕರೆದುಕೊಂಡುಹೋದೆ. ಹದಿನೈದು ದಿವಸ ಆಸ್ಪತ್ರೆಗೆ ಹೋಗಿ ರೋಗಿಯನ್ನು ಹಾಗೇ ಹಿಂದಿರುಗಿ ಕರೆದುಕೊಂಡು ಬರಬೇಕಾಯಿತು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಬೆಳಿಗ್ಗೆ ಒಂಭತ್ತು ಗಂಟೆಗೆ ಹೋದರೆ ಸಾಯಂಕಾಲ ಆರುಗಂಟೆಗೆ ಸೇರಿಸಿಕೊಂಡರೂ ಕೂಡ ಡಾಕ್ಟರು ಬಂದು ನೋಡಲಿಲ್ಲ. ರೋಗಿ ಬದುಕಲಿಲ್ಲ. ರೋಗಿ ಹೆಣವಾಗಿದ್ದ. ಹೆಣ ತೆಗೆದುಕೊಂಡು ನಾವು ವಾಪಸ್ಸು ಬಂದೆವು. ಸರಕಾರದ ಆಡಳಿತದ ವೈಖರಿ ಎಷ್ಟು ಚೆನ್ನಾಗಿ ಇದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಹೇಳುತ್ತೇನೆ.

ಶ್ರೀ ಜಿ. ದುಗ್ಗಪ್ಪ (ಭರಮಸಾಗರ).—ಸ್ವಾಮಿ, ಇಂದು ಈ ವಿಷಯದಮೇಲೆ ನಾನು ಮಾತನಾಡಬೇಕೆಂದು ಅಂದುಕೊಂಡಿರಲಿಲ್ಲ. ಆಸ್ಪತ್ರೆಯ ವಿಚಾರ ಕೆಲವು ಸದಸ್ಯರು ಹೇಳಿದರು. ಅದನ್ನು ಕೇಳಿದ ಮೇಲೆ ನನಗೆ ಸಹ ಗೊತ್ತಿರತಕ್ಕಂಥ ಒಂದು ಬಹು ದುಃಖಕರವಾದ ವಿಚಾರ ಹೇಳಬೇಕೆಂದು ಅನ್ನಿಸಿತು, ಅದನ್ನು ಹೇಳುತ್ತೇನೆ. ಆಸ್ಪತ್ರೆಯಲ್ಲಿರತಕ್ಕಂಥ ಡಾಕ್ಟರುಗಳು ಚಿಕ್ಕವರೇ ಇರಲಿ ದೊಡ್ಡವರೇ ಇರಲಿ ಅನುಭವಸ್ಥರೇ ಇರಲಿ ಅವರು ತಾವು ಸೇವೆಮಾಡುವುದಕ್ಕಾಗಿಯೇ ಬಂದಿದ್ದೇವೆ ಎಂಬ ಮನೋಭಾವ ಇರಬೇಕು. ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಬೆಂಗಳೂರು ನಗರದಲ್ಲಿಮಾತ್ರ ಬ್ಲಡ್‌ಬ್ಯಾಂಕ್ ವ್ಯವಸ್ಥೆ ಇದೆ. ಈ ಬ್ಲಡ್ ಬ್ಯಾಂಕ್ ವ್ಯವಸ್ಥೆ ಎಲ್ಲಾ ಡಿಸ್ಟ್ರಿಕ್ಟ್ ಹಾಸ್ಪಿಟಲ್‌ಗಳಲ್ಲಿಯೂ ಜನರಲ್ ಹಾಸ್ಪಿಟಲ್‌ಗಳಲ್ಲಿಯೂ ಇಡಬೇಕೆಂದು ಸೂಚಿಸುತ್ತೇನೆ. ಇದಕ್ಕೆ ಕೆಲವು ಟೆಕ್ನಿಕಲ್ ತೊಂದರೆಯಿದೆ. ಇದನ್ನು ಸರಕಾರ ಯೋಚನೆಮಾಡಿ ಬ್ಲಡ್ ಬ್ಯಾಂಕ್ ವ್ಯವಸ್ಥೆ ಮಾಡುವುದಕ್ಕೆ ದುಡ್ಡು ಒದಗಿಸಬೇಕೆಂದು ಹೇಳುತ್ತೇನೆ. ಇದಕ್ಕೆ ಎಷ್ಟುಹಣ ಖರ್ಚುಮಾಡಿದರೂ ಚಿಂತೆಇಲ್ಲ. ಯಾಕೆಂದರೆ ಇದು ಅತ್ಯಾವಶ್ಯಕವಾಗಿದೆ. ಬ್ಲಡ್ ಕೊಡುವುದು ಅಂದರೆ ಇದು ಸಂಜೀವಿನಿಯಾಗಿದೆ. ರೋಗಿಯ ಪ್ರಾಣ ಉಳಿಸತಕ್ಕಂಥ ಅತ್ಯಮೂಲ್ಯವಾದ ಈ ಸಂಗ್ರಹಣೆ ಮಾಡತಕ್ಕಂಥಾದ್ದು ಅಗತ್ಯ. ಇದು ಅತ್ಯಂತ ಉತ್ತಮೋತ್ತಮ ಸತ್ಕಾರ್ಯವಾಗಿದೆ. ಇದನ್ನು ಸಂಗ್ರಹಣೆ ಮಾಡಬೇಕಾದದು ಸರಕಾರದ ಕರ್ತವ್ಯ. ಇದಕ್ಕಾಗಿ ಒಂದು ಉದಾಹರಣೆ ಕೊಡುತ್ತೇನೆ. ಕಳೆದ ತಿಂಗಳು ಅಂದರೆ, ಜೂನ್ ಒಂದನೇ ತಾರೀಕಿನ ದಿನ ಒಬ್ಬ ರೋಗಿಯನ್ನು ಕರೆದುಕೊಂಡುಹೋಗಿ ಜಿಲ್ಲಾ ಹಾಸ್ಪಿಟಲನಲ್ಲಿ ತೋರಿಸುವ ದುರ್ದೈವ ನನಗೆ ಬಂದಿತ್ತು. ಡ್ಯೂಟಿಮೇಲೆ ಬಂದಿರತಕ್ಕಂಥ ಡಾಕ್ಟರರು ಒಬ್ಬ ಶಿವ ಶರಣೆಯಾಗಿದ್ದಳು. ಅವಳು ಅಕ್ಕಮಹಾದೇವಿಯಾಗಿರಲಿಲ್ಲ. ನಾನು ಮೊದಲು ಡಿ.ಎಂ.ಓ. ಅವರನ್ನು ಕಂಡು ಅವರಿಗೆ ಹೇಳಿದ್ದೆ. ಆದುದರಿಂದ ತಕ್ಷಣ ಡಿ.ಎಂ.ಓ. ಅವರು ಫೋನ್‌ಮಾಡಿ ಅತ್ಯುಗ್ರ ಪರಿಸ್ಥಿತಿಯಲ್ಲಿರತಕ್ಕ ಪೇಶೆಂಟನ್ನು ಕರೆದುಕೊಂಡು ಹೋಗಿ ಬ್ಲಡ್‌ಕೊಟ್ಟು ಕೂಡಲೇ ಅಟೆಂಡ್ ಮಾಡಬೇಕೆಂದು ಹೇಳಿದರು. ನಾನು ಎಂ.ಎಲ್.ಎ. ಇದ್ದೇನೆ ಎಂಬುದಕ್ಕೆ ಯಾವ ಬಿಲ್ಲೆಯನ್ನು ಹಾಕಿಕೊಂಡಿರಲಿಲ್ಲ. ಹಾಗು ಅದನ್ನು ನಾನು ಅವರಿಗೆ ಹೇಳಲಿಲ್ಲ. ಆಗ ನೆಲ ಒದೆಯುತ್ತಾ ಆ ಡಾಕ್ಟರ್ ಅಮ್ಮನವರು ಬಂದರು. ಹುಂ, ಫೋನ್ ಮಾಡಿದರೆ ಬಂದು ಬಿಡುತ್ತದೇನು ? ಹುಂ, D.M.O. ಅವರನ್ನು ನೋಡಿದರೆ ಆಯಿತೇ ? ಬೇಕಾದರೆ ಪೇಶೆಂಟನನ್ನು ಡಾಕ್ಟರರ ಮನೆಗೆ ಕರೆದುಕೊಂಡು ಹೋಗಿ. ನಮ್ಮಹತ್ತಿರ ಬ್ಲಡ್‌ಇಲ್ಲ. ಬ್ಲಡ್ ಕೊಡುವುದಕ್ಕೆ ಸರಿಹೋಗುವ ಬ್ಲಡ್ ಇರುವವರನ್ನು ಕರೆದುಕೊಂಡುಬನ್ನಿ ಎಂದು ಹೇಳಿದರು. ಆ ಶಿವಶರಣೆಯು ಏನೇನೋ ಮಾತನಾಡಿದರು. ಬೆಳಿಗ್ಗೆ ಆರು ಗಂಟೆವರೆಗೆ ಏನೂ ಆಗುವುದಿಲ್ಲ ಎಂದು ಹೇಳಿದರು. ನಾನು ಬೆಳಿಗ್ಗೆ ಒಂಭತ್ತು ಗಂಟೆಗೆ ಆರುಜನ ಬ್ಲಡ್ ಡೋನರ್ಸ್‌ಗಳನ್ನು ಕರೆದುಕೊಂಡು ಹೋದೆ. ಅಲ್ಲಿಯ ಆರ್.ಎಂ.ಓ. ಒಬ್ಬ ಚಾಂಡಾಲವ್ಯಕ್ತಿ—ಸ್ವಾಮಿ, ದಯವಿಟ್ಟು ಕ್ಷಮಿಸಬೇಕು, ಈ ಪದ ಉಪಯೋಗಿಸಿದಕ್ಕೆ ಇದನ್ನು ಬಿಟ್ಟು ಬೇರೆ ಪದ ನನಗೆ ಗೊತ್ತಿಲ್ಲ.

SRI K. PUTTASWAMY.—May I make a humble request to the Hon'ble Member to be rather moderate in using his terms.

ಶ್ರೀ ದುಗ್ಗಪ್ಪ.—ಕ್ಷಮೆ ಕೇಳುತ್ತೇನೆ. ಈ ಸಂದರ್ಭದಲ್ಲಿ ಕಹಿ ಅನುಭವ ಈ ಮಾತನ್ನು ಆಡಿಸುತ್ತದೆ. ಈ ಮಹಾ ಸಭೆಯಲ್ಲಿ ಈ ಪದ ಉಪಯೋಗ ಮಾಡುವುದು ಉಚಿತವೋ ಅನುಚಿತವೋ ಗೊತ್ತಿಲ್ಲ. ಒಂಭತ್ತೂವರೆ ಗಂಟೆಯಾಯಿತು, ಹತ್ತೂವರೆ ಗಂಟೆಯಾಯಿತು, ಹನ್ನೆರಡುಗಂಟೆ ಆಯಿತು ಆದರೆ ಬ್ಲಡ್ ಡ್ರಾ ಮಾಡುವುದಕ್ಕೆ ಅವರಿಗೆ ಆಗಲಿಲ್ಲ. ಓ. ಟಿ. ಯಲ್ಲಿ ಕುಳಿತುಕೊಂಡಿರತಕ್ಕಂಥ ಡಾಕ್ಟರರು ಆವರ ವಿನೋದ ಕೇಳಿ ನಡೆಯುತ್ತಿತ್ತು. ಈ ವಿನೋದನೋಡಿ ನನಗೆ ತಡೆಯು

(ಶ್ರೀ ಜಿ. ದುಗ್ಗಪ್ಪ)

ವುದಕ್ಕಾಗಲಿಲ್ಲ. ಇಲ್ಲಿ ಇನ್ನಾರೂ ಇಲ್ಲವೇ ? ಬ್ಲಡ್ ಡೋನರ್ಸ್ ಇದ್ದಾರೆ, ಪೇಶಂಟ್ ಸಾಯುತ್ತಿದೆ ಬ್ಲಡ್ ತೆಗೆದು ಕೊಡುವುದಕ್ಕೆ ನಿಮಗೆ ಏನು ಕಷ್ಟ ಎಂದು ಕೇಳಿದೆ. ಇದಕ್ಕೆ ಒಂದೂವರೆ ಗಂಟೆ ಬೇಕಾಯಿತು. I then said: ' The patient is dying. You are not here to play with youngsters. I know big institutions. Still he did not draw blood. The blood donors were simply sitting. I was sitting outside. And the patient collapsed ! This grave incident I am bringing to your notice, to impress upon the Government how Doctors are failing in their duties. Is it for this they are paid ? They are respnosible for the lives of human beings in their care. Then, is it the way of dealing with human beings ? They must realise their responsibilities and do other duty.

Sri S. NIJALINGAPPA (Chief Minister).—Did the Hon'ble Member report ?

ಶ್ರೀ ಜಿ. ದುಗ್ಗಪ್ಪ.—ನಾನು ಯಾರಿಗೂ ರಿಪೋರ್ಟ್ ಮಾಡಲಿಲ್ಲ. ಯಾರ ಬಗ್ಗೆ ನಾನು ರಿಪೋರ್ಟ ಮಾಡಬೇಕು, ಯಾರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆಂದು ಏನು ಗೊತ್ತಿದೆ? ನಾವೇನಾದರೂ ರಿಪೋರ್ಟ್ ಮಾಡಿದರೆ ನಮ್ಮನ್ನು ಉಳಿಸಲಿಕ್ಕೆ ಮಂತ್ರಿಗಳಿದ್ದಾರೆ ಎನ್ನುವುದು ಡಾಕ್ಟರುಗಳಿಗೆ ಗೊತ್ತಿದೆ. ಅವರಿಗೆ ಎಷ್ಟು ಸಾರಿ ವರ್ಗವಾಗಿದೆ, ಕ್ಯಾನ್ಸಲ್ ಆಗಿದೆ ಎನ್ನುವುದನ್ನು ವಿಚಾರಿಸಿ. ನಮ್ಮ ಮಹಾ ಮಂತ್ರಿಗಳು ಇವತ್ತು ಕೇಳುತ್ತಾರೆ ರಿಪೋರ್ಟ್ ಮಾಡಿದಿರಾ ಎಂದು. ನಾನು ಯಾರಿಗೂ ರಿಪೋರ್ಟ್ ಮಾಡಲಿಲ್ಲ. ನಮ್ಮ ದೂರುಗಳ ಗತಿ ಏನಾಗುತ್ತದೆ ಎಂದು ನಮಗೆ ಗೊತ್ತಿದೆ.

ಪ್ರತಿಯೊಂದು ಜಿಲ್ಲಾ ಮತ್ತು ಜನರಲ್ ಆಸ್ಪತ್ರೆಗಳಲ್ಲಿಯೂ ಬ್ಲಡ್ ಬ್ಯಾಂಕ್ ಅವಶ್ಯಕತೆ ಇದೆ; ಅದಕ್ಕೋಸ್ಕರ ಈ ಉದಾಹರಣೆ ಕೊಟ್ಟಿದ್ದೇನೆ.

ಡಾಕ್ಟರುಗಳಿಗೆ ಅವರ ಕರ್ತವ್ಯ ಜ್ಞಾನ ಇರಬೇಕು. ಅವರ ಮೇಲೆ ಕ್ರಮ ತೆಗೆದುಕೊಂಡರೆ ಸಾಲದು. ಮಂತ್ರಿಗಳಾಗಲೀ, ಮಹಾ ಮಂತ್ರಿಗಳಾಗಲೀ, ಡೈರೆಕ್ಟರುಗಳಾಗಲೀ ಸೆಕ್ರೆಟರಿಗಳಾಗಲೀ ಯಾರೂ ಅವರಿಗೆ ನೆರವನ್ನು ಕೊಡಬೇಡಿ. ನ್ಯಾಯವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿ.

ಒಬ್ಬ ಡಾಕ್ಟರನ್ನು, ಅವರು ಪ್ರೊಫೆಸರಾಗಿ ಹುಬ್ಬಳ್ಳಿಯಲ್ಲಿದ್ದರು. ಅವರು ಷೆಡ್ಯೂಲ್ ಕ್ಯಾಸ್ಟಿನವರು. ಅವರನ್ನು ರಿವರ್ಟ ಮಾಡಿದರು. ರಿವರ್ಟ ಮಾಡಿದ ವೈಪರೀತ್ಯ ಹೇಗೆ ಎಂದರೆ, ಮಾರ್ಚಿ ಏಳನೇ ತಾರೀಖು ಮುಖ್ಯ ಮಂತ್ರಿಯವರು ಡೆಲ್ಲಿಗೆ ಹೋಗತಕ್ಕ ಸಂದರ್ಭದಲ್ಲಿ ಆ ಫೈಲನ್ನು ತೆಗೆದುಕೊಂಡು ಹೋಗಿ ಏರೋಡ್ರೋಮಿನಲ್ಲಿ ಸಂಬಂಧಪಟ್ಟ ಸೆಕ್ರೆಟರಿಗಳು ಅಪ್ರೂವ್ ಮಾಡಿಸಿಕೊಂಡುಬಂದರು. ಇದು ಅವರಿಗೆ ಗೊತ್ತಿಲ್ಲವೇ ? ಯಾರು ಮಾಡಿಸಿಕೊಂಡು ಬಂದರು ? ಇವರನ್ನು ರಿವರ್ಟ್ ಮಾಡಿ ಬೇರೆಯವರನ್ನು ಅವರ ಸ್ಥಾನಕ್ಕೆ ಪೋಸ್ಟ್ ಮಾಡಿದರು. ಈಗ ತಮಗೆ ಗೊತ್ತಾಯಿತೇ ? ಇವರುಗಳಿಗೆ ಸಂಬಂಧ ಪಟ್ಟ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಇನ್ನೂ ಫೈನಲೈಸ್ ಆಗಿಲ್ಲ. ಇದನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಕಳಿಸಿ ಮೂರು ದಿವಸವಾಯಿತು. ಅದು ವಾಪಸು ಬರಬೇಕು, ಆಮೇಲೆ ಮಾಡುತ್ತೇವೆಂದು ಹೇಳುತ್ತಾರೆ. ಹೈಕೋರ್ಟಿನಿಂದ ತಮಗೆ ಏನು ಆದೇಶ ಬಂದಿದೆ? ಹೊಸದಾಗಿ ನೇಮಕಗಳನ್ನು ಮಾಡಬಾರದು ಎಂದು ಬಂದಿದೆ. ಪ್ರಮೋಷನ್ ಕೊಡಬಾರದು ಎಂದೇನಾದರೂ ಬಂದಿದೆಯೇ ? ಒಬ್ಬ ಪ್ರೊಫೆಸರನ್ನು ಡಿಗ್ರೇಡ್ ಮಾಡಿ, ಅವರ ಕೈಕೆಳಗೆ ಇದ್ದವರನ್ನು ಅಲ್ಲಿ ಪ್ರೊಫೆಸರ್ ಮಾಡಿದ್ದಾರೆ. ಹೇಗೆ ಮಾಡಿದ್ದಾರೆ ? ಅದು ತಮಗೆ ಗೊತ್ತಿದೆಯೇ ?

ಆದುದರಿಂದ ಯಾವುದೇ ಒಂದು ವ್ಯವಹಾರವಾಗಲೀ ಸರ್ಕಾರ ಒಂದು ನೀತಿಯನ್ನು ಅನುಸರಿಸಬೇಕು. ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಳ್ಳುವಾಗ ಯಾರೇ ಆಗಲೀ ನಿಷ್ಪಕ್ಷಪಾತದಿಂದ ಮಾಡಿ. ಪಕ್ಷಪಾತವನ್ನು ಖಂಡಿತ ಮಾಡಬೇಡಿ. ಯಾವ ಸೆಕ್ರೆಟರಿಯೇ ಆಗಲೀ, ಅವರು ಏನಾದರೂ ಸಿಫಾರಸು ಮಾಡಿದರೆ ಅದು ಸರಿಯೇ ಎಂಬುದನ್ನು ನೋಡಿ, ಕೇಳಿ, ಒಂದು ತೀರ್ಮಾನ ತೆಗೆದುಕೊಳ್ಳಿರಿ. Let him be a fool or an ass. The Minister is not the Government. He may say it is not his funeral. Rightly it is his funeral.

ಯಾರು ಏನಾದರೂ ಮಾಡಲಿ, ಸಿಫಾರಸು ಮಾಡಲಿ, ತಾವು ಮಾತ್ರ ದಯವಿಟ್ಟು ಸರಿಯಾದ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿ, ಇದಕ್ಕೆ ಉತ್ತರ ಕೊಡಬೇಕೆಂದು ಹೇಳಿ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ ಸ್ವಾಮಿ.

(Sri S. Gopala Gowda interrupted and wanted some clarification.)

MR. CHAIRMAN.—The hon. member Sri S. Gopala Gowda can ask for clarifications after the Minister finishes his reply.

(Sri S. Gopala Gowda still persisted to ask some questions.)

MR. CHAIRMAN.—There are half a dozen members standing for clarifications. If I allow them all it will take a long time. The clarifications can be asked in the end.

SRI K. H. PATIL.—A point of order, Sir. Gopala Gowda is seeking a clarification before the Hon'ble Minister begins his speech. It is the right of every member to ask for clarification at any time he wants. Therefore, I feel that stopping him will be illegal.

MR. CHAIRMAN.—There is no point of order here.

SRI K. PUTTASWAMY.—The Hon'ble member may put his questions after I finish my speech.

MR. CHAIRMAN.—I will give ample time for asking clarifications after he finishes his speech.

†ಶ್ರೀ ಕೆ. ಪುಟ್ಟಸ್ವಾಮಿ.—ಅಧ್ಯಕ್ಷರೇ, ವೈದ್ಯಕೀಯ ಮತ್ತು ಜನಾರೋಗ್ಯ ಖಾತೆಗೆ 1967-68ನೇ ಸಾಲಿನ ಖರ್ಚಿಗಾಗಿ ಬೇಕಾದಂಥ ಹಣದ ಬೇಡಿಕೆಯನ್ನು ಸಭೆಯು ಸಾರ್ವತ್ರಿಕವಾಗಿ ಸ್ವಾಗತಿಸಿರುವುದಕ್ಕಾಗಿ ನಾನು ಬಹಳ ಕೃತಜ್ಞನಾಗಿದ್ದೇನೆ. ಮತ್ತು......

ಶ್ರೀ ಜಿ. ದುಗ್ಗಪ್ಪ.—ನಾನು ಸ್ವಾಗತಿಸಲಿಲ್ಲ, ವಿರೋಧ ಮಾಡಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಕಥೆ ಹೇಳುವುದರಲ್ಲಿ ಆ ಮಾತು ಹೇಳುವುದನ್ನು ಮರೆತಿರಿ ಎಂದು ಕಾಣುತ್ತದೆ. ಮಾನ್ಯ ದುಗ್ಗಪ್ಪನವರು ವಿರೋಧಮಾಡಿದರು ಎಂದು ತೆಗೆದುಕೊಂಡರೂ ಕೂಡ ಅವರನ್ನು ಬಿಟ್ಟು ಬಾಕಿಯವರು ಸ್ವಾಗತ ಮಾಡಿರುವುದಕ್ಕೆ ಅವರನ್ನು ಅಭಿನಂದಿಸುತ್ತೇನೆ.

ಸ್ವಾಮಿ, ಈ ಬೇಡಿಕೆಯ ಮೇಲೆ ಸಭಾಸದರು ಅನೇಕ ಉಪಯುಕ್ತ ವಿಚಾರಗಳನ್ನು ತಿಳಿಸಿದ್ದಾರೆ. ಅದರಲ್ಲಿ ಬಹು ವಿಷಯಗಳು ನನ್ನ ಅನುಭವದಲ್ಲಿವೆ ಎಂದು ಹೇಳುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ನಮ್ಮ ಇಲಾಖೆಯ ಆಡಳಿತ ಸ್ವಚ್ಛವಾಗಿ, ಶುದ್ಧವಾಗಿ, ಮತ್ತು ಪರಿಪೂರ್ಣತೆಯಿಂದ ನಡೆಯುತ್ತಿದೆ ಎಂದು ನಾನು ಹೇಳುವುದಿಲ್ಲ. ಸಮಾಜದಲ್ಲಿ ಯಾವ ದೋಷಗಳನ್ನು ನಾವು ಕಾಣುತ್ತಿದ್ದೇವೆಯೋ ಸಾಮಾನ್ಯವಾಗಿ ನಮ್ಮ ಇಲಾಖೆಯಲ್ಲಿಯೂ ಕೂಡ ಆ ದೋಷಗಳು ಇದ್ದೇ ಇರಬಹುದು.

ಶ್ರೀಮತಿ ನಾಗರತ್ನಮ್ಮನವರು ಜಾಸ್ತಿ ಇದೆ ಎಂದು ಹೇಳುತ್ತಾರೆ. ಅವರು ಹೇಳತಕ್ಕ ವಿಚಾರವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಯಾರಾದರೂ ಕಾಯಿಲೆಯಿಂದ ನರಳುತ್ತಿದ್ದರೆ ಅವರಿಗೆ ಸಮಯಕ್ಕೆ ಸರಿಯಾಗಿ ವೈದ್ಯಕೀಯ ಸೌಲಭ್ಯದೊರೆಯದೆ ಇದ್ದುದನ್ನು ನೋಡಿ ನೊಂದ ಹೃದಯದಿಂದ ಆ ವಿಚಾರವನ್ನು ಇಲ್ಲಿ ಹೇಳುತ್ತಾರೆ. ಆದಕಾರಣದಿಂದ ಅನೇಕ ಸಭಾಸದರು ವೈದ್ಯಕೀಯ ಸಂಸ್ಥೆಗಳಿಗೆ ಭೇಟಿಕೊಟ್ಟಂಥ ವೇಳೆಯಲ್ಲಿ ತಮ್ಮ ಅನುಭವಕ್ಕೆ ಬಂದಂಥ ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇರಬಹುದು. ಆದರೆ ಸತ್ಯಾಂಶವಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಅದನ್ನು ಸಾಧ್ಯವಾದಮಟ್ಟಿಗೂ ಕೂಡ ನಿವಾರಣೆ ಮಾಡಿ ಕಾಯಿಲೆಯಿಂದ ನರಳುತ್ತಿರುವ ಜನರಿಗೆ ಯೋಗ್ಯವಾದ ವೈದ್ಯಕೀಯ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವಂಥ ಭರವಸೆಯನ್ನು ನಾನು ಕೊಡುತ್ತೇನೆ.

(ಶ್ರೀ ಕೆ. ಪುಟ್ಟಸ್ವಾಮಿ)

ಈ ಬೇಡಿಕೆಯ ಮೇಲೆ ಮಾತನಾಡುತ್ತ ಕೊಟ್ಟಿರತಕ್ಕ ಎಲ್ಲ ಸಲಹೆಗಳಿಗೂ ಕೂಡ ಈ ಸಮಯದಲ್ಲಿ ನಾನು ಉತ್ತರ ಕೊಡುವುದಕ್ಕೆ ಆಗದೆ ಹೋಗಬಹುದು. ಹಾಗಾದಂಥ ಕಾಲದಲ್ಲಿ ಮಾನ್ಯ ಸಭಾಸದಸ್ಯರು ಆ ವಿಚಾರಗಳಿಗೆ ನಾನು ಗಮನ ಕೊಟ್ಟಿಲ್ಲ, ಕೊಡುವುದಿಲ್ಲ ಎನ್ನುವ ಭಾವನೆ ಮಾಡಬಾರದು. ಪ್ರತಿಯೊಂದು ಅಂಶವನ್ನೂ ಕೂಡ ಗಮನದಲ್ಲಿಟ್ಟುಕೊಂಡು ಅಂಥ ದೋಷ ಪುನಃ ಬಾರದಂತೆ ಆಡಳಿತ ನಡೆಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವಂತ ಭರವಸೆಯನ್ನು ಈ ಸಭೆಗೆ ನಾನು ಕೊಡುತ್ತೇನೆ.

ಶ್ರೀಮಾನ್ ಮುಗ್ಗಪ್ಪನವರು ಹೇಳಿದಂಥ ವಿಚಾರವನ್ನು ಮೊದಲು ಪ್ರಸ್ತಾಪ ಮಾಡಬೇಕೆಂದು ನನಗನ್ನಿಸುತ್ತದೆ. ಕಾರಣವಾದರೂ ಅವರು ನನಗೆ ಅತ್ಯಂತ ಆಪ್ತರು, ಹತ್ತಿರದಲ್ಲಿದ್ದಾರೆ. ಮಾನ್ಯ ಸಭಾಸದಸ್ಯರು ಹೇಳಿದಂಥ ವಿಚಾರ ನಿಜವಲ್ಲ ಎಂದು ಹೇಳುವುದಕ್ಕೆ ನಾನು ಸಿದ್ಧನಾಗಿಲ್ಲ. ನನಗೆ ಒಂದು ವ್ಯಸನವಾಗುತ್ತದೆ ಎಂದರೆ, ಇಂತಹ ಒಂದು ಪ್ರಸಂಗ ನಡೆಯಬಾರದಂಥ ಪ್ರಸಂಗ. ನರಳುತ್ತಾ ಇರತಕ್ಕ ರೋಗಿಗಳಿಗೆ ಪ್ರಾಣಕ್ಕೆ ವಿಪತ್ತು ಬಂದಂಥ ಪ್ರಸಂಗ ಮಾನ್ಯ ಸದಸ್ಯರಿಗೆ ಇದು ಹೇಳಲಿಕ್ಕೆ ಆಗಲಿಲ್ಲವಲ್ಲಾ ಎಂದು. 20ನೇ ತಾರೀಖು ಸಭೆ ನಡೆಯುತ್ತಾ ಇತ್ತು. ಇದು ಆದುದ್ದು ಜೂನ್ 1ನೇ ತಾರೀಖು. ತಿಂಗಳಮೇಲೆ 10 ದಿವಸ ಆಯಿತು. ಮುಂಚೆ ಹೇಳಿದ್ದರೆ ಚೆನ್ನಾಗಿತ್ತು.

5–30 P.M.

ಶ್ರೀ ಹೆಚ್. ಸಿದ್ಧವೀರಪ್ಪ.—ಮುಂಚೆ ಹೇಳಿದ್ದರೆ ಸತ್ತವರು ಬದುಕುತ್ತಾ ಇರಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಮುಂದೆ ಸಾಯುವವರನ್ನು ಬದುಕಿಸಬಹುದಾಗಿತ್ತು. ಇಂತಹ ಕರ್ತವ್ಯ ಇನ್ನು ಮುಂದೆ ಜರುಗದಂತೆ ಮಾಡಬಹುದಾಗಿತ್ತು. ಮತ್ತೊಂದು ವಿಚಾರ ಪ್ರಸ್ತಾಪ ಮಾಡಿದರು. ಯಾರೋ ಒಬ್ಬರಿಗೆ ಪ್ರಮೋಷನ್ ಕೊಡುವುದಕ್ಕೆ ಆತುರಾತುರವಾಗಿ ಮಾರ್ಚಿ 7ನೇ ತಾರೀಖು ಕಾರ್ಯದರ್ಶಿಯವರು ವಿಮಾನ ನಿಲ್ದಾಣಕ್ಕೆ ಹೋಗಿ ಸಹಿಯನ್ನು ಪಡೆದರು ಎಂದು. ಮೊದಲಿನಿಂದಲೂ ಪ್ರಮೋಷನ್ ಯಾರಿಗೂ ಕೊಟ್ಟಿಲ್ಲ. ಅವರು ಯಾವ ಒಂದು ವಿಚಾರ ಹೇಳಿದರು ಅವರೊಳಗೂ ಯಾರಿಗೂ ಪ್ರಮೋಷನ್ ಕೊಟ್ಟಿಲ್ಲ ಅವರು ಯಾವ ಒಂದು ವಿಭಾಗ ಹೇಳುತ್ತಿದ್ದಾರೆ ಆ ವಿಭಾಗದಲ್ಲಿ ನಾವು ಈಗ ಪ್ರಮೋಷನ್ ಕೊಡುವುದಕ್ಕೆ ಆಗಲಿಲ್ಲ. ಕಾರಣ ಏನೆಂದರೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಆಗಿಲ್ಲ. ಇದು ಒಂದು ವಿಷಾದಕರವಾದ ಸಂಗತಿ. ಕೆಲವು ಕಾರಣಗಳಿಂದ ನಮ್ಮ ಹತೋಟಿ ಮೀರಿದ ಕಾರಣಗಳಿಂದ ಅದು ನಿಧಾನವಾಗುತ್ತಾ ಬಂದಿದೆ. ಆದರೆ ಒಂದು ವಿಚಾರ ಹೇಳುವುದಕ್ಕೆ ಸಂತೋಷವಾಗುತ್ತದೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲವೇ ಇದ್ದರೂ ಕೂಡ, ಯಾವ ನಿಯಮಾವಳಿಗಳು ಇಲ್ಲದೇ ಇದ್ದರೂ ಕೂಡ ತಾತ್ಕಾಲಿಕವಾದ ನಿಯಮಗಳನ್ನು ಮೆಡಿಕಲ್, ಎಜುಕೇಷನ್ ಇಲಾಖೆಗಳಿಗೆ ಮಾಡಿರುವುದು ಸರಿಯಾದಂಥ ರೀತಿಯಲ್ಲಿ ನಡೆದಿದೆ ಎಂದು ಹೇಳಲು ಅಪೇಕ್ಷೆಪಡುತ್ತೇನೆ.

Sri K. H. RANGANATH (Mudigere).—I know the particular case. ಒಬ್ಬ ಪ್ರೊಫೆಸರ್ ಏನು ಇದ್ದರು ಅವರು ಹುಬ್ಬಳ್ಳಿಯಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿದ್ದಾರೆ. ಅವರು ವಿದೇಶದಿಂದ ವಾಪಸ್ಸು ಬಂದಾಗ ಅವರನ್ನು ಅವಸರ ಅವಸರವಾಗಿ ನೇಮಕ ಮಾಡಬೇಕು ಎಂದು ಪ್ರಯತ್ನಪಟ್ಟರು. ಈ ಮಧ್ಯೆ ಅವರ ಅಪಾಯಿಂಟ್‌ಮೆಂಟ್ ಹೈಕೋರ್ಟಿನಲ್ಲಿ ವಜಾ ಆಯಿತು. ಹಿಂದೆ ಕೊಟ್ಟ ಪ್ರಮೋಷನ್ ಕೂಡ ಸರಿಯಾಗಿಲ್ಲ ಎಂದು ಕ್ವಾಷ್ ಆಯಿತು. ಆ ವೇಕೆನ್ಸಿ ಇರುವಾಗ ಅಸೋಸಿಯೇಟ್ ಪ್ರೊಫೆಸರ್ ಕಂಟಿನ್ಯೂ ಮಾಡದೇ ಅವರನ್ನು ಡಿಮೋಟ್ ಮಾಡಿದರು. ಯಾವ ವ್ಯಕ್ತಿಗೆ ಕೆಲಸ ಸರಿಯಾಗಿಲ್ಲ ಎಂದು ಹೈಕೋರ್ಟಿನಲ್ಲಿ ಹೇಳಿದರೋ ಮತ್ತೆ ಅವರಿಗೆ ಪ್ರಮೋಷನ್ ಕೊಟ್ಟರು. ಅದು ಆದನಂತರ ಹೈಕೋರ್ಟ್‌ನಲ್ಲಿ ಕ್ವಾಷ್ ಆಗಿದೆ. ಕಂಟೆಂಪ್ಟ್ ಪ್ರೊಸೀಡಿಂಗ್ಸ್ ಕೂಡ ನಡೆಯಿತು. ಡಿಮೋಟ್ ಆದ ವ್ಯಕ್ತಿಗೆ ಮತ್ತೆ ವೇಕೆನ್ಸಿ ಸಿಕ್ಕಿದಾಗ ಕೊಡಬಹುದಾಗಿತ್ತು. ಒಬ್ಬ ಹರಿಜನ ಅವನಿಗೆ ಉನ್ನತ ಕ್ವಾಲಿಫಿಕೇಷನ್ ಇದೆ.

Sri H. SIDDAVEERAPPA.—We also know of some cases where the High Court has held the Government have committed contempt of court in not following the direction given. That is also a case of Scheduled Caste man and I must congratulate the Minister. He has

tried to retrieve and do some justice in that case. I also know that case. I know in the previous Ministry there are as many as 69 such cases. I know of cases where the Chief Minister himself violated some of those things in his own handwriting and has removed some names and put in a name of his own choice.

Sri S. NIJALINGAPPA.—I think the Hon'ble Member may give the name so that I may make enquiries.

ಶ್ರೀ ಎಚ್. ಸಿದ್ಧವೀರಪ್ಪ.—ತಾವು ಮಾಡಿದ್ದಕ್ಕೆ ಎನ್‌ಕ್ವಾಯಿರಿ ಏನು ಆಗಬೇಕು ?

Sri S. NIJALINGAPPA.—The Member is in the habit of making all sorts of allegations against the Chief Minister. I want to know exactly what he is referring to. I have passed innumerable orders. If he tells me the name, I will enquire and let him know.

Sri H. SIDDAVEERAPPA.—I may tell the House that the Chief Minister is making a tall claim that I am making reckless allegations. I emphatically repudiate it. I am also a responsible man. You get that file now. I will disclose it. To say that we are making unncessary allegation is far from truth.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ನನ್ನ ಉತ್ತರವನ್ನು ಕೇಳಿದ್ದರೆ ಆ ರೀತಿ ಅಪಾದನೆ ಮಾಡುತ್ತಿರಲಿಲ್ಲ.

ಶ್ರೀ ಜಿ. ದುಗ್ಗಪ್ಪ.—ಇದು ಇದ್ದ ವಿಚಾರ. ಸತ್ಯ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹೇಳಿದಂಥಾ ಅಪಾದನೆ ಸರಿಯಾದ್ದಲ್ಲ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಅದು ಹೇಗೆ ಸರಿಯಾದುದಲ್ಲ ಎಂದು ಹೇಳುತ್ತೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ತಾಳ್ಮೆಯಿಂದ ಇದ್ದರೆ ಆದೀತು.

Mr. CHAIRMAN.—May I request the Hon'ble Members to let the Hon'ble Minister give his reply. After he completes his reply, there will be ample opportunities to Hon'ble Members to ask such clarifications within the time available and get necessary clarifications. If we proceed in this way, there won't be any end. Many Hon'ble Members have raised several points and they are expecting replies from the Hon'ble Minister, and the House would be deprived of that reply if we proceed in this way. Let us hear his reply. If the Members want any clarifications, let that be given after he finishes his reply. Let us sit till such time as the Hon'ble House decides to sit. I have no objection.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹೇಳಿದರು : ಹುಬ್ಬಳ್ಳಿ ಮೆಡಿಕಲ್ ಕಾಲೇಜಿನಲ್ಲಿ ಇದ್ದಂಥ ಒಬ್ಬರನ್ನು ರಿವರ್‌ಷನ್ ಮಾಡಿ ಇನ್ನೊಬ್ಬರನ್ನು ಆ ಸ್ಥಳಕ್ಕೆ ನೇಮಿಸಿದರು, ಪ್ರಮೋಟ್ ಮಾಡಿದರು ಎಂದು. ನಾನು ಹೇಳುವುದಕ್ಕೆ ಅಪೇಕ್ಷೆಪಡುತ್ತಾ ಇದ್ದುದು ಅದು ನಿಜವಲ್ಲ ಎಂದು. ಹೈಕೋರ್ಟ್‌ನಲ್ಲಿ ನೇಮಕ ರದ್ದು ಮಾಡಿಲ್ಲ. ಆ ಕಾರಣದಿಂದ ಮತ್ತೆ ಈ ವಿಚಾರವನ್ನು ಚೆನ್ನಾಗಿ ಪರಿಶೀಲನೆ ಮಾಡಿದ್ದೇವೆ. ಮೊದಲು ಆ ಹುದ್ದೆಯಲ್ಲಿ ಯಾವ ಡಾಕ್ಟರ್ ಅಸೋಸಿಯೇಟ್ ಪ್ರೊಫೆಸರ್ ಆಗಿದ್ದರೋ ಅವರು ಇವೊತ್ತೂ ಕೂಡ ಇದ್ದಾರೆ. ಈಚೆಗೆ ಇನ್ನೂ ಒಂದು ಸ್ಥಾನ ಭರ್ತಿ ಮಾಡಬೇಕಾಗಿ ಬಂತು. ಅದರಲ್ಲಿ ಯಾವ ಒಂದು ಡಾಕ್ಟರ್ ವಿಚಾರ ಪ್ರಸ್ತಾಪ ಮಾಡಿದರೋ ಅವರನ್ನು ನಾನೇ ನೇಮಕ ಮಾಡಿದೆ. ಅದೂ ಕೂಡ ತಾತ್ಕಾಲಿಕವಾಗಿ ನೇಮಕ ಮಾಡಿದೆ. ಬಹುಶಃ ಈ ಒಂದು ನಿಯಮಾವಳಿ ಜಾರಿಗೆ ಬಂದಾಗ ಆ ನಿಯಮಾವಳಿ ರೀತ್ಯ ಅವರ ನೇಮಕ ಖಚಿತವಾಗಿ ಸಿಂಧುವಾಗುತ್ತದೆಯೋ ಇಲ್ಲವೋ ಕಾದುನೋಡಬೇಕು. ಮತ್ತೆ ಇನ್ನೊಂದು

(ಶ್ರೀ ಕೆ. ಪುಟ್ಟಸ್ವಾಮಿ)

ವಿಚಾರ ಹೇಳಿದರು. ಒಬ್ಬ ಅಸಿಸ್ಟೆಂಟ್ ಅಸೋಸಿಯೇಟ್ ಪ್ರೊಫೆಸರನ್ನು ಮಾನ್ಯ ಮುಖ್ಯ ಮಂತ್ರಿಗಳು ಬದಲಾಯಿಸಿ ಬೇರೆ ಮಾಡಿದ್ದಾರೆ ಎಂದು. ಸ್ವಾಮಿ, ನಾವು ಈಗ ಅಸಿಸ್ಟೆಂಟ್ ಅಸೋಸಿಯೇಟ್ ಪ್ರೊಫೆಸರನ್ನು ನೇಮಕ ಮಾಡುತ್ತಾ ಇರುವುದು ತಾತ್ಕಾಲಿಕವಾಗಿ. ನಮ್ಮ ಲೆಕ್ಚರರ್‌ಗಳ ಪೈಕಿ ಪೋಸ್ಟ್ ಗ್ರಾಜುಯೇಟ ನವರು ಯಾರಾದರೂ ಇದ್ದರೆ ಅವರಿಗೆ ಮೊದಲು ಆದ್ಯತೆ ಕೊಡಬೇಕು. ಹಾಗಿಲ್ಲದೆ ಜನರಲ್ ಕೇಡರ್‌ನಲ್ಲಿ ಯಾರಾದರೂ ಇದ್ದರೆ ಅವರು ವಿದ್ಯಾರ್ಥಿ ಯಾಗದ್ದಾಗ ಎಂ. ಬಿ. ಬಿ. ಎಸ್. ನಲ್ಲಿ ಯಾವರೀತಿ ನಂಬರ್ ತೆಗೆದುಕೊಂಡಿದ್ದಾರೆ ಮತ್ತು ಎಂ. ಎಸ್. ಪರೀಕ್ಷೆಯಲ್ಲಿ ಯಾವರೀತಿ ಪಾಸು ಆಗಿದ್ದಾರೆ, ಎಷ್ಟು ವರ್ಷ ಡಾಕ್ಟರ್ ಆಗಿ ಕೆಲಸ ಮಾಡಿದ್ದಾರೆ ಈ ವಿಚಾರಗಳನ್ನೆಲ್ಲಾ ನೋಡಿ ತಾತ್ಕಾಲಿಕವಾಗಿ ನೇಮಕ ಮಾಡುತ್ತೇವೆ, ಆದರೆ ಅವರ ಸ್ಥಾನ ಜನರಲ್ ಕೇಡರ್‌ನಲ್ಲಿ ಇರುತ್ತದೆಯೇ ವಿನಾ ಎಜುಕೇಷನ್ ಕೇಡರ್‌ನಲ್ಲಿ ಬರುವುದಿಲ್ಲ. ಈ ಸಮಯದಲ್ಲಿ ಒಬ್ಬರಿಗಿಂತ ಹೆಚ್ಚು ಜನ ಒಂದು ಸ್ಥಾನಕ್ಕೆ ಅರ್ಜಿ ಹಾಕಿದರೆ ಯಾರನ್ನಾದರೂ ಒಬ್ಬರನ್ನು ತಾತ್ಕಾಲಿಕವಾಗಿ ನೇಮಕ ಮಾಡಬೇಕಾಗುತ್ತದೆ. ಇಂತಹ ನೇಮಕ ಮಾಡುವ ವಿಷಯ ದಲ್ಲಿ ಯಾರೋ ಬೇರೆಯವರು ತಮಗೆ ಅನ್ಯಾಯವಾಗಿದೆ ಎಂದು ಹೇಳಬಹುದು. ಆದರೆ ನಾನು ಈಗ ಇದನ್ನು ಖಾಯಂ ಆಗಿ ಭರ್ತಿ ಮಾಡುತ್ತಿಲ್ಲ. ಬಹುಶಃ ಇನ್ನು ಕೆಲವೇ ತಿಂಗಳುಗಳಲ್ಲಿ ಇದರ ನಿಯಮಾವಳಿಗಳು ಜಾರಿಗೆ ಬಂದು ಪಿ.ಎಸ್.ಸಿ. ಯವರು ಈ ಹುದ್ದೆಗಳಿಗಾಗಿ ಅರ್ಜಿಗಳನ್ನು ಕರೆಯುತ್ತಾರೆ. ಆ ಸಮಯದಲ್ಲಿ ಯಾರ್ಯಾರು ಇದಕ್ಕೆ ಅರ್ಹರಾಗಿರುತ್ತಾರೋ ಅವರುಗಳು ಅರ್ಜಿ ಗಳನ್ನು ಹಾಕಿಕೊಳ್ಳಬಹುದು. ಪಿ.ಎಸ್.ಸಿ. ಯವರೇ ಇಲ್ಲಿ ನೇಮಕಗಳನ್ನು ಮಾಡುವವರು.

ಶ್ರೀ ಎಚ್. ಸಿದ್ದವೀರಪ್ಪ.—ಸರಕಾರದವರು ಪಿ.ಎಸ್.ಸಿ. ಯವರಿಗೆ ತಮ್ಮ ಅಭಿಪ್ರಾಯ ಗಳನ್ನು ಕಳುಹಿಸಿದಾಗ ಪಿ.ಎಸ್.ಸಿ. ಯವರು ಇದು ನಿಯಮಗಳಿಗೆ ಅನುಗುಣವಾಗಿಲ್ಲ. ನಾವು ಒಪ್ಪು ವುದಿಲ್ಲ ಎಂದು ಸರಕಾರಕ್ಕೆ ಹೇಳಿದ್ದಾರೆ. ಇದರ ಬಗ್ಗೆ ನಾವು ಹೇಳುತ್ತಿರುವುದು, That is why I congratulate the P.S.C.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಲ್ಲಿ ನಾನು ಹೇಳುವುದು ಪಿ.ಎಸ್.ಸಿ. ಯವರ ಕಡೆಗೆ ನಿಯಮಾವಳಿಗಳನ್ನು ಕಳುಹಿಸಿದ್ದೇವೆ. ಅವರಿಂದ ನಿಯಮಾವಳಿಗಳು ಒಪ್ಪಿ ಬಂದ ಮೇಲೆ ಈ ಹುದ್ದೆಗಳಿಗಾಗಿ ಅರ್ಜಿಗಳನ್ನು ಕರೆಯುತ್ತಾರೆ. ಆಗ ಯಾರು ಯಾರಿಗೆ ಇದಕ್ಕೆ ಅರ್ಹತೆಗಳಿವೆಯೋ ಅಂತಹ ಅರ್ಹತೆ ಇರತಕ್ಕವರು ಅರ್ಜಿಗಳನ್ನು ಕಳುಹಿಸಬಹುದು. ಆಗ ಅವರೇ ನೇಮಕಗಳನ್ನು ಮಾಡುತ್ತಾರೆ. ಈಗ ಇರತಕ್ಕ ಸ್ಥಾನಗಳನ್ನು ಭರ್ತಿ ಮಾಡತಕ್ಕ ಅವಶ್ಯಕತೆ ಇದೆ. ಏಕೆಂದರೆ ಈಗ ಕಾಲೇಜುಗಳು ನಡೆಯುತ್ತಿವೆ, ನಾಲ್ಕು ಕಾಲೇಜುಗಳನ್ನು ನಡೆಸುತ್ತಿದ್ದೇವೆ. ಹೀಗಿರುವಾಗ ಮಧ್ಯದ ಅವಧಿಯಲ್ಲಿ ಈ ಸ್ಥಾನಗಳನ್ನು ಭರ್ತಿ ಮಾಡದೇ ಇದ್ದರೆ ಇಲ್ಲಿರುವ ವಿದ್ಯಾರ್ಥಿಗಳಿಗೆ ಪಾಠ ಹೇಳತಕ್ಕ ಡಾಕ್ಟರುಗಳ ಅವಶ್ಯಕತೆ ಇದೆ. ಆ ಕಾರಣದಿಂದ ಇಲ್ಲಿ ತಾತ್ಕಾಲಿಕವಾಗಿ ಭರ್ತಿ ಮಾಡ ಲಾಗಿದೆಯೇ ವಿನಾ ಬೇರೆ ಯಾವ ವಿಧವಾದ ಕಾರಣದಿಂದಲೂ ಮಾಡಿಲ್ಲ ಎಂದು ಈ ಸಭೆಯಲ್ಲಿ ಅರಿಕೆ ಮಾಡಲು ಅಪೇಕ್ಷೆ ಪಡುತ್ತೇನೆ. ಇನ್ನು ಈಗ ಮಾಡುವ ನಿಯಮಾವಳಿಗಳ ಮೂಲಕ ಮೆಡಿಕಲ್ ಎಜುಕೇಷನಲ್ ಕೇಡರುಗಳು ಭದ್ರವಾದ ಬುನಾದಿಯ ಮೇಲೆ ರಚನೆ ಮಾಡಬೇಕು ಮತ್ತು ಇದನ್ನು ಮಾಡಲು ಸಾಧ್ಯವಾಗುತ್ತದೆ ಎಂದು ನಿಯಮಾವಳಿಗಳನ್ನು ಪಿ ಎಸ್.ಸಿ. ಕಡೆಗೆ ಕಳುಹಿಸಲಾಗಿದೆ. ಇದು ಅವರ ಒಪ್ಪಿಗೆ ಪಡೆದು ಬಂದ ನಂತರ ಅನುಕೂಲವಾಗುತ್ತದೆ. ಇದು ಬರುವುದು ಬಹಳ ದೂರವೇನಿಲ್ಲ. ಇದರ ಬಗ್ಗೆ ಸಾಕಷ್ಟು ಯಶಸ್ಸನ್ನು ಗಳಿಸಿದ್ದೇವೆ ಮತ್ತು ಗಳಿಸುವುದಕ್ಕೆ ಸಾಧ್ಯ ವಾಗುತ್ತದೆ ಎಂದೂ ನಾವೂ ನಿರೀಕ್ಷೆ ಮಾಡುತ್ತಿದ್ದೇವೆ.

ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಕೆಲವು ವಿಚಾರಗಳನ್ನು ಇಲ್ಲಿ ಹೇಳಿದರು, ಅವರು ಹೇಳುವಾಗ ನಾನು ಬಹಳ ಚಕಿತನಾದೆ. ಇಂತಹ ವಿಚಾರಗಳು ಇವು ನಡೆಯತಕ್ಕವೇ ಎಂದು ಇದ್ದರೂ ಇಂತಹ ವಿಚಾರಗಳನ್ನು ಬಂದ ಮೇಲೆ ಇದರ ಬಗ್ಗೆ ನಮ್ಮ ಇಲಾಖೆಯಲ್ಲಿ ಗಮನ ಕೊಡದೇ ಇದ್ದರೆ ಅದು ತಪ್ಪಾಗುತ್ತದೆ ಎಂದು ಇದನ್ನು ಎನ್‌ಕ್ವೈರಿ ಮಾಡಲಾಯಿತು. ಶ್ರೀಮಾನ್ ಕೃಷ್ಣನ್ ರವರು ಹೇಳಿದ ದೂರಿನ ಬಗ್ಗೆ ಇರುವ ಒಂದು ಕಾಪಿಯನ್ನು ನನ್ನ ಕಡೆಗೆ ಕಳುಹಿಸಿ ಕೊಟ್ಟಿದ್ದಾರೆ. ಅದರಲ್ಲಿರುವ ಒಂದೇ ಒಂದು ವಾಕ್ಯವನ್ನು ಮಾತ್ರ ಇಲ್ಲಿ ಸಭೆಯ ಗಮನಕ್ಕಾಗಿ ಓದುತ್ತೇನೆ. ಅದು ಹೀಗಿದೆ:

The Doctor... some Doctor in the Victoria Hospital:

"The Doctor poured acid on the face of my brother......"

ಯಾವನಾದರೂ ಡಾಕ್ಟರಾಗಿರುವವನು ರೋಗಿಯ ಮುಖದ ಮೇಲೆ ಆಸಿಡ್ ಸುರಿದನು ಎಂದರೆ...

Sri M. S. KRISHNANAN.—The Hon'ble Minister has stated a terminological inexactitude.

Sri K. PUTTASWAMY.—An enquiry was conducted and included an identification parade. The complainant did not turn up. He was sent for. No evidence came forth and there was no acid burns, but a scar due to hot weather. That is the finding of the enquiry. The man did not come. ನಾನು ಮಾನ್ಯ ಸದಸ್ಯರಲ್ಲಿ ಹೇಳುವುದು, ಅವರು ಹೇಳಿದುದನ್ನು ನಾನು ಕೇಳಿದ್ದೇನೆ. ನನಗೆ ಸಭೆಗೆ ಉತ್ತರ ಕೊಡಲು ಅವಕಾಶ ಕೊಟ್ಟಿರುವಾಗ ಇದರ ಬಗ್ಗೆ ಹೇಳುವುದಕ್ಕೆ ಸ್ವಾತಂತ್ರ್ಯ ಇದೆ. ಅದನ್ನು ಅವರೂ ಕೇಳಲಿ, ಇದರ ಮೇಲೆ ಏನಾದರೂ ಅನುಮಾನಗಳು ಬಂದರೆ ನಾನು ಮಾತುಗಳನ್ನು ಮುಗಿಸಿದ ನಂತರ ಅದನ್ನು ಅವರು ಕೇಳಬಹುದು ಮತ್ತು ಈ ಸಭೆ ಅಪೇಕ್ಷೆ ಪಟ್ಟರೆ ಪುನಃ ಅದರ ಬಗ್ಗೆ ವಿವರವಾಗಿ ಹೇಳುತ್ತೇನೆ. ಈಗ ಕಾಲಾವಕಾಶ ಬಹು ಕಡಿಮೆ ಇರುವುದರಿಂದ ಇದರ ಬಗ್ಗೆ ಈ ಸಭೆಯಲ್ಲಿ ಹೆಚ್ಚು ಕಾಲವನ್ನು ತೆಗೆದುಕೊಳ್ಳಲು ಅಪೇಕ್ಷೆ ಪಡುವುದಿಲ್ಲ. ಕೊನೆಗೆ ಈ ಸಭೆಯು ಹತೋಟಿ ಮೀರಿ ಅವಕಾಶ ಸಿಗದೇ ಹೋದರೆ ಎಷ್ಟೋ ಇತರ ಮುಖ್ಯ ವಿಚಾರಗಳನ್ನು ಹೇಳುವುದು ತಪ್ಪಿಹೋಗಿತು ಎಂದು ಅದಕ್ಕಾಗಿ ಕೆಲವೇ ಕೆಲವು ವಿಚಾರಗಳನ್ನು ಮಾತ್ರ ಇಲ್ಲಿ ಹೇಳಬೇಕೆಂದು ಇದ್ದೇನೆ. ನಾನು ಇದರ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ. ಕೆಲವು ಪತ್ರಿಕೆಗಳ ಕಾಲಂ "ನಂಬಿದರೆ ನಂಬಿ, ಬಿಟ್ಟರೆ ಬಿಡಿ" ಎನ್ನುವಂತೆ ಇಲ್ಲಿ ಬಂದಿರುವ ದೂರು ಇದೆ. ಯಾವ ಡಾಕ್ಟರೇ ಆಗಲೀ ಅವನ ಬಳಿ ಹೋದಂತಹ ರೋಗಿಗೆ ಅವನ ಮುಖದ ಮೇಲೆ ಆಸಿಡ್ ಸುರಿದು ಇಂತಹ ಕೆಲಸ ಮಾಡುತ್ತಾನೆಯೇ? ಇಂತಹ ದೂರುಗಳು ಬಂದಾಗ ತಾವು ಹೇಗೆ ಬೇಕಾದರೂ ನಂಬಿಕೊಳ್ಳಬಹುದು ಎಂದು ಇಷ್ಟು ಮಾತ್ರ ಹೇಳಿದೆ. ಇದರ ಬಗ್ಗೆ ವಿಚಾರಣೆ ಕೂಡ ಮಾಡಲಾಯಿತು. ಇನ್ನು ಇತರ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಲ್ಲಿ ಪ್ರಯತ್ನ ಮಾಡುತ್ತೇನೆ. ನಾನು ಹೇಳುವ ಉತ್ತರವನ್ನು ಮಾನ್ಯ ಸದಸ್ಯರು ಕೇಳುವ ಸೌಜನ್ಯವನ್ನು ತೋರಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ವಿಚಾರದಲ್ಲಿ ಎನ್‌ಕ್ವೈರಿ ಕೂಡ ಮಾಡಲಾಯಿತು. ಅದರಲ್ಲಿ Complainant did not turn up, he was sent for and no evidence came forth. ಆದುದರಿಂದ ಇದರ ಬಗ್ಗೆ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುವುದು, ಇದರ ಬಗ್ಗೆ ಯಾವ ರೀತಿ ಇನ್‌ಫರೆನ್ಸ್‌ಗಳನ್ನು ಡ್ರಾ ಮಾಡಬೇಕೆಂದು ಇದ್ದಾರೋ ಅದನ್ನು ಅವರು ಡ್ರಾ ಮಾಡಿಕೊಳ್ಳಬಹುದು. ಇದನ್ನು ಪರಿಶೀಲನೆ ಮಾಡಲಿಲ್ಲ ಎಂದು ಹೇಳುತ್ತಾ ಇಲ್ಲ, ಪರಿಶೀಲನೆ ಮಾಡಿದ ಮೇಲೆ ಇದು ಆಸಿಡ್ ಅಲ್ಲ, ಮುಖದ ಮೇಲೆ ಒಂದು ತರಹದ ಸ್ಕಾರ್‌ಮಾರ್ಕ್ ಹಾಟ್ ವೆದರಿನಿಂದಾಗಿ ಇದೆ ಎಂದು ಗೊತ್ತಾಗಿದೆ. ಇಂತಹ ಆಶ್ಚರ್ಯಕರವಾದ ಅಮಾನುಷವಾದ ಕೆಲಸವನ್ನು ಎಲ್ಲಿಯಾದರೂ ಇಂತಹ ಸಿವಿಲೈಸ್ಡ್ ವರ್ಲ್ಡ್‌ನಲ್ಲಿ ಮಾಡಲು ಸಾಧ್ಯವೇ? ಇಂತಹ ವಿಚಾರಗಳಿಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಕೃಷ್ಣನ್‌ರವರು ಕರೆನ್ಸಿ ಕೊಡಬಾರದು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಲು ಇಷ್ಟಪಡುತ್ತೇನೆ.

ಆಸ್ಪತ್ರೆಗಳ ವಿಚಾರವಾಗಿ ಎಲ್ಲರೂ ಇಲ್ಲಿ ಹೇಳಿದರು. ನಾನಾಗಲೇ ಹೇಳಿದೆ, ಅವರು ಹೇಳಿದಂತಹ ವಿಚಾರಗಳು ಬಹುಮಟ್ಟಿಗೆ ನಿಜ, ಕೆಲವು ಕಡೆ ಆಸ್ಪತ್ರೆಗಳಿಗೆ ಬಿಲ್ಡಿಂಗುಗಳಿಲ್ಲ, ಅದರಲ್ಲೂ ಗ್ರಾಮಾಂತರಗಳಲ್ಲಿ ಪ್ರೈಮರಿ ಹೆಲ್ತ್ ಯೂನಿಟನ್ನು ಇನ್ನೂ ಕೊಡುವುದಕ್ಕೆ ಏನು ಎನ್ನುವ ವಿಚಾರವನ್ನೂ ಇಲ್ಲಿ ಹೇಳಿದ್ದಾರೆ. ನಮ್ಮ ಈಗಿನ ಆಡಳಿತದಲ್ಲಿ ಪ್ರೈಮರಿ ಹೆಲ್ತ್ ಯೂನಿಟ್ ಮಾಡಿ ಗ್ರಾಮಾಂತರದ ಜನರಿಗೆ ವೈದ್ಯಕೀಯ ಸೌಲಭ್ಯಗಳನ್ನು ಜನಾರೋಗ್ಯ ಇಲಾಖೆಯಿಂದ ಮಾಡಿಸಿಕೊಡುವುದು ಅವರ ಕರ್ತವ್ಯ ಎಂದು ಅದನ್ನು ಒದಗಿಸಿಕೊಡಲು ಪ್ರಯತ್ನ ಮಾಡುತ್ತಿದ್ದೇವೆ. ಮೈಸೂರು ರಾಜ್ಯದಲ್ಲಿ ಸುಮಾರು 262 ಪ್ರೈಮರಿ ಹೆಲ್ತ್ ಸೆಂಟರುಗಳಿವೆ ಮತ್ತು ಇದಕ್ಕಾಗಿ ಸುಮಾರು 25,000 ರೂಪಾಯಿಗಳಷ್ಟು ಖರ್ಚಾಗುತ್ತಿದೆ, ಅದೂ ಅಲ್ಲದೆ ಕೆಲವು ಕಡೆ ಇರುವ ಪ್ರೈಮರಿ ಹೆಲ್ತ್ ಸೆಂಟರುಗಳಲ್ಲಿ ಜನರಿಗೆ ಅನುಕೂಲವಾಗಲಿ ಎಂದು ವಾಹನ ಸೌಲಭ್ಯಗಳನ್ನೂ ಒದಗಿಸಿ ಕೊಡಲಾಗಿದೆ. ಏಕೆಂದರೆ ಹತ್ತಿರ ಇರುವ ಗ್ರಾಮಗಳಿಗೆ ವಾಹನಗಳ ಮೂಲಕ ಹೋಗಿ ಜನರಿಗೆ ವೈದ್ಯಕೀಯ ಸಹಾಯ ಕೊಡಬೇಕೆಂದು ಮಾಡಿದೆ. ಇದರಿಂದ ಸಾಕಷ್ಟು ಸಮರ್ಪಕವಾಗಿ ಕೆಲಸಗಳು ಈಗ ಕೆಲವೆಡೆ ನಡೆಯದೇ ಇರಬಹುದು. ಮಾನ್ಯ ಸದಸ್ಯರಲ್ಲಿ ನಾನು ಇಲ್ಲಿ ವಿನಂತಿ ಮಾಡುವುದು ಜನರಿಗೆ ಅನುಕೂಲ ಮಾಡಲು ಇದನ್ನು ಪ್ರಾರಂಭ ಮಾಡಿದ್ದೇವೆ. ಇದರಿಂದ ನಿರೀಕ್ಷಿಸಿದಷ್ಟು ಯಶಸ್ಸು ಆಗದೇ ಇರಬಹುದು. ಇದಕ್ಕೆ ಬೇರೆ ಕಾರಣಗಳೂ ಇವೆ. ಮಾನ್ಯ ಸಭೆಯ ಸದಸ್ಯರೇ ಹೇಳಿದ ಹಾಗೆ ಡಾಕ್ಟರುಗಳೇ ಬರುವುದಿಲ್ಲ, ಡಾಕ್ಟರುಗಳಿದ್ದರೆ ಔಷಧಿಗಳಿಲ್ಲ ಎಂದು. ಡಾಕ್ಟರುಗಳು ಏತಕ್ಕಾಗಿ ಬರುವುದಿಲ್ಲ ಎಂದರೆ, ಇದು ರಾಜ್ಯದಲ್ಲಿರುವ ಒಂದು ರೋಗ ಎಂದು ಹೇಳ

(SRI K. PUTTASWAMY)

ಬಹುದು. ಈಗ ಸಮಾಜದಲ್ಲಿ ಹಣದ ಪಿಶಾಚಿ ಹೆಚ್ಚುತ್ತಿದೆ. ಇದು ಗ್ರಾಮಾಂತರಗಳಲ್ಲೂ ಹರಡು ತ್ತಿದೆ. ಇದು ಕ್ರಮೇಣ ಸರಿಹೋಗುತ್ತದೆ. ಇಂದು ಇದು ಸರಿಹೋಗುವುದಿಲ್ಲ. ಅನೇಕ ಆಸ್ಪತ್ರೆ ಗಳಿಗೆ ಡಾಕ್ಟರುಗಳೇ ಇಲ್ಲ. ಹೀಗಾದರೆ ಆಸ್ಪತ್ರೆಗಳು ಏತಕ್ಕೆ ಇರಬೇಕು ಎಂದು ಕೆಲವರು ಹೇಳಿದರು. ಅದಕ್ಕೆ ಅನುಭವ ಪಡೆದ ವೈದ್ಯರುಗಳ ಅಭಾವ. ನಮ್ಮಲ್ಲಿ ಒಂದು ಪ್ರಶ್ನೆ ಈಗ ಬರಬಹುದು, ಡಾಕ್ಟರುಗಳನ್ನು ತಯಾರು ಮಾಡಬೇಕೆಂದು ಇದಕ್ಕಾಗಿ ಹೆಚ್ಚು ವೆಚ್ಚ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಸುಮಾರು 28 ಲಕ್ಷ ಜನರಿಗೆ ಒಂದು ಮೆಡಿಕಲ್ ಕಾಲೇಜು ಇದೆ, ಇದು ಎಲ್ಲಿಯೂ ಇಲ್ಲ. ಭರತಖಂಡದಲ್ಲಿ ಎಲ್ಲೂ ಈ ರೀತಿ ಕಾಲೇಜು ಗಳು ಸ್ಥಾಪನೆಯಾಗಿಲ್ಲ. ಸುಮಾರು 50 ಲಕ್ಷ ಪ್ರಜೆಗಳಿಗೆ ಒಂದು ಮೆಡಿಕಲ್ ಕಾಲೇಜು ಇದೆ. ಇಂಡಿಯಾದೇಶದಲ್ಲಿ ಎಲ್ಲೂ ಇಲ್ಲದ ಪರಿಸ್ಥಿತಿ ನಮ್ಮ ಮೈಸೂರು ರಾಜ್ಯದಲ್ಲಿ ಇದೆ. ಸುಮಾರು 28 ಲಕ್ಷ ಜನರಿಗೆ ಒಂದು ಮೆಡಿಕಲ್ ಕಾಲೇಜು ಇದೆ. ಆದರೆ ಇದು ನಿಮಗೆ ತೃಪ್ತಿಕರವಾಗಿದೆ, ನನಗೆ ತೃಪ್ತಿಕರವಾಗಿದೆ ಎಂದು ನಾನು ಹೇಳುವುದಿಲ್ಲ. ಸಾಕಾದಷ್ಟು ಡಾಕ್ಟರುಗಳು ದೊರೆಯುತ್ತಿಲ್ಲ, ಇದಕ್ಕೆ ಪರಿಹಾರವೇನು ಎಂದರೆ, ಇನ್ನು 3 ವರ್ಷ ಗಳಲ್ಲಿ ಬೇಕಾದಷ್ಟು ಡಾಕ್ಟರುಗಳು ದೊರೆಯುತ್ತಾರೆ, ಬಹುಶಃ ಆ ಅವಧಿಯಲ್ಲಿ ಕಾಲೇಜುಗಳಿಂದ ಪಾಸಾಗಿ ಬರುವವರ ಸಂಖ್ಯೆ ಹೆಚ್ಚಾಗಿ ಪಿ. ಎಸ್. ಸಿ. ಬಾಗಿಲಿಗೆ ಅವರು ಕೆಲಸಕ್ಕಾಗಿ ಅರ್ಜಿ ಹಿಡಿದು ಕೊಂಡು ಅಲೆದಾಡಬೇಕಾದ ಪರಿಸ್ಥಿತಿ ಬರಬಹುದು. ಕಾರಣ ಈಗ 9 ಮೆಡಿಕಲ್ ಕಾಲೇಜುಗಳು ಸ್ಥಾಪನೆಯಾಗಿವೆ, ಅವುಗಳಿಂದ ಬೇಕಾದಷ್ಟು ಡಾಕ್ಟರುಗಳು ಬರುತ್ತಾರೆ, 5 ಖಾಸಗಿ ಮೆಡಿಕಲ್ ಕಾಲೇಜುಗಳಿವೆ, ಸರಕಾರಿ ಕಾಲೇಜುಗಳಿವೆ, ಅವುಗಳಿಂದ ಬರುವ ಡಾಕ್ಟರುಗಳೇನಾಗುತ್ತಿದ್ದಾರೆ ಎಂದು ಕೇಳಬಹುದು. 4 ಕಾಲೇಜುಗಳಿಂದ 765 ಮಂದಿ ಬರುತ್ತಾರೆ, ಮಣಿಪಾಲ್ ಕಾಲೇಜಿ ನಿಂದ 200 ಜನ, ಹೀಗೆ ಒಟ್ಟು ಪ್ರತಿ ವರ್ಷ 965 ಮಂದಿ ಬರಬಹುದು. ಪ್ರತಿವರ್ಷ ಮೆಡಿಕಲ್ ಕಾಲೇಜುಗಳಿಂದ ನಮ್ಮ ದೇಶದಲ್ಲಿ ಬಹುಶಃ ಕಡಮೆಯೆಂದರೆ 500ಕ್ಕೆ ಕಡಮೆಯಿಲ್ಲದೆ ಪದವೀಧರರು ದೇಶದಿಂದ ಹೊರಗೆ ಹೋಗುತ್ತಿದ್ದಾರೆ, ಎಲ್ಲಿಗೆ ಹೋಗುತ್ತಿದ್ದಾರೆಂಬುದು ಸದಸ್ಯರಿಗೆ ಗೊತ್ತಿರ ಬಹುದು. ಸಮಾಜದಲ್ಲಿ ಸಾಮಾಜಿಕ ಪ್ರಜ್ಞೆ ಈ ವಿಚಾರದಲ್ಲಿ ಹೆಚ್ಚಾಗಿದೆ, ಜನರು ಎಚ್ಚೆತ್ತಿದ್ದಾರೆ. ಕಾನೂನನ್ನು ತಿದ್ದುಪಡಿಮಾಡಬೇಕು, 5 ವರ್ಷ ಹಳ್ಳಿಗಳಲ್ಲಿ ಸೇವೆ ಸಲ್ಲಿಸದ ಹೊರತು ಪದವಿ ಕೊಡು ವುದಿಲ್ಲ ಎಂದು ಷರತ್ತು ಹಾಕಬೇಕು ಎಂದು ಮಾನ್ಯಸದಸ್ಯರು ಹೇಳಿದರು. ಬಹುಶಃ ಹಾಗೆ ಮಾಡು ವುದಕ್ಕೆ ಹೋದರೆ ಎಷ್ಟೋ ಅಡಚಣೆ ಬರಬಹುದು. ಸದಸ್ಯರು ಹೇಳುವುದೇನೆಂದರೆ, ಈ ದಿವಸ ಗ್ರಾಮಾಂತರಗಳಲ್ಲಿ ವೈದ್ಯಕೀಯ ಸೌಲಭ್ಯ ದೊರೆಯುತ್ತಿಲ್ಲ, ಅದರಿಂದ ಮನನೊಂದಿದ್ದಾರೆ. ಅವರ ನೊಂದ ಹೃದಯ ನನಗೂ ಕೂಡ ಅರ್ಥವಾಗಿದೆ. ಇದಕ್ಕೆ ಸ್ವಲ್ಪ ಕಾಲ ಬೇಕು. ಅನೇಕ ಕಡೆ ಡಾಕ್ಟರಿಲ್ಲ, ಮೈಸೂರು, ಬೆಂಗಳೂರುಗಳಲ್ಲಿ, ದೊಡ್ಡದೊಡ್ಡ ಪಟ್ಟಣಗಳಲ್ಲಿ ಸಾಕಾದಷ್ಟು ಪರಿ ಣತರಾದ ಡಾಕ್ಟರುಗಳಿದ್ದಾರೆ, ಸರಕಾರಿ ಡಾಕ್ಟರುಗಳಲ್ಲದೆ ಖಾಸಗಿಯಾಗಿ ಕೂಡ ಡಾಕ್ಟರ ವೃತ್ತಿ ಮಾಡುವ ಅನೇಕರಿದ್ದಾರೆ. ಅವರನ್ನು ಇಂಥ ದೊಡ್ಡ ಪಟ್ಟಣಗಳಿಂದ ತಾಲ್ಲೂಕು ಹೆಡ್‌ಕ್ವಾರ್ಟರು ಗಳಿಗೆ ವರ್ಗಮಾಡಿದರೆ ಹೋಗುವುದಕ್ಕೆ ಹಿಂಜರಿಯುತ್ತಾರೆ, ನಿರಾಕರಿಸುತ್ತಾರೆ, ಅಲ್ಲಿ ಸೌಲಭ್ಯ ವಿಲ್ಲವೆಂದು ಹೇಳುತ್ತಾರೆ. ಸಾಮಾನ್ಯವಾಗಿ ಲೇಡಿ ಡಾಕ್ಟರುಗಳನ್ನು ಕ್ವಾರ್ಟರ್ಸ್ ಇಲ್ಲದಿರುವ ಕಡೆಗೆ ಹಾಕುತ್ತಿಲ್ಲ, ಕೆಲವು ಕಡೆ ಸ್ಥಳವಂದಿಗರು ಬಂದು ಎಲ್ಲಾ ಸೌಲಭ್ಯವನ್ನೂ ಮಾಡಿಕೊಡು ತ್ತೇವೆ ಎಂದು ಹೇಳಿದರೂ ಅಲ್ಲಿಗೆ ಹೋಗುವುದಿಲ್ಲ. ಭದ್ರಾವತಿಯಿಂದ ಹೊನ್ನಾಳಿಗೆ ಒಬ್ಬರನ್ನು ವರ್ಗಮಾಡಿದರೆ ಅವರು ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಯಾವ ಲೇಡಿ ಡಾಕ್ಟರನ್ನು ವರ್ಗ ಮಾಡಿದರೂ ಮಾಡಬೇಡಿ ಎಂದು ಹೇಳುತ್ತಾರೆ, ಹೋಗಲೇಬೇಕು ಎಂದು ಒತ್ತಾಯಮಾಡಿದರೆ ರಾಜೀನಾಮೆ ಕೊಡುತ್ತಾರೆ. ನಾನು ಜವಾಬ್ದಾರಿಯಿಂದ ಹೇಳುವುದು, ಅವರು ರಾಜೀನಾಮೆ ಕೊಟ್ಟರೆ ನಷ್ಟವಿಲ್ಲ, ಮೈಸೂರು ಮತ್ತು ಬೆಂಗಳೂರುಗಳಲ್ಲಿ ಅನೇಕ ಡಾಕ್ಟರುಗಳು ರಾಜೀನಾಮೆ ಕೊಟ್ಟು ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಿದ್ದಾರೆ; ಇದರಿಂದ ಜನರಿಗೆ ಸೌಲಭ್ಯ ದೊರೆಯುತ್ತದೆ. ಹಳ್ಳಿಗಳಿಗೆ ಕಳುಹಿಸುವುದಕ್ಕಾಗದಿದ್ದರೂ ತಾಲ್ಲೂಕು ಮಟ್ಟಕ್ಕಾದರೂ ಲೇಡಿ ಡಾಕ್ಟರುಗಳನ್ನು ಕಳು ಹಿಸುವುದಕ್ಕಾಗದಿದ್ದರೆ ಅವರು ಎಲ್ಲಿದ್ದರೂ ಒಂದೇ. ಆದರೆ ಈ ವಿಚಾರದಲ್ಲಿ ಬಹಳ ನಿಷ್ಠೂರವಾದ ಕಾರ್ಯಕ್ರಮ ಕೈಗೊಳ್ಳುತ್ತಿಲ್ಲ. ಅವರನ್ನು ಒತ್ತಾಯಮಾಡುತ್ತಿದ್ದೇವೆ. ಕಾರಣ, ಇಂದಲ್ಲ ನಾಳೆ ಅವರಿಗೂ ತಮ್ಮ ಕರ್ತವ್ಯವೇನಿದೆ, ಸಮಾಜದ ಋಣ ತೀರಿಸಬೇಕು ಎಂಬ ಅರಿವು ಬರಬಹುದು ಎಂದು ನಿರೀಕ್ಷೆ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಒಂದು ವಿಚಾರ ಹೇಳುವುದು, ಎಷ್ಟು ಹಣ ಈ ಸಭೆ ವೈದ್ಯಕೀಯ ಶಿಕ್ಷಣಕ್ಕೆ ಕೊಡುತ್ತಿದೆ ಎಂದು ಲೆಕ್ಕಹಾಕಿದೆ, ಪ್ರತಿಯೊಬ್ಬ ವಿದ್ಯಾರ್ಥಿಗೂ ಎಷ್ಟು ಖರ್ಚುಮಾಡುತ್ತಿದೆ, ಶಿಕ್ಷಣಕೊಡಲು ಎಷ್ಟು ವ್ಯಯವಾಗುತ್ತಿದೆ ಎಂಬುದು ತಿಳಿದಿರಬೇಕು. ನನ್ನ

ಲೆಕ್ಕದ ಪ್ರಕಾರ ಕನಿಷ್ಠ ಪಕ್ಷ 20 ಸಾವಿರ ರೂಪಾಯಿ ಒಬ್ಬ ವಿದ್ಯಾರ್ಥಿಗೆ ಸಾಮಾನ್ಯವಾಗಿ ಖರ್ಚಾಗುತ್ತಿದೆ. ಹೀಗೆ 20 ಸಾವಿರ ರೂಪಾಯಿಗಳ ಋಣ ಹೊತ್ತ ವಿದ್ಯಾರ್ಥಿ ಗ್ರಾಮಾಂತರಗಳಿಗೆ ಹೋಗುವುದಿಲ್ಲ ಅಂದರೆ ಅದಕ್ಕೇನು ಮಾಡಬೇಕು ? ಈ ಸಭೆ ಅದಕ್ಕೆ ತಕ್ಕ ಮಾರ್ಗ ತೋರಿಸಬೇಕು. ಆದುದರಿಂದ ನಿಷ್ಠೂರವಾದ ಕ್ರಮವನ್ನು ಜಾರಿಗೆ ತರುವುದಾದರೆ ಈ ಸಭೆ ಸಾಕಷ್ಟು ಬೆಂಬಲ ಕೊಡುತ್ತದೆಂದು ನಂಬಿಕೊಂಡಿದ್ದೇನೆ. ಮಹಿಳಾ ಡಾಕ್ಟರುಗಳ ಅಸಹಕಾರದಿಂದ ಈ ದೇಶದಲ್ಲಿ ಇರುವ ಜನರು ಯಾರೂ ವೈದ್ಯಕೀಯ ಸೌಲಭ್ಯವಿಲ್ಲದೆ ಸಾಯುವುದಿಲ್ಲ. ನಾನು ಆಶಾವಾದಿ, ಆಕಾಶವೇನೂ ಕಳಚಿಕೊಂಡು ತಲೆಯ ಮೇಲೆ ಬೀಳುವುದಿಲ್ಲ. ಅಲೋಪತಿ ಶಿಕ್ಷಣ ಬರುವುದಕ್ಕೆ ಮುಂಚೆಯೂ ಜನರು ಜೀವನಮಾಡಿಕೊಂಡು ಹಾಯಾಗಿದ್ದರು, ಈಗ ಪಟ್ಟಣಗಳಲ್ಲಿರುವವರು ಅಲೋಪತಿ ಡಾಕ್ಟರುಗಳನ್ನೇ ನೆಚ್ಚಿಕೊಂಡಿರುವುದು ಹೆಚ್ಚು, ಅವರಿಗೆ ಬೇರೆ ಮಾರ್ಗವಿಲ್ಲ. ಹೆರಿಗೆ ಆಸ್ಪತ್ರೆ ಬೆಂಗಳೂರಿನಲ್ಲಿದೆ, ಗ್ರಾಮಾಂತರಗಳಲ್ಲಿಲ್ಲ ಹಳ್ಳಿಗಳಲ್ಲಾಗುವ ಹೆರಿಗೆಗೆ ಮಿಡ್‌ವೈಫ್‌ಗಳು ಬರುತ್ತಿದ್ದಾರೇನು ? ಮಹಿಳಾ ವೈದ್ಯರು ಇಲ್ಲದಿದ್ದರೂ ನೂರಾರು ಹೆರಿಗೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ನಿತ್ಯವೂ ಆಗಿ ಅಲ್ಲಿನ ಜನ ಆರೋಗ್ಯವನ್ನು ಕಾಪಾಡಿಕೊಂಡಿಲ್ಲವೇ ?

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಹಾಗಾದರೆ ಮಹಿಳಾ ಡಾಕ್ಟರುಗಳೇ ಕಿರಬೇಕು ?

ಶ್ರೀ ಕೆ. ಪುಟ್ಟಸ್ವಾಮಿ.—ಹೇಳುತ್ತೇನೆ. ಅವರು ಬೇಕೇ ಬೇಕು. ಗ್ರಾಮಗಳಲ್ಲಿರುವವರಿಗೆ ಮಹಿಳಾ ವೈದ್ಯ ಸಹಾಯ ಒದಗಿಸಬೇಕೆಂದು ಬೇಕಾದಷ್ಟು ಪ್ರಯತ್ನ ಮಾಡುತ್ತಿದ್ದೇನೆ. ಆದರೂ ಕೂಡ ಮಹಿಳೆಯರು ಸಹಕರಿಸುತ್ತಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಗಂಡ ಮತ್ತು ಹೆಂಡತಿ ಕೆಲಸದಲ್ಲಿದ್ದರೆ ಅವರನ್ನು ಬೇರೆ ಬೇರೆ ಕಡೆಗಳಿಗೆ ವರ್ಗ ಮಾಡಬಾರದು. ಆ ಸೌಲಭ್ಯಮಾಡಿಕೊಡಿ. ನೀವು ಮಂತ್ರಿಗಳಾದರೆ ನಿಮ್ಮ ಊರಿನಲ್ಲಿ ಹೆಂಡತಿಯನ್ನು ಬಿಟ್ಟು ಇಲ್ಲಿ ನೀವೊಬ್ಬರೇ ಏಕಿರಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ಯಾವುದೇ ಒಂದು ದೊಡ್ಡ ಜವಾಬ್ದಾರಿ ಹೊರಬೇಕಾದರೂ ಸಂಸಾರಿಯಾಗಿರಬೇಕು, ಏಕೆಂದರೆ ಅವರಿಗೆ ಕಷ್ಟಸುಖ ಗೊತ್ತಿರುತ್ತದೆ. ನಾಗರತ್ನಮ್ಮನವರು ಹೇಳುವುದನ್ನು ನಾನು ಒಪ್ಪುತ್ತೇನೆ, ಗಂಡಹೆಂಡಿರನ್ನು ಅಗಲಿಸಬಾರದು. ಆ ಕಾರಣದಿಂದಲೇನೇ ಸರಕಾರ ಮುಂಜಾಗ್ರತೆಯಿಂದ ಆರ್ಡರು ಮಾಡಿದೆ. ಸಾಧ್ಯವಾದಷ್ಟು ಮಟ್ಟಿಗೂ ಕೂಡ ಗಂಡಹೆಂಡಿರು ನೌಕರಿಯಲ್ಲಿದ್ದರೆ ಒಂದೇ ಸ್ಥಳಕ್ಕೆ ಅವರನ್ನು ಹಾಕಬೇಕೆಂದು ಸೂಚಿಸಿದೆ. ನಮ್ಮ ಇಲಾಖೆಯಲ್ಲಿ ಕೆಲಸದಲ್ಲಿದ್ದರೆ ನಾವು ಅದಕ್ಕೆ ಚ್ಯುತಿ ಬರದಹಾಗೆ ನೋಡಿಕೊಳ್ಳುತ್ತೇವೆ, ಬೇರೆ ಇಲಾಖೆಯಲ್ಲಿದ್ದರೆ ಆ ಇಲಾಖೆಯವರಿಗೆ ವಿನಂತಿಮಾಡಿಕೊಳ್ಳುತ್ತೇವೆ, ಆದರೆ ಈ ಸೌಲಭ್ಯವನ್ನುಪಯೋಗಿಸಿಕೊಂಡು ಒಂದೇ ಸ್ಥಳದಲ್ಲಿ ಖಾಯಮಾಗಿ ನಿಂತು ಜಹಗೀರಿ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ.

ತಮಗೆಲ್ಲಾ ತಿಳಿದಿರುವಂತೆ ಮಹಿಳೆಯರು ಹಿಂದೆ ಅಷ್ಟಾಗಿ ಸಂಸಾರವಂದಿಗರು ಆಗುತ್ತಾ ಇರಲಿಲ್ಲ. ಈಚೆಗೆ ಸಂಸಾರವಂದಿಗರು ಆಗುತ್ತಾರೆ. ಇಂತಹವರನ್ನೇ ಮದುವೆ ಮಾಡಿಕೊಳ್ಳಬೇಕೆಂದು ನಾವು ಹೇಳುವುದಿಲ್ಲ, ಆದರೆ ಮದುವೆ ಮಾಡಿಕೊಂಡ ಮೇಲೆ ಏನು ಮಾಡುತ್ತಾರೆ ? ನಮ್ಮ ಆಡಳಿತ ನಡೆಸುವುದಕ್ಕೆ ಹೇಗೆ ಆತಂಕವುಂಟುಮಾಡುತ್ತಾರೆ ಅಂತ ಹೇಳುವುದಕ್ಕೆ ಒಂದು ವಿಚಾರ ಹೇಳುತ್ತೇನೆ. ಗಂಡ, ಹೆಂಡತಿ ಇವರ ಪೈಕಿ ಒಬ್ಬರು ಸರ್ಕಾರಿ ನೌಕರಿಯಲ್ಲಿದ್ದು ಮತ್ತೊಬ್ಬರು ಎಚ್.ಎಂ.ಟಿ., ಎಚ್. ಎ. ಎಲ್., ಎಲ್.ಐ.ಸಿ. ನಲ್ಲಿ ಕೆಲಸಕ್ಕೆ ಸೇರಿರುತ್ತಾರೆ. ಅಥವಾ ಬೇರೆ ಯಾವುದಾದರೂ ಖಾಸಗಿ ವೃತ್ತಿ ಅನುಸರಿಸಿರುತ್ತಾರೆ. ಅಂತಹ ಸಂದರ್ಭದಲ್ಲಿ ಏನಾದರೂ ಮಾಡಿ ಬೆಂಗಳೂರಿನಲ್ಲೇ ಇರಬೇಕೆಂದು ಸರ್ವಪ್ರಯತ್ನಗಳನ್ನೂ ಮಾಡುತ್ತಾರೆ.

6-00 P. M.

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲಿ ಜೀವನ ಮಾಡುವುದೇ ಕಷ್ಟವಾಗಿದೆ, ಬೆಂಗಳೂರಿನ ವ್ಯಾಮೋಹ ಯಾರಿಗೂ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ನಾನೂ ಕೂಡ ಅದೇ ಭ್ರಾಂತಿಯಲ್ಲಿ ಇದ್ದೆ. ಹಿಂದೆ ತಪ್ಪು ಮಾಡಿದವರಿಗೆ ಕೊಪ್ಪಕ್ಕೆ ಹಾಕು ಅಂತ ಹೇಳುತ್ತಾ ಇದ್ದರು. ಅದೇ ರೀತಿ ತಪ್ಪು ಮಾಡಿದವರನ್ನು ಬೆಂಗಳೂರಿಗೆ ಹಾಕು ಅನ್ನುವಂತಹದೂ ಕೂಡ ಈಗ ಬೆಂಗಳೂರಿಗೆ ಹಳೆಯ ಮಾತಾಗುತ್ತದೆ. ನಾಲ್ಕನೆಯ ದರ್ಜೆ ಸರ್ವೆಂಟ್ಸ್ ಇಂದ ಹಿಡಿದು ಟಾಪ್ ಪೋಸ್ಟ್ ಅಫಿಷಿಯಲ್ಸ್‌ವರೆಗೂ ಬೆಂಗಳೂರೇ ಅವರ ಫಸ್ಟ್ ಪ್ರಿಫರೆನ್ಸ್, ಅದೇನಾದರೂ ಸಾಧ್ಯವಾಗದಿದ್ದರೆ ನೆಕ್ಸ್ಟ್ ಪ್ರಿಫರೆನ್ಸ್ ಬೇರೆ ಸ್ಥಳಗಳಿಗೆ.

(ಶ್ರೀ ಕೆ. ಪುಟ್ಟಸ್ವಾಮಿ)

ಹೀಗಾದರೆ ನಮಗೆ ಬಂದು ಕೇಳತಕ್ಕವರಿಗೆ ಏನು ಹೇಳುವುದು? ಮತ್ತು ಇನ್ನು ಕೆಲವರು ತಮ್ಮ ಜೀವಾವಧಿ ಅಥವಾ ತಮ್ಮ ಅಧಿಕಾರಾವಧಿ ಎಲ್ಲಾ ಬೆಂಗಳೂರಿನಲ್ಲೇ ಕಳೆದಿದ್ದಾರೆ. ಅವರು ಹೇಳುತ್ತಾರೆ, ಇನ್ನು ನಾಲ್ಕು ವರ್ಷ ಇದೆ, ಇಷ್ಟು ವರ್ಷ ಇದೆ, ಇನ್ನು ಸ್ವಲ್ಪ ದಿವಸಕ್ಕೋಸ್ಕರ ನನನ್ನು ಏಕೆ ಟ್ರಾನ್ಸ್‌ಫರ್ ಮಾಡುತ್ತೀರಿ ಎಂದು. ಇದನ್ನು ಏನೋ ಒಂದು ಅನಾದರಣೆಯವಾದ ವಿಚಾರವಾಗಿ ನೋಡಬೇಕೆಂದು ನಮ್ಮ ಇಷ್ಟ ಅಲ್ಲ, ಸಾಧ್ಯವಾದ ಮಟ್ಟಿಗೂ ಅವಕಾಶದಲ್ಲಿ ಅವರ ಸಂಸಾರ ಒಡೆಯದಂತೆ, ಅವರು ಸಂಸಾರ ನಡೆಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ನಮ್ಮ ಆಡಳಿತದ ಅನುಕೂಲತೆಯನ್ನು ಗಮನದಲ್ಲಿಟ್ಟುಕೊಂಡು ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ. ಆ ರೀತಿ ಮಾಡುತ್ತೇವೆ ಅನ್ನುವಂತಹ ಭರವಸೆಯನ್ನು ಕೊಡುತ್ತೇನೆ. ಕ್ಲಾಸ್ 4 ಸರ್ವಂಟ್ಸ್‌ನ್ನು ಬೇರೆ ಕಡೆಗಳಿಗೆ ಹಾಕುವುದಕ್ಕೆ ಆಗುವುದಿಲ್ಲ. ಅವರೇನಿದ್ದರೂ ವಿಕ್ಟೋರಿಯಾ ಆಸ್ಪತ್ರೆಯಿಂದ ವಾಣಿವಿಲಾಸ ಆಸ್ಪತ್ರೆಗೆ ವರ್ಗಮಾಡಲ್ಪಡುತ್ತಾರೆ, ಅಥವಾ ವಾಣಿವಿಲಾಸ ಆಸ್ಪತ್ರೆಯಿಂದ ಬೌರಿಂಗ್ ಆಸ್ಪತ್ರೆಗೆ ವರ್ಗಮಾಡಲ್ಪಡುತ್ತಾರೆ, ಅಂತಹ ಸಂದರ್ಭದಲ್ಲೂ ಕೂಡ ಡೆಪ್ಯೂಟೇಷನ್ ಬರುತ್ತಾರೆ. ಆದ್ದರಿಂದ ಕ್ಲಾಸ್ 4 ಸರ್ವೆಂಟ್ಸ್‌ನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಟ್ರಾನ್ಸ್‌ಫರ್ ಮಾಡುವುದು ಅಥವಾ ಅವರಿಗೆ ಅನಾವಶ್ಯಕವಾದ ತೊಂದರೆ ಉಂಟುಮಾಡಬೇಕೆಂಬ ಅಪೇಕ್ಷೆ ನಮಗೆ ಇಲ್ಲ. ಕ್ಲಾಸ್ 3 ನೌಕರರನ್ನು ಬಹಳ ದೂರ ಟ್ರಾನ್ಸ್‌ಫರ್ ಮಾಡಬೇಡಿ ಎಂದು ಹೇಳುತ್ತಾರೆ. ಅದು ಖಂಡಿತವಾಗಿಯೂ ಒಪ್ಪಬೇಕಾದ ಮಾತು. ಬಹಳ ದೂರ ವರ್ಗ ಮಾಡುವುದು ಸರಿಯಲ್ಲ. ಸಾಧ್ಯವಾದಷ್ಟು ಮಟ್ಟಿಗೂ ನಮ್ಮ ರೆವಿನ್ಯೂ ಡಿವಿಜನ್‌ನಲ್ಲಿ ವರ್ಗ ಮಾಡುತ್ತೇವೆ, ಅದರೊಳಗೆ ಮಿತಿಗೊಳಿಸುತ್ತೇವೆ ಎಂಬ ಭರವಸೆಯನ್ನು ಕೊಡುತ್ತೇವೆ. ಆಸ್ಪತ್ರೆಗಳಲ್ಲಿ ಕೆಲ ಕೆಲವು ಸ್ಪೆಷಲಿಸ್ಟ್ ಇರುತ್ತಾರೆ. ಅಂತಹವರು ಯಾರಾದರೂ ಇದ್ದರೆ ಅವರನ್ನು ಬಿಟ್ಟು ಅಥವಾ ಯಾವುದಾದರೂ ಒಂದು ನಿರ್ದಿಷ್ಟವಾದ ಅಪಾದನೆಯ ಮೇಲೆ ಅವರಿಗೆ ಶಿಕ್ಷಾ ರೂಪದಲ್ಲಿ ವರ್ಗಮಾಡಬೇಕಾದರೆ ರೆವಿನ್ಯೂ ಡಿವಿಜನ್‌ದೊಳಗೇ ವರ್ಗಾವಣೆಯನ್ನು ಮಿತಿಗೊಳಿಸುತ್ತೇವೆ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಸಲಕರಣೆಗಳ ವಿಷಯ ಹೇಳಿವರು. ಅವರು ಹಾಗೆ ಹೇಳಿದರು, ಇವರು ಹೀಗೆ ಹೇಳಿದರು, ಸಲಕರಣೆಗಳು ಕಡಿಮೆ, ತೊಂದರೆಯಾಗಿದೆ ಎಂಬುದನ್ನು ವಿವರಿಸುತ್ತಾ ಶ್ರೀಮತಿ ನಾಗರತ್ನಮ್ಮನವರು ಹೊಲಿಯುವುದಕ್ಕೆ ದಬ್ಬಣ, ಕೊಯ್ಯುವುದಕ್ಕೆ ಕಡಕತ್ತಿ ಉಪಯೋಗಿಸುವಂತಹ ಪರಿಸ್ಥಿತಿ ಬಂದಿದೆ ಎಂದು ಹೇಳಿದರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ),— ಅವುಗಳನ್ನಾದರೂ ಕೊಡೋಣವೇ ಹೇಳಿ.

ಶ್ರೀ ಕೆ. ಪುಟ್ಟಸ್ವಾಮಿ.—ದಯವಿಟ್ಟು ಕೊಡಬೇಡಿ. ನಮ್ಮಲ್ಲಿ ದಬ್ಬಣ, ಕಡಕತ್ತಿಗಿಂತ ಒಳ್ಳೆಯ ಸಲಕರಣೆಗಳು, ಹತ್ಯಾರುಗಳು ಇವೆ. ಆದರೆ ಅವು ಸಾಕಾದಷ್ಟು ಇವೆ ಅಂತ ಹೇಳುತ್ತಿಲ್ಲ ವೈದ್ಯಕೀಯ ಸೌಲಭ್ಯಗಳು ನಮಗೆ ತಿಳಿಯದಂತಹವು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಬೇಕಾದಷ್ಟು ಇವೆ. ಹತ್ತಿಪ್ಪತ್ತು ವರ್ಷಗಳ ಹಿಂದೆ ಏನಿತ್ತು, ಈಗ ಏನಿದೆ ಎಂಬುದನ್ನು ನಾವು ನೋಡಿದ್ದೇ ಆದರೆ ಹತ್ತು ವರ್ಷಗಳ ಹಿಂದೆ ನಮ್ಮಲ್ಲಿ ಈಗ ಯಾವ ಸ್ಪೆಷಲಿಸ್ಟ್ಸ್ ಇದ್ದಾರೆ ಇಷ್ಟು ಜನ ಸ್ಪೆಷಲಿಸ್ಟ್ಸ್ ಇರಲಿಲ್ಲ, ಅರ್ಥೋಪಿಡಿಕ್ಸ್ ಸರ್ಜನ್ ಇರಲಿಲ್ಲ. ನಾನು ಅದನ್ನು ಕೇಳಿರಲಿಲ್ಲ. ಪೇಡಿಯಾಟ್ರಿಕ್ಸ್ ಸರ್ಜನ್, ನ್ಯೂರಾಲಜಿ ಇವುಗಳು ಗೊತ್ತೇ ಇರಲಿಲ್ಲ. ನಾವು ತಿಳಿದದ್ದು ಬ್ರಾಡ್ ಕ್ಲಾಸಿಫಿಕೇಷನ್. ಫಿಸೀಷಿಯನ್ ಒಂದು. ಸರ್ಜನ್ ಇನ್ನೊಂದು. ಐ ಸ್ಪೆಷಲಿಸ್ಟ್. ಇ. ಎನ್. ಟಿ. ಈಗ ಟೀಚಿಂಗ್ ಇನ್‌ಸ್ಟಿಟ್ಯೂಷನ್‌ಗಳು ಸ್ಪೆಷಲಿಸ್ಟ್ ಒಂದಲ್ಲ ಒಂದು ರೀತಿಯಲ್ಲಿ ಹೊಸ ಹೊಸದಾಗಿ ಬರುತ್ತಾ ಇವೆ. ಅದಕ್ಕೆ ಆಧುನಿಕ ಸಲಕರಣೆಗಳು ಬೇಕಾಗುತ್ತವೆ. ಅದಕ್ಕೆ ಬೇಕಾದಂತಹ ಸಲಕರಣೆಗಳನ್ನು ಒದಗಿಸಿಕೊಳ್ಳುವುದು ಎಷ್ಟು ತೊಂದರೆ ಇದೆ ಎಂಬುದನ್ನು ತಾವು ತಿಳಿಯಕೊಳ್ಳಬೇಕು. ಅವುಗಳಿಗೆ ಫಾರಿನ್ ಎಕ್ಸ್‌ಚೇಂಜ್‌ನ ತೊಂದರೆ ಇದೆ ಮತ್ತು ಹಣ ಒದಗಿಸಬೇಕಾದರೆ ಎಷ್ಟು ತೊಂದರೆ ಎಂಬುದು ತಮಗೆ ಗೊತ್ತಿರತಕ್ಕ ವಿಷಯ. ಆದ್ದರಿಂದ ಇಂತಹ ಪರಿಸ್ಥಿತಿಯಲ್ಲೂ ಕೂಡ ನಾವು ನಮ್ಮ ಆಸ್ಪತ್ರೆಗಳಿಗೆ ಸಾಕಾದಷ್ಟು ಸಲಕರಣೆಗಳನ್ನು ಒದಗಿಸಿದ್ದೇವೆ. ಆದರೆ ಎಲ್ಲಾ up-to-date, ಲಿನನ್, ಟಿಂಚರ್ ವಗ್ಯೆರೆ ಎಲ್ಲಾ ಕಾಲದಲ್ಲೂ ಅಕ್ಷಯ ಪಾತ್ರೆ, ಕೇಳಿದ್ದೆಲ್ಲಾ ಇವೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಸಾರಿ ಇಲ್ಲದೇ ಇರಬಹುದು. ಆದ್ದರಿಂದ ತಾವು ಈ ವಿಚಾರಗಳನ್ನೆಲ್ಲಾ ಪಾಯಿಂಟೆಡ್ ಆಗಿ ನನ್ನ ಗಮನಕ್ಕೆ ತಂದದ್ದಕ್ಕಾಗಿ ಹಾಗೂ ನಮ್ಮ ಜನಗಳ ಗಮನಕ್ಕೆ ತಂದದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಎಷ್ಟರ ಮಟ್ಟಿಗೆ ಕೊರತೆ ಇದೆ ಎಂಬು

ದನ್ನು ಜನರಿಗೆ ತಿಳಿಸಬೇಕಾದ್ದು ಅಗತ್ಯ, ಕೇವಲ ಸಾವಿರ ರೂಪಾಯಿಗಳನ್ನು ಔಷಧಿಗೆ ಕೊಟ್ಟು ಸಾವಿರದ ಇನ್ನೂರು ರೂಪಾಯಿಗಳನ್ನು ಲೋಕಲ್ ಡಿಸ್ಪೆನ್ಸರಿಗೆ ಕೊಟ್ಟು, 3 ಸಾವಿರ ರೂಪಾಯಿಗಳನ್ನು ಪ್ರೈಮರಿ ಹೆಲ್ತ್ ಯೂನಿಟ್ಟಿಗೆ ಕೊಟ್ಟು, ದೊಡ್ಡ ಪಟ್ಟಣಗಳಲ್ಲಿರತಕ್ಕ ಸಣ್ಣ ಆಸ್ಪತ್ರೆಗಳಿಗೆ 3750 ರೂಪಾಯಿಗಳನ್ನು ಕೊಟ್ಟು ಇಷ್ಟು ಹಣದಲ್ಲಿ ಬಂದವರಿಗೆಲ್ಲಾ ಲೈಫ್ ಸೇವಿಂಗ್ ಮೆಡಿಸನ್ಸ್ ಕೊಡಿ ಎಂದರೆ ಹೇಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ ? ಇರತಕ್ಕ ವಿಚಾರ ಹೇಳುತ್ತಾ ಇದ್ದೇನೆ. ಅದಕ್ಕೆ ಹಣ ಒದಗಿಸಿ ಕೊಡಿ ಎಂದು ಹೇಳಬಹುದು. ಈ ಒಂದು ಪ್ರಶ್ನೆ ಬರುತ್ತದೆ. ಬಡ್ಜೆಟ್ ಮೇಲೆ ಟೀಕೆ ಮಾಡುವಾಗ ಈ ವಿಷಯವೂ ಕೂಡ ತಮ್ಮ ಗಮನದಲ್ಲಿ ಇರುತ್ತದೆ. ಆದ್ದರಿಂದ ಇದರ ಮೇಲೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಮೈಸೂರು ದೇಶದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಎಲ್ಲಾ ಆಸ್ಪತ್ರೆಗಳಿಗೂ ಒಟ್ಟು ಔಷಧಿಗಾಗಿ ಕೊಡುತ್ತಾ ಇರತಕ್ಕ ಹಣ ಕೇವಲ 10 ಲಕ್ಷ ರೂಪಾಯಿ ಎಂದರೆ ನೀವು ನಂಬಬಹುದು, ನಂಬದೇ ಹೋಗಬಹುದು. ಈ ಹತ್ತು ಲಕ್ಷ ರೂಪಾಯಿನಲ್ಲಿ ಪಟ್ಟಣದಲ್ಲಿರತಕ್ಕ ಜನರಿಗೂ ಕೊಡಬೇಕಾಗುತ್ತದೆ, ಏಕೆಂದರೆ ಗ್ರಾಮಾಂತರದ ಜನರು ಪಟ್ಟಣಕ್ಕೂ ಬರುತ್ತಾರೆ, ಪಟ್ಟಣದಲ್ಲಿರತಕ್ಕ ಆಸ್ಪತ್ರೆಗಳನ್ನು ಕೈಬಿಟ್ಟರೆ, ಎಂದರೆ, ಡಿಸ್ಟ್ರಿಕ್ಟ್ ಮತ್ತು ಸಿಟಿಗಳಲ್ಲಿರತಕ್ಕ ಆಸ್ಪತ್ರೆಗಳನ್ನು ತೆಗೆದು ಹಾಕಿದರೆ, ಇನ್ನು ಉಳಿವಂತಹ ಆಸ್ಪತ್ರೆಗಳಿಗೆ, ಸುಮಾರು ಎರಡು ಕೋಟಿ ಜನರು ಇರತಕ್ಕಂತಹ ಪ್ರದೇಶಕ್ಕೆ ಹತ್ತು ಲಕ್ಷ ರೂಪಾಯಿ ಕೊಟ್ಟರೆ ಈ ದಾವಾಷಾ ಎಷ್ಟಾಗುತ್ತದೆ ? ನೀವೇ ಲೆಕ್ಕಹಾಕಿಕೊಳ್ಳಿ. ಸುಮಾರು ಐದು ಪೈಸೆ ಆಗುತ್ತದೆಯೋ ಏನೋ. ಇಂತಹ ಒಂದು ಸಂದರ್ಭ ಇಟ್ಟುಕೊಂಡು ನಾವು ಬಂದ ಜನರಿಗೆಲ್ಲಾ ತೃಪ್ತಿಕರವಾಗಿ ವೈದ್ಯಕೀಯ ಶುಶ್ರೂಷೆ ಸಲ್ಲಿಸಬೇಕೆಂದರೆ ಅಥವಾ ಯಾರಾದರೂ ಡಾಕ್ಟರುಗಳು ಸಲ್ಲಿಸದೇ ಇದ್ದರೆ ಅವರನ್ನು ಆಕ್ಷೇಪಣೆ ಮಾಡಿದರೆ ಹೇಗೆ ? ಡಾಕ್ಟರು ತನ್ನಲ್ಲಿ ಇಲ್ಲವೇ ಇದ್ದ ಔಷಧವನ್ನು ಇನ್ನೆಲ್ಲಾದರೂ ಕೊಂಡುಕೋ ಎಂದು ಬರೆದು ಕೊಟ್ಟರೆ ಅದಕ್ಕೆ ಆಕ್ಷೇಪಣೆ ಮಾಡಿದರೆ ನಿಮ್ಮ ಮೇಲೆ ದೋಷ ಬರುತ್ತದೆಯೇ ಹೊರತು ನಮ್ಮ ಮೇಲೆ ದೋಷ ಬರುವುದಿಲ್ಲ. ಆದ್ದರಿಂದ ಈಗ ನಾವು ಮೊದಲನೆಯದಾಗಿ ಮಾಡಬೇಕಾದ್ದು ನಮ್ಮ ಕರ್ತವ್ಯ ಏನೆಂದರೆ, ಈ ಹತ್ತು ಲಕ್ಷ ರೂಪಾಯಿ ಇರುವುದನ್ನು ಕೊನೇ ಪಕ್ಷ 20 ಲಕ್ಷ ರೂಪಾಯಿ, ಆದರೂ ಮಾಡುವುದಕ್ಕೆ ಸಾಧ್ಯವಾದರೆ ಎಷ್ಟೋ ಹೆಜ್ಜೆ ಮುಂದೆ ಹೋದಂತೆ ಆಗುತ್ತದೆ, ಎಷ್ಟೋ ಜನರಿಗೆ ವೈದ್ಯಕೀಯ ಸೌಲಭ್ಯ ದೊರಕಿಸಿಕೊಟ್ಟಂತೆ ಆಗುತ್ತದೆ. ಆದ್ದರಿಂದ ಹತ್ತು ಲಕ್ಷ ಅಲ್ಲ 20 ಲಕ್ಷ ರೂಪಾಯಿಗಳಾದರೂ ಕೂಡ ಒದಗಿಸಿಕೊಟ್ಟು ಗ್ರಾಮಾಂತರದಲ್ಲಿರತಕ್ಕ ಈ ಆಸ್ಪತ್ರೆಗಳಿಗೆ ಸಾಮಾನ್ಯವಾಗಿ ಬೇಕಾದಂತಹ ಔಷಧಿಯನ್ನಾದರೂ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂಬ ಭರವಸೆಯನ್ನು ಕೊಡುತ್ತೇನೆ. ಅದು ಹೀಗಿದ್ದರೆ—ಇನ್ನು ಪಟ್ಟಣದಲ್ಲಿರತಕ್ಕ ಆಸ್ಪತ್ರೆಗಳಿಗೆ ಸುಮಾರು 35 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ನಾವು ಯಾರಾದರೂ ಈ ದಿವಸ ಪಟ್ಟಣಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಹೋಗಿ ನೋಡುವುದಾದರೆ, ಅಲ್ಲಿರತಕ್ಕ ಪೇಷಂಟುಗಳಲ್ಲಿ ಬಹು ಜನರು ಗ್ರಾಮಾಂತರ ಪ್ರದೇಶಗಳಿಂದಲೇ ಬಂದಿರತಕ್ಕವರಾಗಿರುತ್ತಾರೆ. ಅದಕ್ಕೆ ಕಾರಣಗಳು ಅನೇಕವಾಗಿರಬಹುದು ; ಅವರು ನರಳುತ್ತಿರುವ ಕಾಯಿಲೆ ದೊಡ್ಡದಿರಬಹುದು. ಆದುದರಿಂದ ಈ ಆಸ್ಪತ್ರೆಗಳಿಗೂ ಕೂಡ ಕೊಡತಕ್ಕ ಹಣ ಸಾಲದು. ಆದರೆ ಇವುಗಳಿಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕು ಎಂಬುದನ್ನು ನಾನೂ ಕೂಡ ಒಪ್ಪುತ್ತೇನೆ. ಆದರೆ ಹಣದ್ದೇ ಕೊರತೆ.

ಇನ್ನು ಈ ಆಸ್ಪತ್ರೆಗಳಿಗೆ ಒದಗಿಸಲಾಗುತ್ತಿರುವ ಡಯಟ್ಟಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊದಲು ಇದನ್ನು ಕಂಟ್ರಾಕ್ಟರ ಮೂಲಕ ನಡೆಸಲಾಗುತ್ತಿತ್ತು. ಈಗ ಅದನ್ನು ಬದಲಾಯಿಸಲಾಗಿದೆ. ಈಗ ಡಯಟ್ ಸರಬರಾಯಿಯನ್ನು ಒಂದು ಹೋಲ್‌ಸೇಲ್ ಕೋಆಪರೇಟೀವ್ ಸೊಸೈಟಿಗೆ ಒಪ್ಪಿಸಲಾಗಿದೆ. ಮಂಗಳೂರಿನಲ್ಲೂ ಸಹಾ ಈ ಡಯಟ್ ಸರಬರಾಯಿ ಸರಿಯಾಗಿ ಆಗುತ್ತಿಲ್ಲ ಎಂಬುದಾಗಿ ಹೇಳಿದ್ದಾರೆ. ಅದನ್ನು ನಾನು ವಿಚಾರಮಾಡುತ್ತೇನೆ. . ...

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಆಹಾರ ಸರಬರಾಯಿಯನ್ನು ಕೋಅಪರೇಟೀವ್ ಸೊಸೈಟಿಯವರೇ ಮಾಡುತ್ತಿರಬಹುದು. ಆದರೆ ಅವರು ಅಲ್ಲಿಗೆ ಸರಬರಾಯಿ ಮಾಡುತ್ತಿರುವ ಅಕ್ಕಿ ಏನಿದೆ ಅದನ್ನು ಅನ್ನ ಮಾಡಿದರೆ ಬರೀ ಗಂಟುಗಂಟಾಗುತ್ತದೆ, ರೋಗಿಗಳ ಪಾಡು ಹಾಗಿರಲಿ, ಅದನ್ನು ಆರೋಗ್ಯವಂತರಾಗಿರತಕ್ಕವರು ತಿಂದರೂ ಅದು ಗಂಟಲಿನಲ್ಲೇ ಇಳಿಯುತ್ತಿಲ್ಲ. ಅದು ಕೊಟ್ಟಣದ ಅಕ್ಕಿಯಲ್ಲ. ಈ ವಿಚಾರವನ್ನು ನಾನು ಮಾನ್ಯ ಆಹಾರ ಸಚಿವರ ಗಮನಕ್ಕೂ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಕುಪಿತರಾಗದಿದ್ದರೆ, ನಾನು ಅವರಿಗೆ ಒಂದು ವಿಷಯವನ್ನು ತಿಳಿಸಬೇಕೆಂದಿದ್ದೇನೆ : ಆಸ್ಪತ್ರೆಗೆ ಡಯಟ್ಟನ್ನು ಒದಗಿಸತಕ್ಕ ಕೆಲಸವನ್ನು ಒಂದು

(ಶ್ರೀ ಕೆ. ಪುಟ್ಟಸ್ವಾಮಿ)

ಮಹಿಳೆಯರಿಂದಲೇ ನಡೆಸಲ್ಪಡುತ್ತಿರುವ ಹೋಲ್‌ಸೇಲ್ ಕೋಆಪರೇಟೀವ್ ಸೊಸೈಟಿಗೆ ಒಪ್ಪಿಸಿದೆ. ಆ ಸೊಸೈಟಿಗಳಲ್ಲಿ ನಮ್ಮದು 90 ಇದ್ದರೆ ನಿಮ್ಮದು 10 ಇದೆ. ಆದರೆ ಈ ವಿಚಾರ ಇದುವರೆಗೂ ನನ್ನ ಗಮನಕ್ಕೇನೂ ಬಂದಿರಲಿಲ್ಲ. ಈಗ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇನೆ. ನಾವು ಈ ದಿವಸ ಆ ಹೋಲ್‌ಸೇಲ್ ಕೋಆಪರೇಟೀವ್ ಸೊಸೈಟಿಯವರಿಗೆ ಬತ್ತವನ್ನು ಸರ್ಕಾರದ ಪರವಾಗಿ ಕೊಂಡು ಸಂಗ್ರಹಣೆಮಾಡಿ ಅದನ್ನು ಕುಟ್ಟಿ ಅಕ್ಕಿ ಮಾಡಿ ನೇರವಾಗಿ ಆಸ್ಪತ್ರೆಗಳಿಗೆ ಸಾಗಿಸುವುದಕ್ಕೆ ನಮಗೆ ಅವಕಾಶ ಮಾಡಿ ಕೊಡಬೇಕು ಎಂಬುದಾಗಿ ಅವರೊಂದಿಗೆ ನಾವು ಒಂದು ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ಆದರೆ ಇನ್ನು ಮುಂದೆ ಆಸ್ಪತ್ರೆಗಳಿಗೆ ಸಾಧ್ಯವಾದ ಮಟ್ಟಿಗೂ ಒಳ್ಳೆಯ ಅಕ್ಕಿಯನ್ನು ಒದಗಿಸು ವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಇನ್ನು ಆಸ್ಪತ್ರೆಗಳಿಗೆ ಒದಗಿಸತಕ್ಕ ಬಟ್ಟೆ ಹಾಗೂ ಲಿನನ್ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಹಿಂದೊಮ್ಮೆ ಶ್ರೀಮತಿ ನಾಗರತ್ನಮ್ಮನವರು ಈ ವಿಚಾರವಾಗಿ ಬಹಳ ಕಟುವಾಗೇ ಮಾತ ನಾಡಿದ್ದರು. ಆದರೆ ಈಗಲೂ ಅವರ ಭಾಷಣದ ಆ ಹರಿತ ಇನ್ನೂ ಹೋಗಿಲ್ಲ. ಆಸ್ಪತ್ರೆಗಳಿಗೆ ನಾನೂ ಕೂಡ ಹೋಗಿದ್ದೇನೆ, ಅಲ್ಲಿಯ ಪರಿಸ್ಥಿತಿಯನ್ನೂ ನೋಡಿದ್ದೇನೆ. ಈ ದಿವಸ ಅಲ್ಲಿ ರೋಗಿ ಗಳ ಬೆಡ್ ಮೇಲೆ ಹಾಸುವುದಕ್ಕೆ ಖಾದಿ ಬಟ್ಟೆಯನ್ನು ಕೊಡಲಾಗುತ್ತಿದೆ. ಅದರಲ್ಲಿ ಗುಣಾವಗುಣ ಗಳು ಇರುತ್ತವೆ. ಬಟ್ಟೆಯ ಮೇಲೆ ಬೀಳತಕ್ಕ ರಕ್ತವನ್ನು ಅದು ಬೇಗ ಹೀರಿಕೊಳ್ಳುತ್ತದೆ ಎಂದು ಅದನ್ನು ಸರಬರಾಯಿ ಮಾಡಲಾಗುತ್ತಿದೆ. ನಾನೂ ಖಾದಿಯನ್ನು ಬಹಳ ವರ್ಷಗಳಿಂದಲೂ ಹಾಕುತ್ತಿದ್ದೇನೆ. ನಾನೂ ಒಬ್ಬ ಖಾದಿ ಪ್ರೇಮಿಯೇನೋ ಹೌದು. ನಾನು ಇದರ ವಿಚಾರವಾಗಿ ಇತ್ತೀಚೆಗೆ ಆ ಖಾದಿ ಮತ್ತು ವಿಲೇಜ್ ಇಂಡಸ್ಟ್ರಿಯ ಛೇರ್ಮನ್ನರೊಡನೆ ಪ್ರಸ್ತಾಪಮಾಡಿದೆನು. ಅವರು ಬಹಳ ಉತ್ತಮ ದರ್ಜೆಯ ಖಾದಿಯನ್ನೇ ಇಲ್ಲಿಗೆ ಸರಬರಾಯಿ ಮಾಡುತ್ತಿರುವುದಾಗಿ ತಿಳಿಸಿದರು. ಆದರೂ ಮಾನ್ಯ ಸದಸ್ಯರು ಅದು ಚೆನ್ನಾಗಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಆಸ್ಪತ್ರೆಗಳಿಗೆ ಉತ್ತಮ ದರ್ಜೆಯ ಲಿನನ್ ಮತ್ತು ಬಟ್ಟೆಯನ್ನು ಒದಗಿಸಬೇಕಾದ್ದು ಅತ್ಯಗತ್ಯ. ಅದನ್ನು ಒದಗಿ ಸುವುದಕ್ಕೆ ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇನೆ.

ಇನ್ನು ಎಲೆಕ್ಟ್ರಿಕ್ ಲಾಂಡ್ರಿಯ ವಿಚಾರವನ್ನು ಹೇಳಿದ್ದಾರೆ. ಆ ಲಾಂಡ್ರಿಯ ಯಂತ್ರ ಕೆಟ್ಟು ಹೋಗಿ ಇಲ್ಲಿಗೆ 10 ವರ್ಷಗಳ ಮೇಲಾಯಿತು. ಆಗಿನಿಂದಲೂ ಅದು ನಿಂತು ಹೋಗಿದೆ, ಕೆಲಸ ಮಾಡುತ್ತಿಲ್ಲ. ಆದರೆ ಈ ವಿಚಾರಗಳನ್ನೆಲ್ಲಾ ಒಂದು ಸಮಗ್ರದೃಷ್ಟಿಯಿಂದ ಪರಿಶೀಲನೆ ಮಾಡಿದರೆ ಒಳ್ಳೆಯದು. ಈ ದಿವಸ ಒಂದು ಹಸುವನ್ನು ಕೊಂಡುಕೊಳ್ಳಬೇಕಾದರೆ ಅದನ್ನು ಕೊಳ್ಳುವುದೇನೋ ಸುಲಭ. ಆದರೆ ಅದನ್ನು ಕೊಳ್ಳುವುದಕ್ಕೆ ಮುಂಚೆ ಅದನ್ನು ಎಲ್ಲಿ ಕಟ್ಟಬೇಕು, ಅದಕ್ಕೆ ಹುಲ್ಲನ್ನು ಎಲ್ಲಿಂದ ತರಬೇಕು, ಅದಕ್ಕೆ ಹುಲ್ಲು ನೀರನ್ನು ಕೊಡಲು ಒಬ್ಬ ಮನುಷ್ಯ ಬೇಕು—ಇಷ್ಟೆಲ್ಲವನ್ನೂ ಆಲೋಚನೆ ಮಾಡಿದ ನಂತರ ಹಸುವನ್ನು ಕೊಂಡುಕೊಳ್ಳಬೇಕು. ಅದನ್ನು ಮಾಡದೆ ಸುಮ್ಮನೆ ಹಸುವನ್ನು ಕೊಂಡು ತಂದರೆ ಅದನ್ನು ಡ್ರಾಯಿಂಗ್ ರೂಮಿನಲ್ಲಿ ಕಟ್ಟುವುದಕ್ಕೆ ಆಗುತ್ತದೆಯೇನು ? ಅದಕ್ಕೆ ಹುಲ್ಲು ನೀರನ್ನು ಹಾಕಲು ಒಬ್ಬ ಆಳು ಬೇಡವೇ ? ಈ ವಿಚಾರ ಹೋದ ವರ್ಷವೇ ಬಹಳ ವಿಪುಲವಾಗಿ ಚರ್ಚೆಯಾಗಿದೆ. ಈ ವಿಚಾರಗಳಲ್ಲಿ ನಾನೂ ಕೂಡ ನಿಮ್ಮಷ್ಟೇ ಲೇ ಮ್ಯಾನ್. ಹಿಂದೆ ಈ ಎಲೆಕ್ಟ್ರಿಕ್ ಲಾಂಡ್ರಿಯ ಬಗ್ಗೆ ಒಂದು ಅಡ್ವರ್‌ಟೈಜ್‌ಮೆಂಟನ್ನು ಮಾಡಿದ್ದರು. ಆಗ ಇದರ ಸಂಪೂರ್ಣ ಮಾಹಿತಿ ಯಾರಿಗೂ ಇರಲಿಲ್ಲ. ಒಂದು ಎಲೆಕ್ಟ್ರಿಕ್ ಲಾಂಡ್ರಿ ಎಂದರೆ ಅದಕ್ಕೇನೇನು ಸಾಮಾನುಗಳಿರುತ್ತವೆ, ಅದನ್ನು ನೋಡಿಕೊಳ್ಳಲು ಎಂಥಾ ಜನರು ಇರಬೇಕು ಎಂಬುದಿನ್ನೂ ಆಗ ಸರಿಯಾಗಿ ಅವರಿಗೆ ಗೊತ್ತಿರಲಿಲ್ಲ. ಇತ್ತೀಚೆಗೆ ತೊಂದರೆಗಳನ್ನು ಅನುಭವಿಸಿದ ಮೇಲೆ ನಾವು ಹೊಸ ಹೊಸ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದೇವೆ. ಈಗ ಒಳ್ಳೆಯ ಸಾಮಾನುಗಳನ್ನು ಹಾಕಿರತಕ್ಕ ಲಾಂಡ್ರಿಯನ್ನು ಕೊಂಡು ಅದನ್ನು ಒಂದು ಕಡೆ ಇಡಲಾಗಿದೆ. ಇನ್ನು ಮುಂದೆ ಇಂಥಾ ತಪ್ಪುಗಳಾಗುವುದಕ್ಕೆ ಅವಕಾಶವಿಲ್ಲ. ಈಗ ಕೆಟ್ಟಿರತಕ್ಕ ಯಂತ್ರವನ್ನೂ ಕೂಡ ಸಾಧ್ಯವಾದಷ್ಟೂ ರಿಪೇರಿಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇದೇ ರೀತಿಯಾಗಿ ಆ ಎಕ್ಸರೇ ವಿಚಾರದಲ್ಲೂ ಮಾತನಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳಲ್ಲಿ ಕೆಲವನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಎಷ್ಟೋವೇಳೆ ಈ ಎಕ್ಸ್‌ರೇ ಇದ್ದರೆ ಫಿಲಂ ಇರುವುದಿಲ್ಲ ; ಫಿಲಂ ಇದ್ದರೂ ಅದು ಸಾಕಾಗುವಷ್ಟು ಇರುವುದಿಲ್ಲ. ಇದೆಲ್ಲ ಇರತಕ್ಕ ವಿಚಾರಗಳೇ. ಆದರೆ ಯಾರೋ ಒಬ್ಬ ಮಾನ್ಯ ಸದಸ್ಯರು ಸರ್ಕಾರಿ ಆಸ್ಪತ್ರೆಯಲ್ಲಿರುವ ಎಕ್ಸ್‌ರೇ ಕೆಲಸ ಮಾಡುತ್ತಿಲ್ಲ, ಪ್ರೈವೇಟ್ ಷಾಪಿನವರು ಇಟ್ಟುಕೊಂಡಿರತಕ್ಕ ಎಕ್ಸ್‌ರೇ ಕೆಲಸ ಮಾಡುತ್ತಿದೆ, ಇದನ್ನು ನೋಡಿದರೆ ಅವರಿಗೂ ಇವರಿಗೂ ಏನೋ ಒಂದು ಅಂಡರ್‌ಸ್ಟ್ಯಾಂಡಿಂಗ್

ಇರುವಂತೆ ಕಂಡುಬರುತ್ತಿದೆ ಎಂಬುದಾಗಿ ಹೇಳಿದ್ದಾರೆ. ಆದರೆ ನಾನು ಅವರು ಹೇಳಿದ್ದನ್ನು ಒಪ್ಪುವುದಿಲ್ಲ. ಒಂದು ವೇಳೆ ಅಂಥಾದ್ದಿದ್ದರೂ ಅದರಲ್ಲಿ ಆಶ್ಚರ್ಯವೇನೂ ಇರುವುದಿಲ್ಲ. ಆದರೆ ತಾವು ಭಾವಿಸಿರುವುದು ತಾವೆಲ್ಲರೂ ಸಾಮಾನ್ಯ ಮನುಷ್ಯರು, ಮುಗ್ಗರಿಸತಕ್ಕವರು, ತಪ್ಪನ್ನು ಮಾಡತಕ್ಕವರು ಎಂತಲೂ ಇತ್ತಕಡೆ ಕುಳಿತಿರತಕ್ಕವರು ನಾವು ನೇರವಾಗಿ ಆ ಅಮರಾವತಿಯಿಂದ ಇಳಿದು ಬಂದಿರತಕ್ಕವರು, ನಾವು ಮಾತ್ರ ತಪ್ಪನ್ನು ಮಾಡತಕ್ಕವರೇ ಅಲ್ಲ, ಮುಗ್ಗರಿಸತಕ್ಕವರೂ ಅಲ್ಲ ಎಂದೇನು ಭಾವಿಸಿ ಮಾತನಾಡಿದ್ದೀರಿ ಅದು ಸರಿಯಲ್ಲ. ನಾವೂ ನಿಮ್ಮ ಅಣ್ಣತಮ್ಮಂದಿರು ; ನಿಮ್ಮ ಬಂಧುಗಳು. ನಾವೂ ಮುಗ್ಗರಿಸುತ್ತೇವೆ. ಆದರೆ ತಾವು ಬಚ್ಚಲ ಮನೆಯನ್ನು ನೋಡಿ ಮನೆಯಲ್ಲಾ ಹೀಗೆ ಎಂದು ಭಾವಿಸುವುದು ಸರಿಯಲ್ಲ. ಆದರೆ ಆ ಮನೆಯನ್ನು ಆ ಗೃಹಿಣಿ ಎಷ್ಟು ಚೊಕ್ಕಟವಾಗಿ ಒಪ್ಪ ಓರಣಗಳಿಂದ ಇಟ್ಟುಕೊಂಡಿದ್ದಾಳೆ ಎಂಬುದನ್ನು ನೋಡದೆ ಬಚ್ಚಲು ಮನೆಯನ್ನು ನೋಡಿ ಅವರ ಶಯನ ಗೃಹವೂ ಹೀಗೇ ಇದೆ, ಅವರ ದೇವರ ಮನೆಯೂ ಹೀಗೇ ಇದೆ, ಅವರ ಊಟದ ಮನೆಯೂ ಹೀಗೇ ಇದೆ ಎನ್ನುವುದು ಸರಿಯಲ್ಲ, ನ್ಯಾಯವಲ್ಲ.

ಶ್ರೀ ಎಸ್. ಶಿವಪ್ಪ.—ನಾವು ಹೇಳುತ್ತಿರುವುದು ದೇವರನ್ನು ಬಚ್ಚಲು ಮನೆಯಲ್ಲಿ ಇಡಬೇಡಿ ಎಂದು.

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ ದೇವರನ್ನು ಬಚ್ಚಲು ಮನೆಯಲ್ಲಿಡತಕ್ಕವನನ್ನು ತಾವು ಹೆಡ್ಡನೆಂದು ಕರೆದರೆ ನಾನು ಅವನನ್ನು ಮೂರ್ಖನೆಂದು ಕರೆಯುತ್ತೇನೆ.

ಇನ್ನು ವಾಣೀವಿಲಾಸ ಆಸ್ಪತ್ರೆಯಲ್ಲೋ ಏನೋ stinking smell ಎಂದು ಹೇಳಿದರು....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಲ್ಲ, ಬೌರಿಂಗ್ ಆಸ್ಪತ್ರೆಯಲ್ಲಿ......

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಅಲ್ಲಿಗೂ ಹೋಗಿದ್ದೆನು. ಅಲ್ಲಿ ನನಗೇನೂ ಆ ಸ್ಟಿಂಕಿಂಗ್ ಇದ್ದಹಾಗೆ ಕಂಡುಬರಲಿಲ್ಲ......

ಶ್ರೀಮತಿ ಕೆ. ಎಸ್ ನಾಗರತ್ನಮ್ಮ.—ತಾವು ಈಗ ನನ್ನ ಜೊತೆಯಲ್ಲಿ ಬನ್ನಿ, ತೋರಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಈಗಲೇ ಬೇಕಾದರೂ ಬರುತ್ತೇನೆ......

Mr. SPEAKER.—I will not allow the Minister to go now.

(*Laughter.*)

ಶ್ರೀ ಕೆ. ಪುಟ್ಟಸ್ವಾಮಿ.—ನಾನು ವಾಣೀವಿಲಾಸ ಆಸ್ಪತ್ರೆಗೆ ಹೋಗಿದ್ದೆ. ನನ್ನನ್ನೇನೂ ಅವರು ಸ್ವಾಗತ ಮಾಡಿರಲಿಲ್ಲ. ಮಂತ್ರಿಗಳು ಬರುತ್ತಾರೆಂದು ಹೇಳಿದ್ದರಿಂದ ಎಲ್ಲವನ್ನೂ ಸ್ವಚ್ಛವಾಗಿ ಇಟ್ಟಿದ್ದರು ಎಂದು ಹೇಳುವ ಹಾಗಿಲ್ಲ. ಖಂಡಿತವಾಗಿ ಹೋಗಿ ಅಲ್ಲಿ ನೋಡಿ ಬಂದಿದ್ದೇನೆ. ನಾನು ನೋಡಿದ ಆಸ್ಪತ್ರೆಗಳಲ್ಲಿ ಅದರಲ್ಲಿಯೂ ಹೆರಿಗೆ ಆಸ್ಪತ್ರೆಗಳಷ್ಟು ಸ್ವಚ್ಛವಾಗಿ, ಶುಭ್ರವಾಗಿರತಕ್ಕ ಆಸ್ಪತ್ರೆಗಳನ್ನು ನೋಡಲಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿಲ್ಲವೆಂದು ನಾನು ಹೇಳಬಹುದು. ಮಾನ್ಯ ಸದಸ್ಯರು ಯಾವ ವಾರ್ಡಿನಲ್ಲಿ ನೋಡಿದರೋ ನನಗೆ ಗೊತ್ತಿಲ್ಲ. ಕೆಲವು ವಾರ್ಡುಗಳಲ್ಲಿ ಅಂತಹ ಅವ್ಯವಸ್ಥೆ ಇರಬಹುದು, ಅಲ್ಲಿಗೆ ಬರತಕ್ಕ ಕೆಲವರು ಬರ್ನ್ಸ್ ಕೇಸ್‌ಗಳ ವಾರ್ಡ್ ಹತ್ತಿರ ಹೋದರೆ ಆ ಕಡೆಯಲ್ಲಿ ಒಂದು ವಿಧವಾದ ಔಷಧವನ್ನು ಹಾಕಿರುತ್ತಾರೆ........

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಲ್ಲಿ ನೀರೇ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ತಾಯಿ ಹೃದಯ ಏನು ಮಾಡುವುದು ?

ಶ್ರೀ ಎಸ್. ಚನ್ನಯ್ಯ.—ಅದು ಹೇಗೆ ತಾಯಿ ಹೃದಯವೆಂದು ಹೇಳುತ್ತೀರಿ ! ಅವರಿಗೆ ಮಕ್ಕಳಾಗಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಆಸ್ಪತ್ರೆಗೆ ಹೋದಾಗ ನ್ಯಾಯವಾಗಿ ಕರುಳು ಕರಗುತ್ತದೆ. ಮಾನ್ಯ ಸದಸ್ಯರು ಆ ವಿಚಾರವನ್ನು ಎತ್ತಿದ್ದರಿಂದ ಹೇಳಿದೆ.

ಇನ್ನು ಲಂಚ ರುಷುವತ್ತುಗಳ ವಿಷಯ ಡಾಕ್ಟರುಗಳಿಗೆ ತಮಗೆ ಗೊತ್ತಿರುವ ಹಾಗೆ ಲಂಚ ಯಾವುದು, ರುಷುವತ್ತು ಯಾವುದು, ಫೀಸ್ ಯಾವುದು ಗೊತ್ತಿರುವುದಿಲ್ಲ. ಖಾಸಗಿಯಾಗಿ ಆಸ್ಪತ್ರೆ ವೇಳೆ ಬಿಟ್ಟು ಅವರು ಯಾರ ಮನೆಗಾದರೂ ಹೋಗಿ ರೋಗಿಯನ್ನು ನೋಡಿದರೆ ಸಂಭಾವನೆ ತೆಗೆದುಕೊಳ್ಳುವುದು ಉಂಟು. ಕೆಲವು ಸಂದರ್ಭಗಳಲ್ಲಿ ಆಸ್ಪತ್ರೆ ಹತ್ತಿರವೇ ವಾಸ ಇರುತ್ತಾರೆ. ಕೇಂದ್ರದಲ್ಲಿ ನಾನ್ ಪ್ರಾಕ್ಟಿಸಿಂಗ್ ಅಲೋಯನ್ಸ್ ಎಂಬುದನ್ನು ಕೊಡುತ್ತಾರೆಂದು ಕೆಲವರು ಹೇಳಿದರು. ಅದಷ್ಟು ಜಾಗ್ರತೆ ಇಲ್ಲಿಯೂ ಅಲ್ಲಿ ಕೊಡುವ ಹಾಗೆ ಡಾಕ್ಟರುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ನಾನ್

(ಶ್ರೀ ಕೆ. ಪುಟ್ಟಸ್ವಾಮಿ)

ಪ್ರ್ಯಾಕ್ಟಿಸಿಂಗ್ ಅಲೋಯನ್ಸ್ ಕೊಟ್ಟು ಅವರು ಇನ್ನು ಮುಂದೆ ಪ್ರ್ಯಾಕ್ಟೀಸ್ ಮಾಡಬಾರದು ಎಂಬ ವ್ಯವಸ್ಥೆಯನ್ನು ಮಾಡಬೇಕೆಂಬ ಮಾನಸ್ಸು ನನಗಿದೆ. ಆದರೆ ಅದು ಎಷ್ಟರಮಟ್ಟಿಗೆ ನಡೆಯುತ್ತದೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಸ್. ಚನ್ನಯ್ಯ.—ಆ ವ್ಯವಸ್ಥೆಯಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಆಸ್ಪತ್ರೆಗಳು ಇಷ್ಟು ಇದ್ದರೂ ಎಷ್ಟೋ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಈಗ ಮಾಡಿರತಕ್ಕ ತೀರ್ಮಾನ ತದ್ವಿರುದ್ಧವಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಡಾಕ್ಟರುಗಳು ಹೊರಗಡೆ ಹೋಗಿ ಟ್ರೀಟ್ ಮಾಡಿದರೆ ನೀವು ಯಾರೂ ಅವರು ತೆಗೆದುಕೊಳ್ಳುವ ಸಂಭಾವನೆಯನ್ನು ಲಂಚರುಷುವತ್ತು ಎಂದು ಹೇಳುವುದಿಲ್ಲ. ಯಾರೇ ವೈದ್ಯರು ಸರ್ಕಾರಿ ನೌಕರಿಯಲ್ಲಿರುವವರು ಆಸ್ಪತ್ರೆ ನಡೆಯುತ್ತಿರುವ ಕಾಲದಲ್ಲಿ ಆಸ್ಪತ್ರೆಯಲ್ಲಿ ಮಾಡತಕ್ಕ ಚಿಕಿತ್ಸೆಗೆ ಲಂಚರುಷುವತ್ತು ಎಂದು ಪರಿಗಣಿಸಿ ಏನಾದರೂ ಸಂಭಾವನೆ ತೆಗೆದುಕೊಂಡರೆ ಅಂಥವರನ್ನು ಕೆಲಸದಲ್ಲಿಟ್ಟುಕೊಳ್ಳುವುದಿಲ್ಲ. ಡಾಕ್ಟರುಗಳಾಗಲೀ ಅಥವಾ ಅಧಿಕಾರಿಗಳು ಯಾರೇ ಆಗಿರಲಿ, ಅವರು ಎಂತಹ ಪರಿಣಿತರೇ ಆಗಿರಲಿ, ಸ್ಪೆಷಲಿಸ್ಟ್ ಆಗಿರಲಿ ಅಂತಹವರನ್ನೂ ಸಹ ಸರ್ಕಾರದವರು ಸುಮ್ಮನೆ ಬಿಡುವ ಅಗತ್ಯವಿಲ್ಲ. ನಮಗೆ ಎಷ್ಟೇ ಕಷ್ಟವಾದರೂ ಕೂಡ ನಾವು ನಮ್ಮ ಗುರಿಯನ್ನು ಸಾಧಿಸರೇ ಬೇಕಾಗುತ್ತದೆ. ಸದಸ್ಯರು ಇಲ್ಲಿ ಮಾತನಾಡಿದ ವೇಳೆಯಲ್ಲಿ ನಾನು ಎಲ್ಲ ಭಾಷಣಗಳನ್ನು ಕೇಳಿದಾಗ ಜನರು ಇಷ್ಟೊಂದು ಅಸಂಸ್ಕೃತರು ಆಗಿದ್ದಾರಲ್ಲಾ ಎಂದು ನನಗನ್ನಿಸಿತು. ಡಾಕ್ಟರುಗಳಿಗೆ ಸಾಮಾಜಿಕ ಭಾವನೆ ಇಲ್ಲ, ದೇಶಾಭಿಮಾನವಿಲ್ಲ, ಜನರ ಮೇಲೆ ಅಭಿಮಾನವಿಲ್ಲವೆಂದು ಸದಸ್ಯರಲ್ಲಿ ಕೆಲವರು ಹೇಳಿದ ಮೇಲೆ ನಿಜವಾಗಿ ಅವರು ಇಷ್ಟು ತೀರ ಕಡಮೆ ಮಟ್ಟದಲ್ಲಿ ಇದ್ದಾರೆಯೇ ಎಂದು ನನಗನ್ನಿಸಿತು. ಆದರೆ ಎಲ್ಲರ ಭಾಷಣಗಳನ್ನು ಪೂರ್ತಿ ಕೇಳಿದಾಗ ನನಗೆ ಒಂದು ಸಮಾಧಾನವಾಯಿತು. ಇದಕ್ಕೆ ಒಂದು ಕಥೆ ಇದೆ. ಅದು ಐದು ಜನ ಅಂಧರು ಒಂದು ಆನೆಯ ರೂಪವನ್ನು ನೋಡಿ ವರ್ಣಿಸಿದ್ದು. ಒಬ್ಬ ಕಾಲು ಮುಟ್ಟಿ ನೋಡಿ ಕಂಬದಂತಿದೆಯೆಂದು ಹೇಳಿದ, ಇನ್ನೊಬ್ಬ ಕಿವಿ ಮುಟ್ಟಿ ನೋಡಿ ಮರದಂತಿದೆಯೆಂದು ಹೇಳಿದ—ಹೀಗೆ ಇತರ ಮೂವರು ಅಂಧರು ತಮಗೆ ತೋಚಿದಂತೆ ಹೇಳುತ್ತಾ ಬಂದರು. ಹಾಗೆ ಮನುಷ್ಯನ ಒಂದು ವರ್ಗವಾದ ವೈದ್ಯ ವರ್ಗವನ್ನು ಉದ್ದೇಶಿಸಿ ಮಾತನಾಡುವ ಕಾಲದಲ್ಲಿ ಮಾನ್ಯ ಸದಸ್ಯರಲ್ಲಿ ಬೇರೆ ಬೇರೆ ಅಭಿಪ್ರಾಯಗಳು ವ್ಯಕ್ತವಾದುವು. ಆಸ್ಪತ್ರೆಗಳಲ್ಲ ಸಾಕಷ್ಟು ಒಳ್ಳೆಯವರೂ ಇದ್ದಾರೆ, ತಪ್ಪು ಮಾಡುವವರೂ ಇದ್ದಾರೆಂಬುದು ಗೊತ್ತಾಗುತ್ತದೆ.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಮಂತ್ರಿಗಳು ಅಂಧರು ಮುಟ್ಟಿ ನೋಡಿದ ಆನೆಯ ಕಥೆಯನ್ನು ಇಲ್ಲಿ ಹೇಳಿರುವುದು ಉಚಿತವಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ದುಗ್ಗಪ್ಪನವರು ಉಪಾಧ್ಯಾಯರಾಗಿದ್ದರು. ಬಹುಶಃ ಅವರು ವಿದ್ಯಾರ್ಥಿಗಳಿಗೆ ಪಾಠ ಹೇಳಿರಬೇಕು. ಇಲ್ಲಿ ಯಾವಾಗಲೂ ಅಂತಹ ಅಂಶಗಳನ್ನು ಅಷ್ಟು ಲಿಟರಲ್ಲಾಗಿ ತೆಗೆದುಕೊಳ್ಳಕೂಡದು. ಟಿಪ್ಪು ಟೈಗರ್ ಆಫ್ ಮೈಸೂರು ಎಂಬುದಾಗಿ ಹೇಳಿದರೆ ಅದು ಎಲ್ಲರಿಗೂ ಗೊತ್ತು. ಲಿಟರಲ್ ಆಗಿ ತೆಗೆದುಕೊಳ್ಳಬಾರದು. ಅಂಧರು ಮುಟ್ಟಿದ ಆನೆಯ ಕಥೆಯನ್ನು ಹೇಳಿ ಮಾನ್ಯ ಸದಸ್ಯರನ್ನು ಅಂಧರು ಎಂದು ಸಚಿವ ಹೇಳಿದನೆಂದು ಆಗ್ರಹ ಬೇಡಿ. ಅದು ಎಷ್ಟರಮಟ್ಟಿಗೆ ಅನ್ವಯವಾಗುತ್ತದೋ ಅಷ್ಟರಮಟ್ಟಿಗೆ ತೆಗೆದುಕೊಳ್ಳಿ. ನಿನ್ನೆಯಿಂದ ಕೆಲವು ಮಾನ್ಯ ಸದಸ್ಯರು ಬಹಳ ಕಟುವಾಗಿ ಹೇಳಿದ್ದಾರೆ. ಅವರು ಹೇಳಿದ್ದನ್ನೆಲ್ಲಾ ಕೇಳಿದ್ದೇನೆ. ನಾನು ಯಾರನ್ನೂ ಅಡಚಣೆ ಮಾಡಿಲ್ಲ. ನಮ್ಮ ಇಲಾಖೆಯ ಬಗ್ಗೆ ಏನೇನು ಹೇಳಬೇಕೋ ಎಲ್ಲವನ್ನೂ ಹೇಳಿದ್ದಾರೆ. ಮಾತನಾಡುವವರು ಇನ್ನೂ ಇದ್ದರೆ ಮಾತನಾಡಲಿ. ನಿಮ್ಮ ಸರದಿ ಬಂದಾಗ ನೀವು ಹೇಳಿದ್ದೀರಿ. ನನ್ನ ಸರದಿ ಬಂದಾಗ ಅವರು ದೇವರ ಹಾಗೆ ಕುಳಿತಿರುತ್ತಾರೆಂದು ನಾನು ನಂಬಿದ್ದೇನೆ. ಅದು ಒಂದು ಒಳ್ಳೆಯ ಸಂಪ್ರದಾಯವೆಂದು ನಾವೆಲ್ಲರೂ ಒಪ್ಪಿದ್ದೇವೆ. ಈ ಸಭೆಯಲ್ಲಿ ಒಬ್ಬ ಅಧಿಕಾರಿಯನ್ನು ಸದಸ್ಯರು ಪ್ರಶಂಸೆ ಮಾಡುವುದಾಗಲೀ, ಅವನ ಬಗ್ಗೆ ಪ್ರಶಂಸಾಪತ್ರವನ್ನು ಬರೆಯುವುದಾಗಲೀ, ಅಥವಾ ಅವನ ದಕ್ಷತೆ, ಸಾಮರ್ಥ್ಯದ ವಿಚಾರವಾಗಿ ಸಚಿವನೇ ಸರ್ಕಾರದ ಪರವಾಗಿ ಪುಂಖಾನುಪುಂಖವಾಗಿ ಹೊಗಳುವುದಾಗಲೀ ಸರಿಯಾದುದಲ್ಲ. ಸತ್ಸಂಪ್ರದಾಯವನ್ನು ಮೀರಬಾರದು ಎಂದು ಹೇಳುವವನಲ್ಲಿ ನಾನೂ ಒಬ್ಬ. ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳ ಬಗ್ಗೆ ಸ್ವಲ್ಪಮಟ್ಟಿಗಾದರೂ ಅದಕ್ಕೆ ತಕ್ಕ ಹಾಗೆ ಎಷ್ಟು ಸಾಮಾನ್ಯ ರೀತಿಯಲ್ಲಿ ಉತ್ತರ ಕೊಡುವುದಕ್ಕೆ ಸಾಧ್ಯವೋ ಅಷ್ಟು ಕೊಡದಿದ್ದರೆ ನಾನು ಕರ್ತವ್ಯ ಲೋಪ ಮಾಡಿದಂತಾಗುತ್ತದೆ.

ತಮಗೆಲ್ಲರಿಗೂ ಗೊತ್ತಿರುವ ಹಾಗೆ ಈ ಒಂದು ಇಲಾಖೆಯ ಮುಖ್ಯಸ್ಥರಾಗಿರುವವರು ಸಾಕಷ್ಟು ದಕ್ಷತೆಯುಳ್ಳವರು. ಈ ಸಭಾ ಸದಸ್ಯರಾಗದೇ ಇರುವ ಅಂತಹ ಅಧಿಕಾರಿಯ ಮೇಲೆ ಸಭಾ ಸದಸ್ಯರು ಪ್ರಸ್ತಾವವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮಾಡುವುದಕ್ಕೆ ಅವಕಾಶ ಉಂಟು. ಆದರೆ ಒಬ್ಬ ಮುಖ್ಯಾಧಿಕಾರಿಯ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದಾಗ ಅವರು ಸಾರ್ವಜನಿಕರ ಹಿತದೃಷ್ಟಿಗೆ ವಿರೋಧವಾಗತಕ್ಕ ರೀತಿಯಲ್ಲಿ ವರ್ತಿಸಿರುವ ಹಾಗೆ ಪ್ರಸ್ತಾವ ಮಾಡಿದ್ದಾರೆ. ಆ ರೀತಿಯಾಗಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಕ್ಕೆ ನಾನು ಆಕ್ಷೇಪಣೆ ಮಾಡುವುದಿಲ್ಲ. ಮಾನ್ಯ ಸದಸ್ಯರು ಹೇಳಿದ್ದು ಸಂಪೂರ್ಣವಾಗಿ ಸರಿಯಲ್ಲ. ಈ ಇಲಾಖೆಯ ಆಡಳಿತ ಬಹಳ ದಕ್ಷತೆಯಿಂದ ನಡೆಯುತ್ತಾ ಇದೆಯೆಂದು ಹೇಳುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ.

6-30 P.M.

Mr. SPEAKER.—Order, order. Now it is 6-30 P.M. Either I have to put the Demand to vote or apply guillotine. I have heard a lot of criticism in the Debate. I had agreed and the House had agreed that the reply would begin at 4-30 P.M., but till 5-30 P.M. the reply did not begin. Persons whose names had not been given also have participated and I am very happy about it, but they must co-operate now. But even now for every sentence that the Minister says there is some criticism from either this side or that side. I want the House to hear the Minister in absolute silence because certain allegations have been made against certain officers who cannot come here and defend themselves and get exonerated. Naturally, the Minister in charge of the Department has to defend them and exonerate them. Members were entirely wrong in making allegations without previons intimation to the hon'ble Minister. I have heard them with deep regret saying " when I go to his Office, he does not even receive me." Now members must give the Minister his right of reply to those criticisms.

Smt. K. S. NAGARATHNAMMA.—Not only in this connection, but in every other connection also, these officers have their own ways. In fact, they have very scant courtesy to the members who go there. This is the experience of many members. I hope that at least now the Govenment will issue proper instructions to these officers in the matter.

Mr. SPEAKER.—In such cases the members are entitled to write to the Minister saying that when they went there on such and such occasion they were not received properly.

ಶ್ರೀ ನಾಗಪ್ಪ (ಮಂಡ್ಯ).—ಅಧಿಕಾರಿಗಳ ಬಗ್ಗೆ ಮತ್ತು ಅವರ ಬುದ್ಧಿವಂತಿಕೆಯ ಬಗ್ಗೆ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಮತ್ತು ಅದರ ಜೊತೆಗೆ ಆಡಳಿತದ ವೈಖರಿಯ ಬಗ್ಗೆ ಕೆಲವು ವಿಚಾರಗಳನ್ನು ಹೇಳಿರುವುದರಿಂದ ಅಧಿಕಾರಿಗಳನ್ನು ಏನಾದರೂ ತಿದ್ದುವುದಕ್ಕೆ ಸಾಧ್ಯವಿದೆಯೇ ಎಂದು ನಾನು ಕೇಳುತ್ತೇನೆ.

(The Hon'ble Member Sri Nagappa and some others from the Congress Party Benches were repeatedly interrupting the Hon'ble Minister.)

Mr. SPEAKER.—What is the Whip doing ? Either he may control his party members or I will send this member out. I am repeatedly ringing the bell and still he is not yielding. I am trying to control the Opposition Members, but if Members of the Ruling Party also begin to interrupt like this how is the reply to be over ?

Sri D. M. SIDDAIAH (Biligere).—I am sorry.

Mr. SPEAKER.—Let the record be full.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧಿಕಾರಿಗಳು ಹೆಣ್ಣುಮಕ್ಕಳನ್ನು ಸರಿಯಾಗಿ ಆಫೀಸಿನಲ್ಲಿ ರಿಸೀವ್ ಮಾಡುವುದಿಲ್ಲ. ಸರಿಯಾಗಿ ನೋಡುವುದಿಲ್ಲ. ಅಂಥವರ ವಿಚಾರದಲ್ಲಿ ಶಿಫಾರಸ್ಸು ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ನನ್ನ ಕರ್ತವ್ಯ ನಿರ್ವಹಣೆಗೆ ಸ್ವಲ್ಪ ಅವಕಾಶ ಕೊಡಬೇಕು. ನೀವು ಹೇಳುತ್ತಿರುವುದು ಸುಳ್ಳು, ನಿಜವಲ್ಲ ಎಂದು ನಾನು ಹೇಳುತ್ತಿಲ್ಲ. ಮಾನ್ಯ ಸದಸ್ಯರು ಅಧಿಕಾರಿಗಳಿಗೆ ಸೌಜನ್ಯ ಇಲ್ಲ ಎಂದು ಹೇಳಿದರು. ನಾನು ಅವರಿಗೆ ಸೌಜನ್ಯ ಇದೆ ಎಂದು ಹೇಳಿದರೆ ಆಗ್ರಹ ಮಾಡುತ್ತೀರಿ, ನಿಮ್ಮ ಆಗ್ರಹಕ್ಕೆ ತುತ್ತಾಗುವುದಕ್ಕೆ ನನಗೆ ಇಷ್ಟವಿಲ್ಲ. ನಮ್ಮ ಇಲಾಖೆಯಲ್ಲಿ ಅಧಿಕಾರಿಗಳೆಲ್ಲರೂ ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕು. ಸಾರ್ವಜನಿಕರ ಅಭಿಪ್ರಾಯವನ್ನು ಎತ್ತಿ ಹಿಡಿಯುವಾಗ ಅದನ್ನು ತಡೆಗಟ್ಟಿ ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಹೊರಗಡೆ ಇರತಕ್ಕವರು ಯಾವುದಾದರೂ ಒಂದು ವಿಚಾರವನ್ನು ಒಬ್ಬ ಅಧಿಕಾರಿ ತಾನು ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಯಾವ ಉದ್ದೇಶ ಅಥವಾ ಕಾರಣಗಳಿಂದ ಹೇಳುತ್ತಾನೆಯೋ ಆಗ್ಗ ಅದನ್ನು ಅಲ್ಲಿಗೇ ಬಿಡಬೇಕು. ಏತಕ್ಕೆಂದರೆ, ಅಧಿಕಾರಿಯು ತನ್ನ ವ್ಯಾಪ್ತಿಯಲ್ಲಿರತಕ್ಕ ಕೆಲಸವನ್ನು ಮಾಡಬಹುದು. ಅನೇಕವೇಳೆ ಅಧಿಕಾರಿಯು ತನ್ನ ವ್ಯಾಪ್ತಿಯಲ್ಲಿ ಇಲ್ಲದೇ ಇರತಕ್ಕ ಕೆಲಸವನ್ನು ತನಗಿಂತ ಮೇಲ್ಪಟ್ಟವರಿಗೆ ಹೇಳಿ ಆ ಕೆಲಸವನ್ನು ಮಾಡಬೇಕು ಎಂದು ಹೇಳುವುದುಂಟು. ಅಂಥಾದ್ದನ್ನು ಮಾಡುವುದಕ್ಕಾಗುವುದಿಲ್ಲ. ಮೇಲ್ಪಟ್ಟವರಿಗೆ ಹೇಳದೆ ಕೆಲಸವನ್ನು ಮಾಡಿದರೆ ಅನೇಕ ಸಾರಿ ಅಪವಾದ ಬರುತ್ತದೆ.

ಇನ್ನು ಬಹಳ ಮುಖ್ಯವಾದ ವಿಚಾರ ಫ್ಯಾಮಿಲಿ ಪ್ಲಾನಿಂಗ್ ವಿಷಯ. ಮಾನ್ಯ ಸದಸ್ಯರು ಹೇಳಿದಂತಹ ಒಂದೊಂದು ಅಂಶಕ್ಕೂ ನಾನು ಉತ್ತರ ಕೊಡುತ್ತಿಲ್ಲ. ಮಾನ್ಯ ಸದಸ್ಯರು ಹೇಳಿದಂತಹ ವಿಚಾರಗಳ ಬಗ್ಗೆ ನಾನು ನೋಟ್ಸ್ ತೆಗೆದುಕೊಂಡಿದ್ದೇನೆ. ಅಲ್ಲದ ಲೆಜಿಸ್ಲೇಚರ್ ಆಫೀಸಿನಿಂದಲೂ ಈ ವಿಚಾರಗಳೆಲ್ಲವೂ ಅಚ್ಚಾಗಿ ಬರುತ್ತವೆ. ಆದ್ದರಿಂದ ಪ್ರತಿಯೊಂದು ಅಂಶವನ್ನೂ ನಾನು ಗಮನದಲ್ಲಿಟ್ಟುಕೊಂಡು ಬಹುಶಃ ಮುಂದಿನ ಸಾರಿಗೆ ಇದೇ ಸಂದರ್ಭ ಒದಗಿಬಂದಾಗ ಈಗ ಎತ್ತಿರತಕ್ಕ ಆಕ್ಷೇಪಣೆಗಳು ಈ ಪ್ರಮಾಣದಲ್ಲಿ ಇಲ್ಲದೆ ಇರುವಂತೆ ನೋಡಿಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಶ್ರೀಮಾನ್ ಸದಾಶಿವಶೆಟ್ಟರು ಈ ಫ್ಯಾಮಿಲಿ ಪ್ಲಾನಿಂಗ್ ತಂದು ಜನಗಳ ಆರೋಗ್ಯವನ್ನು ಹಾಳುಮಾಡುತ್ತೀರಿ ಎಂದು ಬಹಳ ಆಗ್ರಹವಾಗಿ ಹೇಳಿದರು. ಮತ್ತು ಮಾನ್ಯ ಮಹಿಳಾ ಸದಸ್ಯರೊಬ್ಬರು ಹೇಳಿದರು, 3 ಮಕ್ಕಳು ಅಥವಾ 4 ಮಕ್ಕಳಾದಮೇಲೆ ಹುಟ್ಟತಕ್ಕಂಥ ಮಕ್ಕಳ ಜವಾಬ್ದಾರಿಯನ್ನು ಸರ್ಕಾರದವರು ವಹಿಸಿಕೊಳ್ಳಕೂಡದು, ಅವರ ವಿದ್ಯಾಭ್ಯಾಸ, ಉದ್ಯೋಗ, ರೇಷನ್ ಬಗ್ಗೆ ಯಾವ ಜವಾಬ್ದಾರಿಯನ್ನೂ ಸರ್ಕಾರದವರು ವಹಿಸಿಕೊಳ್ಳಬಾರದು ಎಂದು ಹೇಳಿದರು. ಆ ರೀತಿ ನಾವು ಹೇಳಿದರೆ ಪ್ರಾಬ್ಲಮ್ ಸಾಲ್ವ್ ಆಗುವುದಿಲ್ಲ. ಜನಗಳು ಈ ಪ್ರಾಬ್ಲಮ್ ಅನ್ನು ಸಾಲ್ವ್ ಮಾಡಿಕೊಳ್ಳುವುದಾದರೆ ನಾವು ಅಷ್ಟು ಕಷ್ಟಪಡಬೇಕಾಗಿಲ್ಲ. ನಾವೂ ಸಹ ಹೋದಕಡೆಗಳಲ್ಲೆಲ್ಲಾ ಜನಗಳಿಗೆ ಹೇಳುತ್ತೇವೆ, 3 ಮಕ್ಕಳಿಗಿಂತ ಜಾಸ್ತಿ ಇರಬಾರದು ಎಂದು. ಮಾನ್ಯ ಮುಖ್ಯ ಮಂತ್ರಿಗಳೂ ಗ್ರಾಮಾಂತರ ಸಭೆಗಳಲ್ಲಿ ಈ ವಿಚಾರವನ್ನು ಹೇಳಿದ್ದಾರೆ. ಆ ಸಂದರ್ಭಗಳಲ್ಲಿ ಜನಗಳೂ ಸಹ ನಮ್ಮನ್ನು ನೀವು ಏನು ಮಾಡಿದ್ದೀರಿ ನೀವು ಏತಕ್ಕೆ ಆ ರೀತಿ ಮಾಡಲ್ಲಿಲ್ಲ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ನಾವು ಅನುಭವದಿಂದ ಹೇಳುತ್ತೇವೆ ಕೇಳಿ ಎಂದು ಜನಗಳಿಗೆ ನಾವು ಉತ್ತರ ಹೇಳಿದ್ದೇವೆ. ಬೇವಿನಕಾಯಿ ಕಹಿ ಅದನ್ನು ತಿನ್ನಬೇಡಿ ಎಂದು ಹೇಳಿದರೆ, ಇಲ್ಲ ಅದನ್ನು ನಾವು ತಿನ್ನುತ್ತೇವೆ ಎಂದರೆ ಹೇಗೆ ? ಈ ದೃಷ್ಟಿಯಿಂದ ಫ್ಯಾಮಿಲಿ ಪ್ಲಾನಿಂಗ್ ವಿಷಯದಲ್ಲಿ ತೀವ್ರವಾದ ವಿರೋಧಾಭಿಪ್ರಾಯವನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಬಹುಶಃ ಶ್ರೀಮಾನ್ ಶೆಟ್ಟರ್ ಅವರು ಜನಗಣತಿಯ ಲೆಕ್ಕವನ್ನು ತೆಗೆದುಕೊಂಡು ಯಾವ ಯಾವ ಪಂಥದ ಜನ ಎಷ್ಟೆಷ್ಟು ಪ್ರಮಾಣದಲ್ಲಿ ಇರುತ್ತಾರೆ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡಿರಬಹುದು ಎಂದು ಕಾಣುತ್ತದೆ. ಆದ್ದರಿಂದ ಯಾವತ್ತಾದರೂ ಕೂಡ ಈ ಒಂದು ಹಿಂದೂ ಸಂಪ್ರದಾಯ ಬಹಳ ಉದಾತ್ತವಾದುದು. ಯಾವುದೇ ಒಂದು ಹೊಸ ವಿಷಯ ಬಂದರೂ ಕೂಡ ಅದನ್ನು ವಿಚಾರಮಾಡಿ ಒಂದು ನಿರ್ಣಯವನ್ನು ಮಾಡಿಕೊಳ್ಳುವ ಒಂದು ಶಕ್ತಿ ಈಗ ಹೊಸ ಸಂಪ್ರದಾಯದಲ್ಲಿ ಮಾತ್ರ ಬಂದಿದೆ. ಕೆಲವು ವರ್ಷಗಳ ಹಿಂದೆ, ಎಲ್ಲಿಯಾದರೂ ಈ ಫ್ಯಾಮಿಲಿ ಪ್ಲಾನಿಂಗ್ ವಿಷಯವಾಗಿ ಯಾರಾದರೂ ಪ್ರಸ್ತಾಪ ಮಾಡಿದ್ದಿದ್ದರೆ, ಅನೇಕ ಜನರು ಸ್ವೇಚ್ಛಾನುಸಾರವಾಗಿ ವಿರೋಧಿಸುತ್ತಿದ್ದರು. ಆ ರೀತಿಯಾಗಿ ಪ್ರಸ್ತಾಪ ಮಾಡಿ,

ವಿರೋಧ ವ್ಯಕ್ತಪಡಿಸಿದ್ದ ನಿದರ್ಶನಗಳೂ ಕೆಲವು ಉಂಟು. ಆದ್ದರಿಂದ ಇಂತಹ ಸಭೆಯಲ್ಲಿ ಆ ವಿಚಾರಗಳನ್ನು ಹಿಂದೆ ಎಂದೂ ವಿಚಾರ ಮಾಡಿದ್ದೇ ಇಲ್ಲ.

ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಪೋಪ್‌ಪಾಲ್ ಅವರು ಆ ಬಗ್ಗೆ ವಿರೋಧ ಮಾಡಿಲ್ಲವೇ?

ಶ್ರೀ ಕೆ. ಪುಟ್ಟಸ್ವಾಮಿ.—ಅದರಲ್ಲಿಯೂ ನಮ್ಮ ದೇಶದಲ್ಲಿರತಕ್ಕ ಹಿಂದೂ ಸಂಪ್ರದಾಯ ಭಾವನೆ ಬಹಳ ಶ್ರೇಷ್ಠವಾದುದು ಎಂಬುದಾಗಿ ನಾನು ಹೇಳುತ್ತೇನೆ. ಇವತ್ತು ಜನರ ಮನೋಭಾವನೆ ಯಾವ ಧಾಟಿಯಲ್ಲಿ ಓಡುತ್ತಿದೆಯೋ ಅದನ್ನು ಇತ್ತೀಚೆಗೆ ಪ್ರತಿಪಾದಿಸುತ್ತಿದ್ದಾರೆ. ಈಗ ಇರತಕ್ಕ ಅಬಾರ್‌ಷನ್ ಎಂದೇನಿದೆ ಅದನ್ನೂ ಕೂಡ ಕಾನೂನುಬದ್ಧವಾಗಿ ಮಾಡಬೇಕು ಎಂದು ಹೇಳುತ್ತಾರೆ. ಬಹುಶಃ ಹಿಂದೆ ಹೀಗೆ ಹೇಳಿದ್ದರೆ ನಮ್ಮ ಜನತೆಯೇ ಅದು ಘೋರ ಪಾಪ ಎಂದು ಹೇಳುತ್ತಿದ್ದರು. ಹಿಂದೆ ಇದ್ದಂಥ ಕಾಲ ಈಗ ಹೋಗಿದೆ. ಒಂದು ವೇಳೆ ಇಂಡ್ಯೂಸ್ಡ್ ಅಬಾರ್‌ಷನ್ ಆದರೆ ಅದೇನೂ ಪ್ರಮಾದವಿಲ್ಲ, ಪಾಪವಿಲ್ಲವೆಂದು ಹೇಳಿಕೊಂಡು ಬರುತ್ತಾರೆ. ನಮ್ಮ ದುರಾದೃಷ್ಟದಿಂದ ಈ ವಿಚಾರದಲ್ಲಿ ಬೇರೆ ಸಂಪ್ರದಾಯ ಅನುಸರಿಸಬೇಕೆಂಬ ಭಾವನೆ ಇದೆ. ಶ್ರೀಮಾನ್ ಶೆಟ್ಟರ್ ಅವರು ಬೇರೆ ಬೇರೆ ಜನಾಂಗದವರು ಇದನ್ನು ವಿರೋಧಿಸಿದ್ದಾರೆ ಎಂದು ಹೇಳಿದರು. ಅವರ ಒಂದು ಮನೋಭಾವನೆಗೂ ನಮ್ಮ ಮನೋಭಾವನೆಗೂ ಬಹಳ ವ್ಯತ್ಯಾಸವಿದೆ. ನಮ್ಮಲ್ಲಿ ಕಾಲು ಶತಮಾನಗಳ ಹಿಂದೆ ಏನು ಮನೋಭಾವನೆ ಇತ್ತೋ ಈಗಲೂ ಅದೇ ಭಾವನೆ ನಮ್ಮ ಜನಗಳಲ್ಲಿ ಇದೆಯೆಂದು ಹೇಳಲು ಸಾಧ್ಯವಿಲ್ಲ. ನಮ್ಮ ಹಿಂದೂ ಸಂಪ್ರದಾಯದಲ್ಲಿ ಸಂತಾನ ಕುಟುಂಬ ನಿಯಂತ್ರಣ ಸಂಯಮದಿಂದ ಮಾಡುವುದು ಒಳ್ಳೆಯದು ಎಂದು ಹೇಳಿದ್ದಾರೆ. ಆದರೆ ಹಿಂದೂ ಸಂಪ್ರದಾಯದಲ್ಲಿ ಹೇಳಿರತಕ್ಕ ತತ್ವ ನಿರಂತರವಾಗಿ ನಿಶ್ಚಿತವಾಗಿರುವುದು. ನಮ್ಮ ಸಂಪ್ರದಾಯದಲ್ಲಿ ನಿರಂತರವಾಗಿ ಚಿರನೂತನವಾಗಿರತಕ್ಕ ತತ್ವವನ್ನು ಪರಿಪಾಲಿಸಬೇಕೆಂದು ಇದೆ. ಸಂಯಮದಿಂದ ಬಾಳಿ ಕುಟುಂಬ ನಿಯಂತ್ರಣ ಮಾಡಬಾರದು ಎಂಬುದಾಗಿ ಯಾರು ಹೇಳಿದ್ದಾರೆ?

ಶ್ರೀ ಎಸ್. ಎಸ್. ಶೆಟ್ಟರ್.—ಹಾಗಾದರೆ ಮುಸಲ್ಮಾನರಲ್ಲಿ ನಾಲ್ಕು ಜನ ಹೆಂಗಸರನ್ನು ಲಗ್ನ ಮಾಡಿಕೊಳ್ಳುತ್ತಾರೆ. ಇದಕ್ಕೆ ಏನು ಹೇಳುತ್ತೀರಿ?

ಅಧ್ಯಕ್ಷರು.—ನಂತರ ಮಾಡಿಕೊಂಡವರಿಗೆ ಫಂಡಮೆಂಟಲ್ ರೈಟ್ಸ್ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಮುಸಲ್ಮಾನರ ಹಾಗೂ ಕ್ರಿಶ್ಚಿಯನ್ನರ ಮತಾವಲಂಬಿಗಳಲ್ಲಿ ಏನು ಹೇಳುತ್ತಾರೋ ಅದನ್ನು ನನ್ನ ಸ್ವಂತ ಅನುಭವದಿಂದ ಹೇಳುವುದಕ್ಕೆ ನನಗೆ ಸ್ವಲ್ಪ ಹೊತ್ತು ಅವಕಾಶ ಕೊಡಬೇಕು.

ಮುಸಲ್ಮಾನರ ಸಂಪ್ರದಾಯದಲ್ಲಿ 4 ಜನ ಹೆಂಗಸರನ್ನು ಮದುವೆ ಮಾಡಿಕೊಳ್ಳಬಹುದು ಎಂಬುದಾಗಿ ಇದ್ದರೂ ಈ ಕಾಲದಲ್ಲಿ ಎಷ್ಟು ಜನರನ್ನು ಮದುವೆ ಮಾಡಿಕೊಳ್ಳಬಲ್ಲರು? ಒಬ್ಬಳಿಗೆ ತಂದು ಹಾಕುವುದೇ ಈ ಕಾಲದಲ್ಲಿ ಕಷ್ಟವಿದೆ.

ಶ್ರೀ ಎಸ್. ಚನ್ನಯ್ಯ.—ಮುಸಲ್ಮಾನ್ ಹೆಂಗಸರು ಮದುವೆಯಾದರೆ ಅವರೇ ಗಂಡಂದಿರಿಗೆ ಅನ್ನ ಹಾಕುತ್ತಾರೆ. ಅವರು ಆ ಬೀದಿಯಲ್ಲೊಬ್ಬಳು, ಈ ಬೀದಿಯಲ್ಲೊಬ್ಬಳು, ಅಲ್ಲೊಂದು ಕಡೆ, ಇಲ್ಲೊಂದು ಕಡೆ—ಹೀಗೆ ಇರುತ್ತಾರೆ. ನಾನು ನೋಡಿರುವ ಹಾಗೆ ಮೈಸೂರಿನಲ್ಲಿ ಎಷ್ಟೋ ಜನ ಹೆಂಗಸರು ಒಂದು ರೂಪಾಯಿಗೆ ಬೀಡಿ ಕಟ್ಟಿ ಸಂಪಾದನೆಮಾಡಿ ಗಂಡಂದಿರಿಗೆ ಅನ್ನ ಹಾಕುತ್ತಿದ್ದಾರೆ.

ಶ್ರೀ ಬಿ. ಎಂ. ಇಡಿನಬ್ಬ (ಮಂಗಳೂರು).—ಹೆಂಗಸರು ಗಂಡಸರಿಗೋಸ್ಕರ ಸಂಪಾದನೆ ಮಾಡಿ ಅನ್ನ ಹಾಕಿದ್ದನ್ನು ನಾನು ನೋಡಿಲ್ಲ. ನಮ್ಮಲ್ಲಿ ಆ ರೀತಿ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಎಲ್ಲಿ ಬಡತನ ಜಾಸ್ತಿಯಾಗಿದೆಯೋ ಆ ವರ್ಗದಲ್ಲಿನ ಹೆಂಗಸರು ಕೆಲಸ ಮಾಡಿ ಗಂಡಸರಿಗೆ ಅನ್ನ ಹಾಕುತ್ತಾರೆ. ಆದ್ದರಿಂದ ಜನರು ನಾನಾ ವೃತ್ತಿಗಳನ್ನು ಅನುಸರಿಸಿ ಸಂಸಾರ ನೀಗಿಸಬೇಕಾಗಿದೆ. ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಗ್ರಂಥಗಳ ತತ್ವವನ್ನು ಯಾರೇ ಬೋಧಿಸಲಿ ಅದರಿಂದೇನೂ ಹೊಟ್ಟೆ ತುಂಬುವುದಿಲ್ಲ. ನನ್ನ ಪರಮ ಮಿತ್ರರಲ್ಲಿ ಅನೇಕರು ಮುಸಲ್ಮಾನರು ಮತ್ತು ಕ್ಯಾಥೊಲಿಕ್ ಕ್ರಿಶ್ಚಿಯನ್ನರು ಚರ್ಚುಗಳಲ್ಲಿ ಆ ರೀತಿಯಾಗಿ ಮದುವೆ ಮಾಡಿಕೊಂಡಿರುವವರು ಇದ್ದಾರೆ. ಆದರೆ ಯಾರೂ ನಾನು ವ್ಯಾಸೆಕ್ಟಮಿ ಮಾಡಿಸಿಕೊಂಡಿದ್ದೇನೆಂದು ಚರ್ಚ್‌ನಲ್ಲಿ ಹೇಳುವುದಿಲ್ಲ. ಅಲ್ಲಿ ಆ ರೀತಿಯಾಗಿ ಹೇಳುವುದಕ್ಕೂ ಆಗುವುದಿಲ್ಲ. ಅದನ್ನು ಚರ್ಚ್‌ನಲ್ಲಿ ಪರೀಕ್ಷೆ ಮಾಡುವುದಿಲ್ಲ. ಇದು ಇಕನಾಮಿಕ್ ನೆಸೆಸಿಟಿ ಎಂದು ಮಾನ್ಯ ಸದಸ್ಯರು ಎಲ್ಲಿಯೂ ಹೇಳದೆ ಹೋಗಿಲ್ಲ. ಮುಖ್ಯವಾಗಿ ದೇಶದಲ್ಲಿ ಬೆಳೆಯುತ್ತಿರುವ ಜನ ಸಂಖ್ಯೆಯನ್ನು ನಿಯಂತ್ರಣ ಮಾಡದಿದ್ದರೆ ಬಹಳ ಕಷ್ಟ.

ಶ್ರೀ ಎಸ್. ಎಸ್. ಶೆಟ್ಟರ್.—ಜಾತೀವಾರು ಆ ಬಗ್ಗೆ ಅಂಕಿ ಅಂಶಗಳನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದನ್ನು ಇನ್ನೊಂದು ಸಾರಿ ಕೊಡುತ್ತೇನೆ.

ಇನ್ನು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಮಾನ್ಯ ಸದಸ್ಯಣಿಯವರಾದ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಹೇಳಿದ ಒಂದು ವಿಷಯವನ್ನು ನಾನು ಅಪ್ರಿಷಿಯೇಟ್ ಮಾಡುತ್ತೇನೆ. ಅವರು ಅದರಿಂದ ಸರ್ಕಾರಕ್ಕೆ ತೊಂದರೆಯಾದರೂ ಚಿಂತಿಲ್ಲ, ಮಾಡಿ ಎಂದು ಹೇಳುತ್ತಾರೆ. ಈಗತಾನೆ ಇಂಡಿಯಾ ಸರ್ಕಾರದ ಆರೋಗ್ಯ ಮಂತ್ರಿಗಳು ಇವರು ಹೇಳಿದ್ದನ್ನೇ ಹೇಳಿದ್ದಾರೆ. ನಾನು ಬಹಳವಾಗಿ ಅದನ್ನು ಮಾನ್ಯ ಮಾಡುತ್ತೇನೆ. ಈ ಸಭಾ ಸದಸ್ಯರ ಸಂಪೂರ್ಣ ಬೆಂಬಲ ಫ್ಯಾಮಿಲಿ ಪ್ಲಾನಿಂಗಿಗೇ ಇದೆ. ಶ್ರೀಮಾನ್ ಶೆಟ್ಟರ್ ಅವರಿಗೂ ಇದೆ. ಬಹುಶಃ ಅವರ ಅಪೇಕ್ಷೆ ಈ ವಿಚಾರದಲ್ಲಿ ಏನು ಎಂಬುದನ್ನು ಪ್ರಸ್ತಾಪ ಮಾಡಿ ಅದನ್ನು ದೇಶದ ಜನತೆಗೆ ತಿಳಿಯ ಹೇಳಬೇಕು. ಇದರಲ್ಲಿ ಯಾರಿಗೂ ಸಂಶಯ ಬೇಡ. ಹಿಂದೂಗಳಾಗಲೀ, ಮುಸಲ್ಮಾನರೇ ಆಗಲೀ, ಕ್ರಿಶ್ಚಿಯನ್ನರೇ ಆಗಲೀ ಅಥವಾ ಯಾವ ಮತಾವಲಂಬಿಗಳೇ ಆಗಲೀ ಸಂಸಾರ ನಿಯಂತ್ರಣ ಮಾಡದೆ ಹೊರತು ಹೊಟ್ಟೆ ತುಂಬ ಅನ್ನ ಸಿಕ್ಕಷ್ಟೇ ಇರುವ ಕಾಲ ಬಹಳ ಶೀಘ್ರವಾಗಿ ಬರುತ್ತದೆ. ಯಾರೋ ಒಬ್ಬ ಮಾನ್ಯ ಸದಸ್ಯರು ಒಬ್ಬ ಮನುಷ್ಯ ನಾಲ್ಕು ಜನರನ್ನು ಮದುವೆ ಮಾಡಿಕೊಂಡಿದ್ದಾನೆಂದು ಹೇಳಿದರು. ಮುಸಲ್ಮಾನರು ಆದರೆ ನಾಲ್ಕು ಜನಗಳಿಗೆ ಎಂಬುದಾಗಿ ಮಿತಿ ಇದೆ. ಹಿಂದೂ ಸಂಪ್ರದಾಯದಲ್ಲಿ ಈ ಕಾನೂನು ಬರುವುದಕ್ಕೆ ಮುಂಚೆ ಏಕಪತ್ನಿಯೇ ಇರಬೇಕೆಂದು ಇಲ್ಲದಿದ್ದುದರಿಂದ ಎಷ್ಟೋ ಜನರು 40 ಅಥವಾ 400 ಮದುವೆಗಳನ್ನು ಮಾಡಿಕೊಂಡಿದ್ದಿರಬಹುದು. ಆದ್ದರಿಂದ ಇದು ಕಾನೂನಿನಲ್ಲಿ ಆಗುವುದಿಲ್ಲ. ಏಕೆಂದರೆ ಕೆಲವು ಕಾನೂನುಗಳು ರೂಢ ಮೂಲವಾಗಿ ಬಂದುವೂ ಉಂಟು. ಈ ವಿಚಾರದಲ್ಲಿ ರಹಸ್ಯವಾದ ಬೇರೆ ಮಾತುಗಳನ್ನು ಇಲ್ಲಿ ಹೇಳುವುದಕ್ಕೆ ನಾನು ಸಂಕೋಚ ಪಡುತ್ತೇನೆ. ನಾನು ಏನಾದರೂ ಇಲ್ಲಿ ಅಕಸ್ಮಾತ್ ಒಂದು ಚೂರು ತಪ್ಪು ಹೇಳಿದರೆ ಅದು ಬಹಳ ಪ್ರಮಾದವಾಗುತ್ತದೆ. ಶ್ರೀ ಕೃಷ್ಣನು 16 ಸಾವಿರ ಹೆಂಗಸರನ್ನು ಮಾದುವೆಯಾಗಿದ್ದನೆಂದು ಹೇಳುತ್ತಾರೆ. ಅದು ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ. ಇನ್ನು ಹತ್ತು ನಿಮಿಷಗಳ ಕಾಲದಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಸ್ವಲ್ಪ ತಾಳ್ಮೆಯಿಂದ ಕೇಳಬೇಕು.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಶ್ರೀ ಕೃಷ್ಣನಿಗೆ ಇಬ್ಬರು ಹೆಂಡಂದಿರು. ಮಾನ್ಯ ಮಂತ್ರಿಗಳು ವಿಚಾರ ಮಾಡುತ್ತಿರುವುದು ಭಾಗವತಕ್ಕೆ ಅಪಪ್ರಚಾರ ಮಾಡಿದ ಹಾಗಾಗುತ್ತದೆ.

Mr. SPEAKER.—This is all ancient history. We will come to the present topic.

ಶ್ರೀ ಕೆ. ಪುಟ್ಟಸ್ವಾಮಿ.—ಯಾವತ್ತೂ ಕೂಡ ಅನೇಕ ವೇಳೆ ಈ ಸದಸ್ಯರಲ್ಲಿ ಸ್ವಲ್ಪ ಉಗ್ರ ಮನೋಭಾವನೆ ಬಂದಂಥ ಕಾಲದಲ್ಲಿ ಸ್ವಲ್ಪ ಅವತಾರ ಕಥೆ ಹೇಳಿದರೆ ಕೊಂಚ ಮಟ್ಟಿಗಾದರೂ ರಂಗ್ ಆಗುತ್ತಾರೆಂದು ಹೇಳಿದೆ. 16 ಸಾವಿರ ಜನ ಇಲ್ಲವೆಂದು ಊಹೆ. 16 ಸಾವಿರ ಎನ್ನುವುದನ್ನು ನಂಬುವುದಿಲ್ಲ. ಸಾಮಾನ್ಯ ಜನರೂ ಸಹ ಅದೇ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಶ್ರೀ ಕೃಷ್ಣ ಇಬ್ಬರನ್ನು ಮದುವೆ ಮಾಡಿಕೊಂಡನಂತೆ ಎಂದು ಹೇಳಿದರೆ, ಪ್ರತಿಯೊಬ್ಬರೂ ಇಬ್ಬರನ್ನು ಮದುವೆ ಮಾಡಿಕೊಳ್ಳುತ್ತಿದ್ದರು. ನಮಗೆ ಈಗ ಇಕನಾಮಿಕ್ ನೆಸ್ಸೆಸಿಟಿ ಏನಿದೆ ಅದು ನಮ್ಮ ಮುಂದಿನ ಮಾರ್ಗವನ್ನು ನಿರ್ಧಾರ ಮಾಡುತ್ತದೆಂದು ನಾನು ಹೇಳುತ್ತೇನೆ. ಮಾತನಾಡುವುದಕ್ಕೆ ಈಗಾಗಲೇ ಹೆಚ್ಚು ಕಾಲ ನಾನು ತೆಗೆದುಕೊಂಡಿದ್ದೇನೆ. ಇನ್ನು ಹತ್ತು ನಿಮಿಷದಲ್ಲಿ ನನ್ನ ಮಾತು ಮುಗಿಸುತ್ತೇನೆ. ಇನ್ನು ಮುಖ್ಯವಾದ ವಿಚಾರ ಹೇಳುವುದು ಅಂದರೆ, ಪ್ರೈವೇಟ್ ಮೆಡಿಕಲ್ ಕಾಲೇಜುಗಳ ವಿಚಾರ. ಇದನ್ನು ಹೇಳದೆ ಭಾಷಣ ಮುಗಿಸಿದರೆ ಅದು ಪೂರ್ತಿಯಾಗುವುದಿಲ್ಲ ಇದು ಬಹು ಮುಖ್ಯವಾದುದು. ಇಂದು ದೇಶಕ್ಕೆ ಅಗತ್ಯವಾಗಿ ಬೇಕಾದಂಥ, ದೇಶದಲ್ಲಿ ಕೊರತೆ ಇರತಕ್ಕಂಥ ಸಂದರ್ಭದಲ್ಲಿ ವೈದ್ಯರನ್ನು ನಿರ್ಮಾಣ ಮಾಡತಕ್ಕಂಥ ದೊಡ್ಡ ಪ್ರಶ್ನೆ ನಮ್ಮೆಲ್ಲರ ಮುಂದೆ ಇದೆ. ಇಂಥ ಸಂದರ್ಭದಲ್ಲಿ ಪ್ರೈವೇಟ್ ಕಾಲೇಜುಗಳ ಸೇವೆಯನ್ನು ಎಲ್ಲರೂ ಪ್ರಶಂಸೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅದರಲ್ಲಿ ಇರತಕ್ಕಂಥ ದೋಷ ನಿವಾರಣೆ ಮಾಡಬಾರದು ಎಂದು ಹೇಳುವುದಿಲ್ಲ. ತಮ್ಮೆಲ್ಲರನ್ನೂ ಅಪ್ಪಾಲೋಚನೆಗೆ ತೆಗೆದುಕೊಂಡು ಒಂದು ವಿಚಾರ ಹೇಳುತ್ತೇನೆ. ಪ್ರೈವೇಟ್ ಕಾಲೇಜುಗಳು ಅಂದರೆ ಅವು ಸಂಪೂರ್ಣವಾಗಿ ಪ್ರೈವೇಟ್ ಆಗಿಲ್ಲ. ನಾವು ಸಹ ಪಾರ್ಟನರ್ ಆಗಿದ್ದೇವೆ. ನಾವು ಸರಕಾರಿ ಆಸ್ಪತ್ರೆಗಳ ಸೌಲಭ್ಯ ಒದಗಿಸಿ ಕೊಡದೇ ಇದ್ದರೆ ಅವರು ಮೆಡಿಕಲ್ ಕಾಲೇಜ್ ನಡೆಸುವುದು

ಹೇಗೆ ? ಯೂನಿವರ್ಸಿಟಿ ಅಫಿಲಿಯೇಷನ್ ಕೊಡುವಾಗ ಆಸ್ಪತ್ರೆ ಸೌಲಭ್ಯ ಕೊಡಬೇಕಾಗುತ್ತದೆ. ಅದರ ಮೇಲೆ ಖಾಸಗಿ ಕಾಲೇಜು ತೆರೆದಿದ್ದಾರೆ, ಮತ್ತು ಅವರು ನಡೆಸುತ್ತಿದ್ದಾರೆ. ಸರಿಯಾದ ರೀತಿಯಲ್ಲಿ ನಡೆಸುವ ಕಾಲೇಜುಗಳಿಗೆ ಅತ್ಯಗತ್ಯವಾಗಿ ಬೇಕಾದಂಥ ಕಟ್ಟಡ ಒದಗಿಸುತ್ತಿದ್ದೇವೆ ಮತ್ತು ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಲು ಬಹಳ ಸಂತೋಷವಾಗುತ್ತದೆ. ಒಂದೆರಡು ಕಾಲೇಜುಗಳಲ್ಲಿ ಪ್ರೀ-ಕ್ಲಿನಿಕಲ್ ಕೋರ್ಸಿಗೆ ಬೇಕಾದಂತೆ ಎಲ್ಲ ಸೌಲಭ್ಯ ಒದಗಿಸಿ ಕೊಟ್ಟಿದ್ದೇವೆ. ಅವು ಸರಕಾರಿ ಕಾಲೇಜುಗಳಿಗೆ ಸರಿಸಮಾನವಾಗಿವೆ. ಅವರು ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುವ ವಿಚಾರದಲ್ಲಿ ಮೈಸೂರು ಸಂಸ್ಥಾನದಲ್ಲಿ ಧನ ಸಿಕ್ಕುತ್ತಾ ಇದೆ ಎಂದು ಮಾನ್ಯ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಹೇಳಿರುವುದರಲ್ಲಿ ಕೆಲವು ನಾನು ಒಪ್ಪುತ್ತೇನೆ. ಮೈಸೂರು ರಾಜ್ಯದ ಜನರ ಹಣದಿಂದ ಕ್ಲಿನಿಕಲ್ ಫೆಸಿಲಿಟೀಸ್ ಒದಗಿಸಿಕೊಟ್ಟ ಮೇಲೆ ಮೈಸೂರಿನ ಮಕ್ಕಳಿಗೆ ಕಾಲೇಜಿನಲ್ಲಿ ಪ್ರಾಶಸ್ತ್ಯ ಇಲ್ಲ ಎಂಬುದನ್ನು ಯಾರಾದರೂ ಒಪ್ಪಿಕೊಳ್ಳುತ್ತಾರೆ. ಈ ಸಂಸ್ಥೆ ನಡೆಸತಕ್ಕಂಥವರು ಯಾವ ಒಂದು ಘನವಾದ ಉದ್ದೇಶ ಇಟ್ಟುಕೊಂಡಿದ್ದಾರೆಯೋ ಉದಾತ್ತ ಧ್ಯೇಯ ಇಟ್ಟುಕೊಂಡಿದ್ದಾರೆಯೋ ಈ ವಿಚಾರ ಅವರ ಗಮನಕ್ಕೆ ತಂದರೆ ಇದನ್ನು ಅವರು ಮೀರಿ ನಡೆಯುತ್ತಾರೆ ಎಂದು ನಾನು ಒಪ್ಪುವುದಿಲ್ಲ. ಈ ವಿಚಾರ ನಾವು ಇನ್‌ಫಾರ್ಮರ್ ಆಗಿ ಪ್ರಸ್ತಾಪ ಮಾಡಿದ್ದೇವೆ. ಇದಕ್ಕೆ ಅವರು ವಿರೋಧವಾಗಿಲ್ಲ. ಮೈಸೂರಿನ ಮಕ್ಕಳಿಗೆ ಅರ್ಹತೆ ಕೊಡಲು ಅವರು ವಿರೋಧವಾಗಿಲ್ಲ. ಕೆಲವು ಕಡೆ ಒಂದು ಕಾಲೇಜಿನಲ್ಲಿ ಶೇಕಡ 50ರಷ್ಟು ಇದೆ. ಗುಲಬರ್ಗ ಕಾಲೇಜಿನಲ್ಲಿ ಶೇಕಡ 60ಕ್ಕೆ ಕಡಿಮೆ ತೆಗೆದುಕೊಳ್ಳುವುದಿಲ್ಲ. ಮೈಸೂರು ವಿದ್ಯಾರ್ಥಿಗಳ ಬಗ್ಗೆ ಅಂಕಿ ಸಂಖ್ಯೆ ಬೇಕಾದರೆ ಒದಗಿಸಿ ಕೊಡುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ.—ಕ್ಯಾಪಿಟೇಶನ್ ಫೀ ಬಗ್ಗೆ ಹೇಳಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಮಣಿಪಾಲ ಕಾಲೇಜಿನಲ್ಲಿ ನಾಲ್ಕು ಸಾವಿರ ಇದೆ. ಬೇರೆ ಕಾಲೇಜಿನಲ್ಲಿ ಐದು ಸಾವಿರ ಇದೆ.

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಇದು ಕರಪ್‌ಷನ್ ಅಲ್ಲವೇ !

ಶ್ರೀ ಕೆ. ಪುಟ್ಟಸ್ವಾಮಿ.—ಅದು ಅಭಿಪ್ರಾಯ. ಇದು ಕರಪ್‌ಷನ್ ಅಲ್ಲ ಎಂದು ಹೇಳುವವರೂ ಇದ್ದಾರೆ. ಆದರೆ ಇದು ಸರಿಯಾದುದು ಅಲ್ಲ ಎಂದು ಹೇಳುವವರೂ ಇದ್ದಾರೆ. ಮೆಡಿಕಲ್ ಕಾಲೇಜು ಪ್ರಾಫಿಟ್ ಮೇಕಿಂಗ್ ಬಾಡಿ ಎಂದು ಹೇಳುವುದು ಸರಿಯಲ್ಲ. ಐದು ಸಾವಿರ ತೆಗೆದುಕೊಳ್ಳುತ್ತಾರೆ ಮಣಿಪಾಲ ಕಾಲೇಜಿನಲ್ಲಿ ಸಾಕಷ್ಟು ಸಿಬ್ಬಂದಿ ಸಲಕರಣೆ ಒದಗಿಸಿಕೊಂಡಿದ್ದಾರೆ, ಆದಕ್ಕಾಗಿ ಅವರು ನಾಲ್ಕು ಸಾವಿರ ತೆಗೆದುಕೊಳ್ಳುತ್ತಾರೆ. ಇನ್ನು ಮುಂದೆ ಪ್ರೈವೇಟ್ ಕಾಲೇಜು ಯಾವ ರೀತಿ ನಡೆಯಬೇಕು, ಈ ವಿಚಾರ ಪರಿಶೀಲನೆ ಮಾಡುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ನನಗೆ ಹೇಳಿದ್ದಾರೆ. ಈ ಯೋಜನೆಯ ಅವಧಿಯಲ್ಲಿ ಎರಡು ಪ್ರೈವೇಟ್ ಕಾಲೇಜುಗಳನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶವಿದೆ. ಈ ಉದ್ದೇಶ ಇದ್ದರೂ ಕೂಡ ತಮಗೆ ವಿನಂತಿ ಮಾಡಿಕೊಳ್ಳುವುದು ಅಂದರೆ, ಈ ಪ್ರೈವೇಟ್ ಕಾಲೇಜಿಸ್ ತೆಗೆದುಕೊಳ್ಳುವುದು ಇನ್ನೂ ನಿಶ್ಚಿತವಾಗಿಲ್ಲ. ನಮಗೆ ಈಗ ಇರತಕ್ಕಂಥ ಹೊರೆಯಲ್ಲಿ ನಾಲ್ಕು ಮೆಡಿಕಲ್ ಕಾಲೇಜುಗಳಿಗೆ ಬೇಕಾಗುವಂಥ ಸಲಕರಣೆಗಳನ್ನು ಒದಗಿಸುವುದು ಕಷ್ಟವಾಗಿದೆ. ಪ್ರೈವೇಟ್ ಕಾಲೇಜುಗಳು ವಸೂಲ್ಮಾಡತಕ್ಕಂಥ ಕ್ಯಾಪಿಟೇಷನ್ ಫೀ ಉಪಯೋಗಿಸಿಕೊಂಡು ಆದಷ್ಟು ಜಾಗ್ರತೆ ಈ ಕಾಲೇಜುಗಳನ್ನು ಸರಿಯಾದ ಮಟ್ಟಕ್ಕೆ ತರುವುದಕ್ಕೆ ಅವರು ಇರುವುದರಿಂದ ನಾನು ಇದನ್ನು ಪರಿಶೀಲನೆ ಮಾಡಬೇಕಾಗಿದೆ.

Sri S. SIVAPPA.—Will the Government see that the money so collected as capitation fees is being credited to the particular society ?

Sri K. PUTTASWAMY.—It is being credited to the societies concerned. They are K. L. E. Society, Manipal Educational Academy. ವಿರೋಧ ಪಕ್ಷದ ನಾಯಕರು ಇದನ್ನು ಹೇಳಬೇಕು. ಕೆಲವು ಸಂಸ್ಥೆಗಳು ಇವೆ, ಆರ್ ಪಿ.ಡಿ. ಸಂಸ್ಥೆ, ಕೆ. ಎಲ್. ಈ ಸೊಸೈಟಿ, ಮಣಿಪಾಲ ಸಂಸ್ಥೆ ಇವು ಬಹಳ ದೊಡ್ಡ ವಿದ್ಯಾಸಂಸ್ಥೆಗಳನ್ನು ನಡೆಸತಕ್ಕಂಥ ಸಂಸ್ಥೆಗಳಾಗಿವೆ. ಅವರ ಕಡೆ ಹೋಗಿ ಅವರ ಲೆಕ್ಕ ಪುಸ್ತಕ ತನಿಖೆ ಮಾಡಲು ಸಾಧ್ಯವಿಲ್ಲ. ಅವರು ಒದಗಿಸಿರತಕ್ಕಂಥ ಅಂಕಿಅಂಶಗಳಿಂದ ನನಗೆ ಮನವರಿಕೆಯಾಗಿದೆ. ಹಣ ಕಾಸಿನ ವ್ಯವಹಾರ ಈ ಸಂಸ್ಥೆಯಲ್ಲಿ ಸರಿಯಾಗಿ ನಡೆದಿದೆ ಎಂದು. ಆದರೂ ಕೂಡ ಮುಂಬರುವ ವರ್ಷದಲ್ಲಿ ಆ ಕಾಲೇಜುಗಳಲ್ಲಿ ಯಾವ ಒಂದು ನಿಯಮದ ಮೇಲೆ ವಿದ್ಯಾರ್ಥಿಗಳಿಗೆ ಅವಕಾಶ

(SRI K. PUTTASWAMY)

ಮಾಡಿಕೊಡಬೇಕು ಎನ್ನುವ ವಿಚಾರವನ್ನು ಪರಿಶೀಲನೆ ಮಾಡಿ, ಅವರ ಜೊತೆಯಲ್ಲಿ ಕೂಡ ಚರ್ಚೆ ಮಾಡಿ ಆಗಿದೆ. ನಿಖರವಾದ ನಿಯಮಗಳನ್ನು ಆ ವೇಳೆಗೆ ಮಾಡುತ್ತೇವೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ.

7.00 P.M.

ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಒಂದು ವಿಚಾರ ಹೇಳಿದರು; ಎಸ್.ಡಿ.ಎಸ್. ಸ್ಯಾನಟೋರಿಯಂ ಕಥೆಯನ್ನು. ಅವರು ಈಗ ಇಲ್ಲಿಲ್ಲ. ಅವರೂ ಅಲ್ಲಿ ನಡೆದಿರತಕ್ಕ ವಿಚಾರವನ್ನು ನಾನು ಇಲ್ಲಿ ಹೇಳುತ್ತೇನೆ. 23-3-67ರ ಸಂಜೆ ಅಸೆಂಬ್ಲಿ ಮುಗಿದ ಮೇಲೆ ನಾನು ಹೊರಗಡೆ ಹೋಗುತ್ತಿದ್ದೆ. ಆ ವೇಳೆಯಲ್ಲಿ ಒಬ್ಬರು ದೊಡ್ಡ ಮನುಷ್ಯರು ಮಾತೃಭೂಮಿಯ ಸಂಪಾದಕರು ಸ್ವಾಮಿರಾವ್ ಎಂಬುವವರು ಬಂದು ಒಂದು ಚೀಟಿ ಕೊಟ್ಟರು. ಅದನ್ನು ಕೊಡುತ್ತ, ನಿಮ್ಮ ಕ್ಷಯದ ಆಸ್ಪತ್ರೆಯ ವೈಖರಿ ನೋಡಿ, ಸತ್ತು ಮೂರು ದಿವಸವಾಗಿದ್ದರೂ ನಮಗೆ ಸಮಾಚಾರ ಕೊಡಲಿಲ್ಲ, ಈಗ ಆ ಹೆಣ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ, ಇದು ಏನು ಎಂಥದು, ಯಾರು ಮಾಡುವಂಥದು ಎಂದು ಹೇಳಿದರು. ಶ್ರೀಮಾನ್ ಸಿದ್ಧವೀರಪ್ಪನವರನ್ನು ನಾನು ನೋಡಿದೆ. ಅವರು ಶ್ರೀಮಾನ್ ಪುಟ್ಟಸ್ವಾಮಿಯವರನ್ನು ಮೊದಲು ನೋಡಿ ಎಂದು ಹೇಳಿದರು ಎಂಬುದಾಗಿ ಸಹ ತಿಳಿಸಿದರು. ಸ್ವಾಮಿ, ಯಾರೇ ಆಗಿರಲಿ, ಹತ್ತಿರದ ಬಂಧುಗಳು ಮೃತರಾಗಿದ್ದಾರೆ ಎಂದು ಬಂದಾಗ ಎಂಥ ಪಾಷಾಣ ಹೃದಯದ ಮನಸ್ಸೂ ಕರಗುತ್ತದೆ. ನನಗೆ ಬಹಳ ನೋವಾಯಿತು. ಈವಾಗಲೇ ಶವ ತೆಗೆದುಕೊಂಡು ಸಂಸ್ಕಾರಕ್ಕೆ ಏರ್ಪಾಡು ಮಾಡಿ, ನಾನು ಬೇಗನೆ ವಿಚಾರ ಮಾಡುತ್ತೇನೆ ಎಂದು ಹೇಳಿದೆ. ನಾನು ವಿಚಾರಣೆ ಮಾಡಿದ್ದರಲ್ಲಿ ಅವರಿಗೆ ಆ ಕಾಗದವನ್ನು 20ನೇ ತಾರೀಖು ಪೋಸ್ಟಿನಲ್ಲಿ ಕಳಿಸಿದ್ದಾರೆ. ನಮ್ಮ ನಿಯಮದ ಪ್ರಕಾರ ಸಂಬಂಧಪಟ್ಟವರಿಗೆ ತಿಳಿಸಬೇಕು ಎಂದಿದೆ. ಸಂಬಂಧದವರಿಗೆ ಮುದ್ದಾಂ ಆಗಿ ತಿಳಿಸ ಬೇಕು ಎಂದು ಇದೆ. ಮುದ್ದಾಮಾಗಿ ತಿಳಿಸದೆ ಹೋದದ್ದು ಕರ್ತವ್ಯಲೋಪ, ಅದನ್ನು ಒಪ್ಪಿ ಕೊಳ್ಳುತ್ತೇನೆ. ಆಸ್ಪತ್ರೆಯಿಂದ ಮಲ್ಲೇಶ್ವರದಲ್ಲಿರುವವರಿಗೆ ಪೋಸ್ಟ್ ಮಾಡಿದ್ದಾರೆ. 20ನೇ ತಾರೀಖು ಪೋಸ್ಟ್ ಮಾಡಿದ್ದು 21ನೇ ತಾರೀಖು ತಲುಪಬೇಕು. ಅವರು 23ನೇ ತಾರೀಖು ನನಗೆ ತೋರಿಸಿದರು. ಆ ಚೀಟಿಯನ್ನು ಈಗ ಯಾರಾದರೂ ನೋಡಬಹುದು, 20ನೇ ತಾರೀಖು ಅದನ್ನು ಹಾಕಿದೆ ಎಂದು ಹೇಳಬಲ್ಲೆ. 20ನೇ ತಾರೀಖು ಹಾಕಿದ್ದು ನನಗೆ ತಲುಪಿದ್ದು ಇವತ್ತು ಎಂದು ಹೇಳಿದರು. ಆ ಬಗ್ಗೆ ನಂತರ ವಿಚಾರ ಮಾಡೋಣ, ನೀವು ಹೋಗಿರಿ ಎಂದು ಅವರಿಗೆ ಹೇಳಿದೆ. ಅವರು ಹೋಗಲಿಲ್ಲ, ಆ ಸಾಯಂಕಾಲ ಶವವನ್ನು ತೆಗೆದುಕೊಳ್ಳಲಿಲ್ಲ. ಮಾರನೆ ದಿನ, ಬಜೆಟ್ ಮಂಡಿಸಿದ್ದೂ ಆ ದಿನವೇ, 24ನೇ ತಾರೀಖು. ಆ ದಿನ ಬೆಳಗ್ಗೆ ನನಗೆ ಟೆಲಿಫೋನ್ ಬಂತು. ನಾನು ಆಸ್ಪತ್ರೆಗೆ ಶವ ತೆಗೆದುಕೊಳ್ಳುವುದಕ್ಕೆ ಬಂದಿದ್ದೇನೆ, ಶವವನ್ನು ಕೊಡುವುದಕ್ಕೆ ಯಾರೂ ಇಲ್ಲ ಎಂದು ಹೇಳಿದರು. ಆಗ ಬೆಳಗ್ಗೆ ಏಳೂವರೆ, ಏಳೂ ಮುಕ್ಕಾಲು ಇರಬಹುದು. ಕಾಲ ಹೇಳಲಾರೆ. ಎಲ್ಲೋ ಸಂಬಂಧಪಟ್ಟ ಅಧಿಕಾರಿ ಇನ್ನೂ ಬಂದಿಲ್ಲವೆಂದು ಕಾಣುತ್ತದೆ, ನೀವು ಅಲ್ಲೇ ಇರಿ, ನಾನು ವ್ಯವಸ್ಥೆ ಮಾಡುತ್ತೇನೆಂದು ಅವರಿಗೆ ಹೇಳಿದೆ. ಜಾಯಿಂಟ್ ಡೈರೆಕ್ಟರ್ ಇನ್‌ಚಾರ್ಜ್ ಆಫ್ ಹೆಲ್ತ್ ಅವರನ್ನು ಅಲ್ಲಿಗೆ ಕಳಿಸಿಕೊಟ್ಟೆ. ಅವರನ್ನು ಕಳಿಸಿದರೂ ಶವವನ್ನು ತೆಗೆದುಕೊಳ್ಳು ವುದಕ್ಕೆ ತಕರಾರು. ಶವವನ್ನು ಸಾಗಿಸುವುದಕ್ಕೆ ಅಂಬುಲೆನ್ಸ್ ವ್ಯಾನ್ ಬೇಕು ಎಂದು ಕೇಳಿದರು. ಹಾಸ್ಪಿಟಲ್ ರೂಲ್ಸ್ ಪ್ರಕಾರ ಅಂಬುಲೆನ್ಸ್ ವ್ಯಾನ್ ಕೊಡುವುದಕ್ಕಾಗುವುದಿಲ್ಲ. ಅವರಿಗೆ ಅಂಬು ಲೆನ್ಸ್ ವ್ಯಾನೇ ಬೇಕು ಎಂದರಂತೆ. ಅವರು ಮಾತೃಭೂಮಿ ಸಂಪಾದಕರಲ್ಲವೇ! ಪತ್ರಿಕೆಯಲ್ಲಿ ಬರುತ್ತದೆ ಎನ್ನುವ ಭಯ. ಅವರಿಗೆ ಜಾಯಿಂಟ್ ಡೈರೆಕ್ಟರು ಏನೋ ಹೇಳಿ, ಸಮಾಧಾನ ಮಾಡಿ ಬೇರೆ ವೆಹಿಕಲ್ ತರಿಸಿ ಶವವನ್ನು ಸಾಗಿಸುವುದಕ್ಕೆ ಏರ್ಪಾಟು ಮಾಡಿದರು. ನಾನಾಗಲೇ ಅರಿಕೆ ಮಾಡಿಕೊಂಡ ಹಾಗೆ ರೋಗಿ ಮೃತಪಟ್ಟ ವಿಚಾರವನ್ನು ಮುದ್ದಾಂ ತಿಳಿಸಬೇಕಾಗಿತ್ತು, ತಿಳಿಸಲಿಲ್ಲ. ಆದರೆ ಈ ವ್ಯಕ್ತಿ ನನಗೆ ತಂದು ತೋರಿಸಿದವರು ಅದೇ ಚೀಟಿಯನ್ನು 20ನೇ ತಾರೀಖು ಇದ್ದುದನ್ನು 24ನೇ ತಾರೀಖು ಎಂದು ತಿದ್ದಿ ಶ್ರೀಮಾನ್ ಸಿದ್ಧವೀರಪ್ಪನವರ ಕೈಗೆ ಕೊಟ್ಟಿದ್ದಾರೆ. ಅವರು ಅವರ ಕೈಯಲ್ಲಿ ಕೊಟ್ಟರು. ಅದನ್ನು ಅವರು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದನ್ನು ನಾನು ನೋಡಿದ್ದೇನೆ. 20ನೇ ತಾರೀಖು ಎಂದು ತಿದ್ದಿರುವುದನ್ನು ಯಾರು ಬೇಕಾದರೂ ನೋಡಬಹುದು. 20ನೇ ತಾರೀಖು ಇದ್ದುದನ್ನು 24ನೇ ತಾರೀಖು ಎಂದು ತಿದ್ದಿದವರು 21ನೇ ತಾರೀಖು ಬಂದುದನ್ನು 23ನೇ ತಾರೀಖು ತಂದು ತೋರಿಸುವುದಕ್ಕೆ ಹಿಂಜರಿಯುತ್ತಾರೆಯೇ? ಆ ವ್ಯಕ್ತಿಯ ಪೂರ್ವೋತ್ತರ ವಿಚಾರ ತನಿಖೆಯಲ್ಲಿದೆ. ಅದು ಈಗ ಅನಾವಶ್ಯಕ.

ಶ್ರೀ ಜಿ. ದುಗ್ಗಪ್ಪ.—ಅದು ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಅಧಿಕಾರಿಯನ್ನೇ ಆಗಲೀ, ಸರ್ಕಾರವನ್ನೇ ಆಗಲಿ, ಸಂಬಂಧಪಟ್ಟ ಯಾರೇ ಇರಲಿ, ಅವರ ವರ್ತನೆ ಸರಿ ಎಂದು ತಾವು ಇಷ್ಟೊಂದು ಅಂಕಿಅಂಶಗಳಿಂದ, ವ್ಯಕ್ತಿಯ ಚರಿತ್ರೆ, ಭೂಗೋಳ ಇವನ್ನು ಸಂಗ್ರಹಿಸಿ, ಅಧಿಕಾರಿಗಳ ಪರವಾಗಿ ಇಷ್ಟೊಂದು ಶ್ರದ್ಧೆ ವಹಿಸಿ, ಶ್ರಮ ತೆಗೆದುಕೊಂಡು ಡಿಫೆಂಡ್ ಮಾಡಿಕೊಳ್ಳುವುದು ಬೇಡ. ಒಂದೇ ಒಂದು ದೃಷ್ಟಿ ಇರಲಿ; ಮಾನವೀಯತೆಯ ದೃಷ್ಟಿ. ಅವನು ಯಾರೇ ಆಗಿರಲಿ, ಆ ವ್ಯಕ್ತಿಯು ಪ್ರಾಮಾಣಿಕನೋ, ಅಪ್ರಾಮಾಣಿಕನೋ, ಮಡಿದವರ ಪೈಕಿ ಬೆಂಗಳೂರು ನಗರದಲ್ಲಿದ್ದಾಗ ಅವರಿಗೆ ಸಮಾಚಾರವನ್ನು ಮುದ್ದಾಂ ಕಳಿಸಬೇಕಾಗಿತ್ತು. ಅದು ತಡವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ತಮಗೆ ಹೇಳಿದ್ದಾರೆ......

ಶ್ರೀ ಕೆ. ಪುಟ್ಟಸ್ವಾಮಿ.—ಮುದ್ದಾಂ ಕಳಿಸಬೇಕಾಗಿತ್ತು ಎಂದು ನಾನು ಒಪ್ಪಿಕೊಂಡಿದ್ದೇನೆ.

ಶ್ರೀ ಜಿ. ದುಗ್ಗಪ್ಪ.—ಅಷ್ಟು ಮಾತ್ರ ಒಪ್ಪಿಕೊಂಡರೆ ಸಾಕು ಬಿಡಿರಿ. ಆರೋಪಣೆ, ಪ್ರತ್ಯಾರೋಪಣೆ ಮಾಡುವುದಕ್ಕೆ ಹೋಗಬೇಡಿರಿ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಸಣ್ಣಪುಟ್ಟ ವಿಷಯಗಳಲ್ಲಿ ಅನಾವಶ್ಯಕವಾಗಿ ನಮ್ಮ ಸಹನೆಯನ್ನು ಕಳೆದುಕೊಳ್ಳುವುದು ಬೇಡ. ಮುಂದೆ ಹೀಗೆ ಏನಾದರೂ ತಕರಾರು ಅಕಸ್ಮಾತ್ ಬರಬಹುದು, ಶ್ರೀ ದುಗ್ಗಪ್ಪನವರಿದ್ದಾರೆ ಎಂದು ಮುಂಚೆಯೇ ನಾನು ಹೇಳಿದೆ, ಮುದ್ದಾಂ ಕಳಿಸಬೇಕಾಗಿತ್ತು, ಕಳಿಸಲಿಲ್ಲ ಎಂದು. 23ನೇ ತಾರೀಖು ಮುದ್ದಾಂ ಕಳಿಸಿದ್ದರೆ ಕರ್ತವ್ಯಲೋಪವಾಗುತ್ತಿತ್ತು. 20ನೇ ತಾರೀಖೇ ಪೋಸ್ಟಿಗೆ ಹಾಕಿದ್ದಾರೆ. ಅದು ಮಾರನೆ ದಿನ ಬೆಳಗ್ಗೆ ಹೋಗುತ್ತದೆ ಎಂದು ನಿರೀಕ್ಷೆ ಮಾಡಿದರು. ಯಾರು ತೀರಿ ಹೋದರು ಅವರ ಹೆಸರು ಶ್ರೀಮತಿ ಸುಂದರಮ್ಮ. ಅವರಿಗೆ ತಾಯಿ, ತಂದೆ, ಬಂಧು ಬಳಗ ಇಲ್ಲ. ಮಲ್ಲೇಶ್ವರದಲ್ಲಿದ್ದರು. ಮತ್ತೆ ಆಕೆಯನ್ನು ತೆಗೆದುಕೊಂಡು ಬಂದು ಆಸ್ಪತ್ರೆಗೆ ಸೇರಿಸುವ ಕಾಲದಲ್ಲಿ ಆಕೆಯ ಸ್ಥಿತಿ ಅಸ್ತವ್ಯಸ್ತವಾಗಿತ್ತು. ಕ್ಯಾನ್ಸರ್ ರೋಗದ ಜೊತೆಗೆ ಅಡ್ವಾನ್ಸ್ಡ್ ಟಿ. ಬಿ. ಯೂ ಸೇರಿತ್ತು. ರಕ್ತ ವಾಂತಿಯಾಗುತ್ತಿತ್ತು. ಹೀಗೆ ಅಸ್ತವ್ಯಸ್ತವಾಗಿದ್ದ ಸ್ಥಿತಿಯಲ್ಲಿ ಆಸ್ಪತ್ರೆಗೆ ತೆಗೆದುಕೊಂಡು ಹೋದವರು ಯಾವ ಕಾರಣದಿಂದ ಆ ಒಂದು ನಿರಪರಾಧಿ ಹೆಣ್ಣು ಮಗಳ ಅವಸಾನ ಕಾಲದಲ್ಲಿ ಆಕೆಯ ಶುಶ್ರೂಷೆ ಮಾಡಲಿಲ್ಲವೋ ಅದು ನನಗೆ ತಿಳಿದಿದ್ದರೂ ಅದನ್ನು ಹೇಳುವುದು ಬೇಡ. ಅದಕ್ಕೆ ನಾನು ಬಹಳ ವ್ಯಸನ ಪಡುತ್ತೇನೆ. ಮೂರು ದಿನವಾದರೂ ಆ ಕಡೆ ನೋಡಿಲ್ಲ. ನಾವು ಹಾಕಿದಂಥ ಪತ್ರ ಅವರಿಗೆ 21ನೇ ತಾರೀಖು ಸೇರಬೇಕು. ಏಕೆ ಹೇಳುತ್ತೇನೆಂದರೆ, ನಾನು ನೋಡಿದ್ದನ್ನು ತಿದ್ದಿ, ನನಗೇ ತಿರುಮಂತ್ರ ಹೇಳುವ ಪ್ರಸಂಗವಾಯಿತಲ್ಲಾ ಎಂಬುದಕ್ಕೆ ಹೇಳುತ್ತಿದ್ದೇನೆ. ಆ ಕಾರಣದಿಂದ ನಾವು ಎಂಥ ವ್ಯಕ್ತಿಯ ಜೊತೆಯಲ್ಲಿ ವ್ಯವಹರಿಸುತ್ತಿದ್ದೇವೆ ಎನ್ನುವುದನ್ನು ತೋರಿಸುವುದಕ್ಕೆ ಹೇಳುತ್ತಿದ್ದೇನೆ. ಈ ವಿಚಾರವನ್ನು ಮಾನ್ಯ ದುಗ್ಗಪ್ಪನವರಿಗೆ ಹೇಳುತ್ತಿದ್ದೇನೆ. ಇಂಥದ್ದರಲ್ಲಿ ನಮ್ಮ ರೈಟಿಯಸ್ ಇನ್‌ಡಿಗ್ನೇಷನ್ ಏನು ? ಆ ಕಾರ್ಯ ಮಾಡಿದಂಥವರು ಯಾರೋ, ಲೋಪವಾಗಿರಬಹುದು, ಆಫೀಸಿನಲ್ಲಿ ಕಳಿಸದೆ ಇರಬಹುದು. ಈಗ ನಾವು ಆಕ್ಷೇಪ ಮಾಡುತ್ತ ಇರುವುದು ಯಾರನ್ನು ? ಆಸ್ಪತ್ರೆಯ ಮುಖ್ಯಾಧಿಕಾರಿಯನ್ನು. ನಿಮ್ಮ ರೈಟಿಯಸ್ ಇನ್‌ಡಿಗ್ನೇಷನ್ ಈ ಫಿರ್ಯಾದು ಕೊಟ್ಟರಲ್ಲಾ ಅವರ ಮೇಲೆ ಬರಬೇಕು ಎಂದು ಹೇಳುವಂಥದ್ದೂ ಸರಿಯಾದ್ದಲ್ಲ. ನಡೆದಂಥ ಪ್ರಸಂಗ ಬಹಳ ಶ್ಲಾಘನೀಯವಾದುದು ಎಂದು ನಾನು ಹೇಳುತ್ತ ಇಲ್ಲ, ನಡೆದುಕೊಂಡ ರೀತಿ ಬಹಳ ಅಸಾಧುವಾದುದು. ನಾವೂ ನೀವೂ ಸಮಾಜದಲ್ಲಿ ಒಪ್ಪದೆ ಇರತಕ್ಕ ವಿಚಾರ.

ಶ್ರೀ ಜಿ. ದುಗ್ಗಪ್ಪ.—ರೋಗಿಯನ್ನು ಸರಿಯಾಗಿ ನೋಡಲೇ ಇಲ್ಲ ಎನ್ನುವ ಪ್ರಶ್ನೆಯಲ್ಲ. ಸರ್ಕಾರಿ ಅಧಿಕಾರಿಯಾಗಿ, ಸಾರ್ವಜನಿಕವಾಗಿ ಉತ್ತರ ಕೊಡಬೇಕಾದರೆ ನಾವೂ ನೀವೂ ಕೂಡ ಯೋಚನೆ ಮಾಡಬೇಕು. ವೈಯಕ್ತಿಕವಾಗಿ ಏನು ಮಾಡುವುದಕ್ಕೂ ಬರುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಏಕಪಕ್ಷೀಯವಾಗಿ ಮಾತನಾಡುತ್ತಿದ್ದಾರೆ. ಅವರಿಗೆ ನಮ್ಮ ಅಧಿಕಾರಿಗಳ ಮೇಲೆ ಆಕ್ಷೇಪಣೆ ಮಾಡಿ ಸಮಾಧಾನಪಟ್ಟುಕೊಳ್ಳಬೇಕು ಎನ್ನುವ ಉದ್ದೇಶವಿರುವುದಾದರೆ ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಅವರು ಅದರಿಂದ ಸಮಾಧಾನಪಟ್ಟುಕೊಳ್ಳಬಹುದು.

ಶ್ರೀ ಎಸ್. ಚನ್ನಯ್ಯ.—ಕಾಗದದಲ್ಲಿ ತಾರೀಖನ್ನು ತಿದ್ದಿದರು ಎಂದು ಹೇಳಿದರು, ಅವರನ್ನು ಕರೆಸಿ ಕೇಳಿದರೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಸಂದರ್ಭದಲ್ಲಿ ಮಾಡಿದ ಅನೇಕ ಟೀಕೆಗಳನ್ನು ನಾನು ಸ್ವಾಗತಿಸುತ್ತೇನೆ. ಕೆಲವುವೇಳೆ ನೊಂದ ಮನಸ್ಸಿನಿಂದ ಹೇಳಿದಾಗ ಸ್ವಲ್ಪ ಉತ್ಪ್ರೇಕ್ಷೆಯಾಗಿರಬಹುದು. ಅದಕ್ಕೆ ನಾನು ಆಕ್ಷೇಪಮಾಡುವುದಿಲ್ಲ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಸಾರ್ವಜನಿಕ ಅಭಿಪ್ರಾಯ

(ಶ್ರೀ ಕೆ. ಪುಟ್ಟಸ್ವಾಮಿ)

ಹೇಗಿದೆಯೆಂಬುದು ಗೊತ್ತಾಗಿದೆ. ನಮಗಿರುವ ತೊಂದರೆ ಬಹುಶಃ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಕೇವಲ ಒಂದು ಗಜ ಬಟ್ಟೆ ಕೊಟ್ಟು ಷರಾಯಿ ಕೋಟು ಎರಡೂ ಮಾಡು ಎಂದರೆ ಮಾಡುವುದಕ್ಕಾಗುವುದಿಲ್ಲ. ಅಷ್ಟು ಮಾಡಲು ಇನ್ನೂ ಹೆಚ್ಚು ಬಟ್ಟೆ ಬೇಕು. ಬೇಕಾದ ಸೌಲಭ್ಯಗಳನ್ನೊದಗಿಸಲು ಪ್ರಯತ್ನವಾಡುತ್ತೇವೆ, ತಮ್ಮ ಮುಂದೆ ಬಂದಾಗ ಬೇಡಿಕೆಯನ್ನಿಟ್ಟಾಗ ಅದಕ್ಕೆ ಒಪ್ಪಿಗೆ ನೀಡುವರೆಂದು ನಂಬುತ್ತೇನೆ. ಇಂದು ಟೀಕೆಮಾಡಿರುವುದನ್ನು ಮನಸ್ಸಿನಲ್ಲಿಟ್ಟು ಅದಕ್ಕೆ ಮುಂದೆ ಅವಕಾಶವಾಗದಂತೆ ಸಾಧ್ಯವಾದಷ್ಟೂ ಪ್ರಯತ್ನ ಮಾಡುತ್ತೇನೆ. ಇಷ್ಟು ಹೇಳಿ ಈ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆ ಇಲಾಖೆಗಳಿಗೆ ಸಾಕಾದಷ್ಟು ಹಣ ಒದಗಿಸಲು ಸಭೆ ಬೆಂಬಲಕೊಡುತ್ತದೆಂದು ನಂಬಿ, ಅಧ್ಯಕ್ಷರಿಗೆ ವಂದನೆಯನ್ನು ಸಲ್ಲಿಸುತ್ತೇನೆ.

Mr. SPEAKER.—I have no objection to sit till 8 O'clock and allow clarifications. But should not the Minister answer all the criticisms? All those points go into record and the press and the public are watching very carefully. If some points are missed, what is the point in starting further debate on that? Hon'ble Members should remember that this debate should have begun at 4.30 P. M. But it was not possible till 5.30 P. M. I have to put it to vote.

(*Sri M. S. Krishnan was standing in his seat*)

There are definite rules in this respect. When the Speaker is on his legs, no Member should get up and talk. Anybody who has any question may please give it to me, I will see that the Hon'ble Minister answers all those points.

Sri M. S. KRISHNAN.—Mr. Kothavale who was in the Chair previonsly had assured us that he would give us some time for clarification.

Mr. SPEAKER.—What was the circumstance under which that assurance was given? If the reply had begun at 4.30 P. M. more than half-an-hour could have been given for clarification. That is why I say I am prepared to sit till 8 O'clock. But one should look to the convenience of others. I am saying that all questions may be handed over to me and I will pass them on to the Minister and the Minister will answer these questions on the Appropriation Bill.

Sri M. S. KRISHNAN.—Because a definite assurance was given to me, I kept quiet all along.

Mr. SPEAKER.—I will allow ten minutes for clarification.

ಶ್ರೀ ಸಿ. ಆರ್. ರಂಗೇಗೌಡ —ನನಗೆ ಮಾತನಾಡಲು ಅವಕಾಶ ಕೊಡಲಿಲ್ಲ, ಕ್ಲಾರಿಫಿಕೇಷನ್ ಕೇಳುವುದಕ್ಕಾದರೂ ಅವಕಾಶಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಒಂದೇ ಒಂದು ವಿಷಯ ಕೇಳಬೇಕಾಗಿದೆ. ಶ್ರೀ ಕೊತಾವಾಲೆಯವರು ಅಧ್ಯಕ್ಷತೆ ವಹಿಸಿದ್ದಾಗ ಕೊನೆಯಲ್ಲಿ ಕೇಳುವಂತೆ ಹೇಳಿದ್ದರು. ಅದಕ್ಕೆ ಅವಕಾಶ ಕೊಡಬೇಕು.

ಶ್ರೀ ಸಿ. ಆರ್. ರಂಗೇಗೌಡ.—ಆರೋಗ್ಯ ಮಂತ್ರಿಗಳು ಉತ್ತರ ಕೊಡುವಾಗ ಅಲೋಪತಿ ವಿಷಯ ಹೇಳಿದರೇ ಹೊರತು ಆಯುರ್ವೇದ ಮತ್ತು ಹೋಮಿಯೋಪತಿ ವಿಚಾರ ಹೇಳಲಿಲ್ಲ,

ಶ್ರೀ ಕೆ. ಪುಟ್ಟಸ್ವಾಮಿ.—ಅದನ್ನು ಮುಂಚೆಯೇ ಹೇಳಿದ್ದರೆ ಚೆನ್ನಾಗಿತ್ತು. ಆಯುರ್ವೇದ ವೈದ್ಯಕ್ಕೆ ಸಾಕಷ್ಟು ಗಮನಕೊಡಬೇಕೆಂಬುದೇ ಸರಕಾರದ ನೀತಿಯಾಗಿದೆ. ಆಯುರ್ವೇದ ಐದನೆಯ ವೇದವೆಂದು ಒಬ್ಬ ಸದಸ್ಯರು ಹೇಳಿದರು. ಅದಕ್ಕೆ ನಾವು ಸಾಕಾದಷ್ಟು ಪ್ರೋತ್ಸಾಹ ಕೊಟ್ಟಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು. ಈಗ ಸರಕಾರ ಒಂದು ಆರ್ಡರು ಮಾಡಿದೆ, ಪದವಿ ಶಿಕ್ಷಣ ಕೊಡಲು ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ಎರಡು ಆಯುರ್ವೇದ ಕಾಲೇಜುಗಳನ್ನು ತೆರೆಯ ಬೇಕೆಂದಿದ್ದೇವೆ. ಈ ವಿಷಯದಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಗಳೊಂದಿಗೆ ವ್ಯವಹಾರ ನಡೆಸು ತ್ತಿದ್ದೇವೆ. ಒಂದು ಆಯುರ್ವೇದಿಕ್ ಫ್ಯಾಕಲ್ಟಿ ಅವರು ಸ್ಥಾಪನೆಮಾಡಬೇಕು, ಅದನ್ನು ಮಾಡಲು ಮಾನ್ಯತೆಕೊಟ್ಟರೆ ಇಂದು ನಾವು ಕೊಡುವ ಶಿಕ್ಷಣಕ್ಕೆ ಬೆಲೆಬರುತ್ತದೆ. ಈ ವಿಷಯದಲ್ಲಿ ಬೇಕಾದ ಮಾಹಿತಿ ಪಡೆಯಲು ಕಾಶಿಗೆ ಕೂಡ ಹೋಗಿ ಬಂದದ್ದಾಗಿದೆ. ಪದವಿ ಶಿಕ್ಷಣ ಕೊಡಲು ಉಪಾಧ್ಯಾ ಯರ ಕೊರತೆಯಿದೆ. ಆ ಕಾರಣದಿಂದ ಪದವಿಯೋತ್ತರರ ಶಿಕ್ಷಣ ಪಡೆದವರು, ಪೋಸ್ಟ್ ಗ್ರಾಜು ಯೇಟ್ ಅರ್ಹತೆ ಇರುವವರು, ಅನುಭವವಿರುವವರು ಏನು ಬೇಕಾಗಿದ್ದಾರೆ ಅವರನ್ನು ಪಡೆದು ಕೊಂಡು ಕಾಲೇಜನ್ನುತೆರೆಯಬೇಕೆಂಬುದು ಸರಕಾರದ ಅಭಿಲಾಷೆಯಾಗಿದೆ. ಈಗ ಸರಕಾರ ಮಾಡಿರುವ ಆರ್ಡರಿನ ಪ್ರಕಾರ ಕಾಲೇಜಿಗೆ ಬರಬೇಕಾದರೆ ಎಸ್.ಎಸ್.ಎಲ್.ಸಿ. ಆಗಿರಬೇಕು. ಅದನ್ನು ಯೂನಿವರ್ಸಿಟಿಯವರಿಗೆ ತಿಳಿಸಿದಾಗ ಅವರು ಪಿ.ಯು.ಸಿ. ಆಗಿರಬೇಕು ಎಂಬ ಅಭಿಪ್ರಾಯ ವನ್ನು ಸೂಚಿಸಿದರು. ಮುಂದೆ ಕಾಲೇಜಿನಲ್ಲಿ ಆಯುರ್ವೇದ ಫ್ಯಾಕಲ್ಟಿ ಸ್ಥಾಪನೆಮಾಡಿ ನಮ್ಮ ಕಾಲೇಜಿಗೆ ಮಾನ್ಯತೆ ಕೊಡುತ್ತಾರೆಂದು ನಂಬಿಕೊಂಡು ವ್ಯವಸ್ಥೆಮಾಡಲಾಗಿದೆ. ಇಂಡಿಯಾ ಸರಕಾರದ ಸಲಹೆಗಾರರು ಬಂದಿದ್ದರು. ಅವರು ಇಲ್ಲಿ ಪದವಿಯೋತ್ತರ ಶಿಕ್ಷಣಕ್ಕೆ ಸಹಾಯಮಾಡಲು ಕೆಲವು ಷರತ್ತುಗಳನ್ನು ಹಾಕಿದರು. ಒಂದು ಡಿಗ್ರಿ ಕೋರ್ಸ್ ಇರುವ ಕಾಲೇಜನ್ನು ನಡೆಸುತ್ತಾ ಇರಬೇಕು, ಎರಡನೆಯದು ವಿಶ್ವವಿದ್ಯಾನಿಲಯದಲ್ಲಿ ಆಯುರ್ವೇದಿಕ್ ಫ್ಯಾಕಲ್ಟಿ ಸ್ಥಾಪನೆಯಾಗಿರ ಬೇಕು ಈ ರೀತಿ ಮಾಡಿದರೆ ಮುಂದಿನ ವರ್ಷ ಪದವಿಯೋತ್ತರ ಶಿಕ್ಷಣಕ್ಕೆ ಅವಕಾಶ ಕೊಡುವು ದಾಗಿ ಹೇಳಿದ್ದಾರೆ. ಆಯುರ್ವೇದ ಶಿಕ್ಷಣದ ಬಗ್ಗೆ ಈಗ ಸರಕಾರ ಅನುಸರಿಸುತ್ತಿರುವ ನೀತಿ ಇದು.

ಮಾನ್ಯ ಸದಸ್ಯರು ಹೋಮಿಯೋಪತಿ ಬಗ್ಗೆ ಇಲ್ಲಿ ಹೇಳಿದರು. ಇದರ ಬಗ್ಗೆ ವಿಚಾರ ಮಾಡು ವುದಕ್ಕೆ ಎಲ್ಲಿ ಇದಕ್ಕಾಗಿ ಶಿಕ್ಷಣ ಕೊಡುವುದಕ್ಕೆ ಸಾಧ್ಯ ಎನ್ನುವುದು ಸರಿಯಾಗಿ ಯಾರಿಗೂ ಗೊತ್ತಿಲ್ಲ. ಹೋಮಿಯೋಪತಿಯ ಔಷಧಿಗಳು ಸುಲಭ ದರದಲ್ಲಿ ಸಿಗುತ್ತವೆ ಮತ್ತು ಅದರ ಚಿಕಿತ್ಸೆಯಿಂದ ಜನರಿಗೆ ಯೋಗ್ಯವಾಗುತ್ತದೆ ಎಂದು ತಿಳಿದರೆ ಇದನ್ನು ವಿಚಾರ ಮಾಡಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಚಿಕ್ಕೇಗೌಡ.—ಸ್ವಾಮಿ, ಈಗಾಗಲೇ ಏಳೂವರೆಗಂಟೆಯಾಗಿ ಬಿಟ್ಟಿದೆ. ಇನ್ನೂ ಆ ಕಡೆಯ ವರಿಗೇ ಅವಕಾಶಗಳು ಸಿಗುತ್ತಿವೆ. ನಮ್ಮ ಕಡೆಯವರಿಗೆ ಅವಕಾಶವೇ ಸಿಗುತ್ತಿಲ್ಲ.

Mr. SPEAKER.—Order, order. The Member will kindiy resume his seat. Is the member directing me ? Is he controlling the House ? If he speaks again, I will ask him to apologise. Members seem to think that they can speak anything they like. There must be some decency.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ನಿನ್ನೆ ದಿವಸ ನಡೆದ ಒಂದು ಘಟನೆಯನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ. ಈ ಮಂತ್ರಿಗಳು ನಮ್ಮ ವೈದ್ಯ ಇಲಾಖೆಯಲ್ಲಿ ಸಾಧ್ಯವಾದು ದನ್ನೆಲ್ಲಾ ಅವರು ಮತ್ತು ಅವರ ಅಧಿಕಾರಿಗಳು ಮಾಡುತ್ತಿದ್ದಾರೆ. ನಿನ್ನೆ ಸುದರ್ಶನ ಗೆಸ್ಟ್ ಹೌಸಿನಲ್ಲಿ ಇರತಕ್ಕ ಒಬ್ಬ ಸದಸ್ಯರಿಗೆ ಅಲ್ಲಿದ್ದ ಡಾಕ್ಟರ್‌ರವರ ಒಬ್ಬ ಅಸಿಸ್ಟೆಂಟ್‌ರವರು ಒಂದು ಇಂಜೆಕ್ಷನ್ನನ್ನು ಕೊಟ್ಟರು. ಅವರ ಸ್ಥಿತಿ ಈಗ ಚಿಂತಾಜನಕವಾಗಿದೆ. ಇದರ ಬಗ್ಗೆ ವಿಚಾರಣೆ ಮಾಡಬೇಕು.

Mr. SPEAKER.—Is it clarification on this Demand ? If so, he may come to the point.......

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇದರ ಬಗ್ಗೆ ವಿಚಾರಣೆ ಮಾಡಬೇಕು.

Mr. SPEAKER.—When I am asking, the hon'ble member may kindly hear it. He had a chance to speak. He has raised the point. Yesterday this incident happened. He will have to make an enquiry and give the reply. So the member may give it in writing and he will get a better reply.

ಶ್ರೀ ಎಂ. ಎಸ್. ಕೃಷ್ಣನ್—ಮಾನ್ಯ ಮಂತ್ರಿಗಳು ನಾನು ಇಲ್ಲಿ ಬೆಂಗಳೂರಿನ ಒಂದು ನಿದರ್ಶನದ ಬಗ್ಗೆ ಹೇಳಿದುದನ್ನು ಕುರಿತು ಅವರು ಹೇಳಿದ ರೀತಿ ನೋಡಿದರೆ ಅದು ಒಂದು ಕಟ್ಟು ಕತೆಯ ರೀತಿಯಲ್ಲಿತ್ತು ಎಂದು ಒಂದು ರೀತಿಯಾಗಿ ಇನ್‌ಸಿನ್ಯುಯೇಟ್ ಮಾಡುತ್ತಾ ಹೇಳಿದರು. ನಾನು ಕೇಳಿಕೊಳ್ಳುವುದು ಇಷ್ಟೇ. ನನಗೆ ಬಂದಿರುವ ವರದಿಗಳ ಪ್ರಕಾರ ನಾನು ಮಾನ್ಯ ಮಂತ್ರಿಗಳಲ್ಲಿ ಇದರ ಫೋಟೋ ಕೂಡ ತೆಗೆದುಕೊಂಡು ಹೋಗಿ ತೋರಿಸಿದ್ದೆ; ನಾವು ಇದರ ಬಗ್ಗೆ ಇತರ ಪ್ರೈವೇಟು ಡಾಕ್ಟರುಗಳಿಗೂ ಕೂಡ ತೋರಿಸಿದ್ದೆವು ಮತ್ತು ಇದರ ಬಗ್ಗೆ ದೂರುಗಳನ್ನು ಕೊಟ್ಟು ಅಲ್ಲಿನ ಡೀನ್‌ನವರು ಇನ್ನೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಪೋಲೀಸಿನವರಿಗೆ ದೂರುಗಳನ್ನು ಕೊಟ್ಟರೆ ಅವರೂ ಇದನ್ನು ತೆಗೆದುಕೊಳ್ಳುವುದಿಲ್ಲ ಎಂದೂ ಹೇಳಿದರು. ಇದರ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆ ಮಾಡುತ್ತೇವೆಂದು ಮಂತ್ರಿಗಳು ಹೇಳಿದರೆ ಮತ್ತು ಅವರು ತಯಾರಾಗಿದ್ದರೆ ನಾನೂ ಕೂಡ ಎಲ್ಲ ವಿವರಗಳನ್ನೂ ಕೊಡಲು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಕೆಲವು ಸೇವಾ ಸಂಸ್ಥೆಗಳು ಕೂಡ ಕೆಲಸ ಮಾಡುತ್ತಿವೆ. ಇದರಲ್ಲಿ ಮಾನ್ಯ ಮಂತ್ರಿಗಳಂತಹವರೂ ಇದ್ದಾರೆ ಹಾಗೂ ಕಾಂಗ್ರೆಸ್ಸಿನ ಶ್ರೀ ಗಾಡಿ ಚಲುವರಾಯಶೆಟ್ಟಿಯವರು ಇತರ ಕಾಂಗ್ರೆಸ್ಸಿನವರು ಅನೇಕರು ಇದನ್ನು ನೋಡಿ ತನಿಖೆ ನಡೆಸಿದ್ದಾರೆ. ಅವರು ಕೊಟ್ಟ ಹೇಳಿಕೆಯ ಮೇಲೆ ಈಗ ಸರ್ಕಾರ ಒಂದು ನಿಷ್ಪಕ್ಷಪಾತವಾದ ವಿಚಾರಣೆ ಮಾಡಿ ತನಿಖೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಲು ತಯಾರಾಗಿದ್ದಾರೆಯೇ ಎಂದು ಕೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ನಾನಾಗಲೇ ಈ ಸಭೆಯಲ್ಲಿ ವಿನಂತಿ ಮಾಡಿಕೊಂಡೆ. ವಿಚಾರಣೆ ಮಾಡಿದ ಸಂದರ್ಭದಲ್ಲಿ ಯಾರೂ ಅಲ್ಲಿಗೆ ಮುಂದೆ ಬರಲಿಲ್ಲ ಎಂದು. ಆದುದರಿಂದ ನಾನು ಹಿಂದೆ ಉತ್ತರ ಕೊಟ್ಟಂತೆ ಈ ದೂರು ನಿರಾಧಾರವಾದುದು ಎಂದು ಮಾತ್ರ ಈಗಲೂ ಇಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಆಯುರ್ವೇದದ ಕಾಲೇಜಿನ ಬಗ್ಗೆ ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಟ್ಟಿದ್ದಾರೆ. ಹಿಂದೆ ಇದರಲ್ಲಿ ಡಿಗ್ರಿ ಕೋರ್ಸು ಮಾಡುತ್ತೇನೆಂದು ಹೇಳಿ ಹುಡುಗರಿಗೆಲ್ಲಾ ಒಂದು ಆಶ್ವಾಸನೆ ಕೊಟ್ಟಿದ್ದರು. ಅದರ ಮೇಲೆ ಈಗ ಹುಡುಗರು ಇದನ್ನು ತೆಗೆದುಕೊಂಡಮೇಲೆ ಡಿಗ್ರಿಯನ್ನು ತೆಗೆದು ಬರೀ ಡಿಪ್ಲೊಮಾ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಹೀಗೆ ಹೇಳುತ್ತಾ ಹೋದರೆ ಸರ್ಕಾರಕ್ಕೆ ಒಂದು ನೀತಿ ನಿಯಮ ಇಲ್ಲವೇ ಎಂದು ಕೇಳಬೇಕಾಗಿದೆ. ಡಿಗ್ರಿ ತೆಗೆದು ಡಿಪ್ಲೊಮಾ ಮಾಡಿದರೆ ಹುಡುಗರ ಗತಿಯೇನು ? ಇದು ಯಾವಾಗ ಫೈನಲ್ ಸ್ಟೇಜಿಗೆ ಬರುತ್ತದೆ ಎನ್ನುವುದರ ಬಗ್ಗೆ ಒಂದು ಕ್ಲಾರಿಫಿಕೇಷನ್ ನನಗೆ ಬೇಕಾಗಿದೆ.

ಎರಡನೆಯದು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಒಂದು ಕಡೆ ಹೇಳುತ್ತಾ ಶಿವಮೊಗ್ಗಾದಲ್ಲಿ ಇಂಜನಿಯರಿಂಗ್ ಕಾಲೇಜು ಹಾಗೂ ಮೆಡಿಕಲ್ ಕಾಲೇಜುಗಳನ್ನು ತೆರೆಯಬೇಕೆಂದು ಕೇಳಿದ ಸಂದರ್ಭದಲ್ಲಿ ನಾವು ಇಲ್ಲಿ ಮೆಡಿಕಲ್ ಸ್ಕೂಲನ್ನು ಮುಚ್ಚುವಾಗ ಇಂತಹ ಆಶ್ವಾಸನೆಯನ್ನು ಕೊಟ್ಟಿರಲಿಲ್ಲ ಎಂದು ಈಗ ಮಾನ್ಯ ಆರೋಗ್ಯ ಸಚಿವರು ಇಲ್ಲಿ ಉತ್ತರ ಹೇಳಿದ್ದಾರೆ. ಇದನ್ನು ಅವರು ಯಾವ ಆಧಾರದ ಮೇಲೆ ಹೇಳುತ್ತಿದ್ದಾರೆ ಎನ್ನುವುದು ನನಗೆ ಗೊತ್ತಾಗಲಿಲ್ಲ. ಈಗ ಹೊಸದಾಗಿ ಬೆಳಗಾಂನಲ್ಲಿ, ದಾವಣಗೆರೆಯಲ್ಲಿ ಹಾಗೂ ಗುಲ್ಬರ್ಗಾದಲ್ಲಿ ಮೆಡಿಕಲ್ ಕಾಲೇಜುಗಳನ್ನು ತೆರೆಯಲು ಅವಕಾಶ ಕೊಟ್ಟರು. ಆದರೆ ಶಿವಮೊಗ್ಗಾದಲ್ಲಿ ಅವಕಾಶ ಕೊಡದೇ ಇರಲು ಏನು ಕಾರಣ ? ಮತ್ತು ನಾಲ್ಕನೇ ಯೋಜನೆಯಲ್ಲಾದರೂ ಶಿವಮೊಗ್ಗಾ ಜಿಲ್ಲೆಯಲ್ಲಿ ಒಂದು ಮೆಡಿಕಲ್ ಕಾಲೇಜನ್ನು ತೆರೆಸುವ ಪ್ರಯತ್ನ ಇಲ್ಲವೇ ? ಈ ಬಗ್ಗೆ ಒಂದು ಆಶ್ವಾಸನೆ ಕೊಡಲು ಪ್ರಯತ್ನ ಮಾಡುತ್ತಾರೆಯೇ ? ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೇ ಇಲ್ಲಿರುವುದರಿಂದ ಅವರೇ ಉತ್ತರ ಹೇಳಬಹುದು.

ಕೊನೆಯದಾಗಿ ಪ್ರೈವೇಟು ಕಾಲೇಜುಗಳ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ಮಾತನಾಡುವಾಗ ಇವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿದರು. ಇದರ ಬಗ್ಗೆ ಒಂದು ವಿಷಯವನ್ನು ಸರಕಾರದಲ್ಲಿ ಕೇಳಬೇಕಾಗಿದೆ. ಸರಕಾರದ ಧೋರಣೆ ಏನು ಕ್ಯಾಪಿಟೇಷನ್ ಫೀ ವಸೂಲು ಮಾಡುವುದರ ಬಗ್ಗೆ ಎಂದು. ಆರೋಗ್ಯ ಸಚಿವರಿಗೆ ಎಷ್ಟು ಹಣ ಕೊಟ್ಟರೆ ಇಷ್ಟು ಸೀಟು ಕೊಡಬೇಕೆಂದು ಮಾಡಿದ್ದಾರೆ ? ಹೀಗೆ ಸೀಟುಗಳನ್ನು ಮಾರಾಟ ಮಾಡುವ ಪದ್ಧತಿಯನ್ನು ತಡೆಗಟ್ಟುವುದಕ್ಕೆ ನಿಮಗೆ ಆಗುವುದಿಲ್ಲವೆ ? ಇದರ ಬಗ್ಗೆ ಸರ್ಕಾರದ ಸ್ಪಷ್ಟ ಅಭಿಪ್ರಾಯವೇನು ?

ಶ್ರೀ ನಾಗಪ್ಪ.—ನಾನು ನನ್ನ ಭಾಷಣದಲ್ಲಿ ಮಾತಾಡುವಾಗ ತಮಗೆ ಒಂದು ವಿಚಾರ ತಿಳಿಸಿದ್ದೆ. ಅಲ್ಲದೆ ಪತ್ರ ಮುಖೇನ ಕೂಡ ತಿಳಿಸಿದ್ದೆ. ಅದು ಮುರುಕಿ ದೊಡ್ಡನ ಹಳ್ಳಿಯಲ್ಲಿರುವ

ತಾಲ್ಲೂಕಾ ಬೋರ್ಡು ಆಸ್ಪತ್ರೆಯಲ್ಲಿ ಹಲ್ಲು ರೋಗಗಳನ್ನು ದುರಸ್ತು ಮಾಡುವುದರ ಬಗ್ಗೆ ಸೂಕ್ತವಾದ ಡಾಕ್ಟರುಗಳು ಇಲ್ಲ. ಇಲ್ಲಿ ದಿನೇ ದಿನೇ ದಂತ ಚಿಕಿತ್ಸೆ ಮಾಡಿಸಿಕೊಳ್ಳಲು ಜನ ಹೆಚ್ಚಾಗಿ ಬರುತ್ತಿದ್ದಾರೆ. ಇದಕ್ಕಾಗಿ ಡಾಕ್ಟರುಗಳನ್ನು ಕಳಿಸಿ ಎಂದು ಸುಮಾರು ಒಂದೂವರೆ ವರ್ಷಗಳಿಂದಲೂ ಹೇಳುತ್ತಾ ಬರುತ್ತಿದ್ದೇನೆ. ಇಲ್ಲಿಯವರೆಗೂ ಡಾಕ್ಟರು ಬರಲಿಲ್ಲ ; ಸರ್ಕಾರದವರೇನು ಜನರ ಹಲ್ಲುಗಳನ್ನು ಪೂರ್ತಿ ಹೊಡೆದು ಹಾಕಿದ ಮೇಲೆ ಇಲ್ಲಿಗೆ ಡಾಕ್ಟರನ್ನು ಕಳುಹಿಸುತ್ತೀರಾ ಹೇಗೆ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡುವಾಗ ಹೀಗೆ ವ್ಯಂಗವಾಗಿ ಮಾತನಾಡಬಾರದು.

ಶ್ರೀ ಟಿ. ಆರ್. ಶಾಮಣ್ಣ.—ಟ್ರಾನ್ಸ್‌ಫರ್ಸ್ ಬಗ್ಗೆ ಮಾತನಾಡುವಾಗ ನಿನ್ನೆ ರೆವೆನ್ಯೂ ಮಂತ್ರಿಗಳು ಇಂಟರಪ್‌ಷನ್‌ಗಳು ಇಲ್ಲದಿದ್ದರೆ ಒಳ್ಳೆಯದು ಎಂದು ಹೇಳಿದರು. ಆದರೆ ಈಗ ಆರೋಗ್ಯ ಇಲಾಖೆಯ ಮುಖ್ಯಾಧಿಕಾರಿಗಳನ್ನು ಯಾವಾಗಲೂ ಟ್ರಾನ್ಸ್‌ಫರು ಮಾಡುವುದಕ್ಕೆ ಸಾಧ್ಯವಿಲ್ಲ ಆದರೆ ಮಂತ್ರಿಗಳು ಬಂದಾಗ ಮಾತ್ರ ಮಾಡಿಬಿಡುತ್ತಾರೆ ಎಂದರು. ಇದರಲ್ಲಿ ಯಾವುದು ಸರಿ ಎಂದು ನಾನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ನನ್ನ ಭಾಷಣದಲ್ಲಿ ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಒಬ್ಬರು ಸತ್ತರು ಎಂದು ಹೇಳಿದ್ದೆ ಅದರ ಬಗ್ಗೆ ಮಾನ್ಯ ಸಚಿವರು ಏನೂ ಹೇಳಲಿಲ್ಲ.

ಶ್ರೀ ಎ. ಮುನಿಯಪ್ಪ.—ಈಚೆಗೆ ಮಾನ್ಯ ಮಂತ್ರಿಗಳು ಹೇಳುತ್ತಾ ಒಂದು ಸಾರಿ ಈ ಸಭೆಯ ವಿರೋಧಪಕ್ಷದ ನಾಯಕರೇ ಹೇಳಿದರು ಎಂದು ಒಬ್ಬ ಡಾಕ್ಟರನ್ನು ಟ್ರಾನ್ಸ್‌ಫರು ಮಾಡಿದರು.

ಶ್ರೀ ಕೆ. ಪುಟ್ಟಸ್ವಾಮಿ.—ಅನೇಕ ಸಾರಿ ಮಂತ್ರಿಗಳಿಗೆ ಹೇಳಿದರೂ ಏನೂ ಕೆಲಸ ಮಾಡಲಿಲ್ಲ ಎಂದು ಹೇಳುತ್ತಾರೆ. ಅಲ್ಲದೆ ಹಾಗೆ ಮಾಡಿದರೆ ತಪ್ಪು ಎಂದೂ ಹೇಳುತ್ತೀರಿ, ಮಾಡದೇ ಹೋದರೆ ಏಕೆ ಮಾಡಲಿಲ್ಲ ಎಂದು ಹೇಳುತ್ತಾರೆ. ಅಧಿಕಾರಿಗಳ ಕಷ್ಟ ಸುಖಗಳನ್ನು ತಿಳಿಯದೇ ಮಾಡುತ್ತಾರೆ, ಹೀಗೆ ಮಾಡುವುದು ಸರಿಯಲ್ಲ ಎಂದು ಶಿಫಾರಸುಗಳನ್ನೂ ಮಾಡುತ್ತಾರೆ. ಇದು ಸ್ವಲ್ಪ ಸರಿಯಾಗಿಲ್ಲ ಇದನ್ನು ತಿದ್ದುಪಡಿ ಮಾಡಿ ಎಂದೂ ಹೇಳುತ್ತಾರೆ; ಯಾವಾಗಲೂ ಒಬ್ಬರನ್ನು ವರ್ಗ ಮಾಡಬೇಕಾದರೆ ಎರಡು ವರ್ಷಗಳು ಒಂದು ಕಡೆಯಲ್ಲಿದ್ದು ಕೆಲಸ ಮಾಡಿದ ಮೇಲೆ ಮಾಡಬೇಕು, ಇಲ್ಲವೇ ಮೂರು ವರ್ಷಗಳಾದ ಮೇಲೆ ವರ್ಗ ಮಾಡಬೇಕೆಂದು ಇದೆ, ಇದನ್ನು ಕೆಲವು ಸಾರಿ ಸಾಮಾನ್ಯವಾಗಿ ಮಾಡುತ್ತೇವೆ, ಇದನ್ನೇ ಸರಿಯೆಂದು ನಾನು ಹೇಳುತ್ತಿಲ್ಲ. ಇದಕ್ಕೆಲ್ಲಾ ಒಂದು ನಿಯಮ ಮಾಡಿರುವುದರಿಂದ ಅದಕ್ಕೆ ಅನುಸಾರವಾಗಿ ಸುಮಾರು ಮೂರು ವರ್ಷಗಳ ಮೇಲೆಯೇ ಒಬ್ಬರನ್ನು ವರ್ಗ ಮಾಡುತ್ತಾರೆ. ಮೂರು ವರ್ಷಗಳಾದ ಮೇಲೆ ವರ್ಗ ಮಾಡುವುದು ಸರಿಯೆಂದು ತೋರುತ್ತದೆ.

ಎರಡನೆಯದು ಶ್ರೀಮಾನ್ ಗೋಪಾಲಗೌಡರು ಕೆಲವು ವಿಚಾರಗಳನ್ನು ಇಲ್ಲಿ ಹೇಳಿ ವಿವರಗಳನ್ನು ಕೇಳಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೇ ವಿವರಗಳನ್ನು ಕೊಡಬೇಕೆಂದು ಅವರು ಅಪೇಕ್ಷಿಸಿರುವುದರಿಂದ ಅವರೇ ಇದರ ಬಗ್ಗೆ ಇಲ್ಲಿ ಹೇಳುತ್ತಾರೆ.

7-30 P.M.

ಹಿಂದೆ ಇದ್ದ ಸರ್ಕಾರದವರು ಆಯುರ್ವೇದ ಶಿಕ್ಷಣದ ಬಗ್ಗೆ ಡಿಗ್ರಿ ಕೋರ್ಸನ್ನು ತೆರೆಯುವುದಾಗಿ ಹೇಳಿದ್ದರು. ಈಗ ಇರತಕ್ಕ ಸರ್ಕಾರದವರು ಅದನ್ನು ಬದಲಾವಣೆ ಮಾಡಿದ್ದಾರೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಹೌದ, ನಾವು ಅದನ್ನು ಬದಲಾವಣೆ ಮಾಡುತ್ತೇವೆಂದು ಹೇಳಿದ್ದುಂಟು. ಹಿಂದಿನವರು ಹಾಗೆ ಹೇಳಿರಬಹುದು. ಹಿಂದೆ ಇದ್ದ ಸರ್ಕಾರದವರು ಈ ವಿಚಾರದಲ್ಲಿ ಒಂದು ಎಗ್ಸಿಕ್ಯುಟಿವ್ ಆರ್ಡರನ್ನು ಹೊರಡಿಸಿ ಅದರ ಮೂಲಕ ಡಿಗ್ರಿ ಕೋರ್ಸಿಗೆ ಇಲ್ಲಿ ಒಂದು ಮಾನ್ಯತೆ ಕೊಡುವಂತೆ ಮಾಡಿದ್ದರು. ಆ ಡಿಗ್ರಿಗೆ ನಮ್ಮ ರಾಜ್ಯದಲ್ಲಿ ಮಾತ್ರ ಮಾನ್ಯತೆ ಇತ್ತೇ ವಿನಾ ಬೇರೆ ರಾಜ್ಯಗಳಲ್ಲಿ ಅದಕ್ಕೆ ಮಾನ್ಯತೆ ಇರಲಿಲ್ಲ. ಅದಕ್ಕೆ ಕಾರಣ ಬಹುಕಾಲದಿಂದಲೂ ಈ ಆಯುರ್ವೇದ ಬಾಬು ಬೆಳೆಯದೆ ಹಾಗೇ ನಿಂತುಬಂದಿದೆ. ನಮ್ಮ ನಮ್ಮ ಮನೆಗಳ ಹಿತ್ತಲಿನಲ್ಲಿರತಕ್ಕ ಅನೇಕ ಗಿಡಮೂಲಿಕೆಗಳನ್ನು ನಾವು ಈ ದಿವಸ ಉಪಯೋಗಿಸಿದ್ದೇ ಆದರೆ ನಾವು ಅನೇಕ ರೋಗಾದಿಗಳನ್ನು ಗುಣಪಡಿಸಿಕೊಳ್ಳಬಹುದು. ಆದರೆ ಇದನ್ನು ಹಾಗೆ ಒಂದು ಸ್ಟಾಂಡರ್ಡಿಗೆ ತರಬೇಕಾಗಿದ್ದರೆ ಇದನ್ನು ಸರ್ಕಾರದ ಮಟ್ಟದಲ್ಲೇ ಮಾಡಬೇಕಾಗುವುದು. ಇಲ್ಲವಾದರೆ ಇದು ಆ ಮಟ್ಟವನ್ನು ಮುಟ್ಟಲಾರದು. ನಾವು ಈ ದಿವಸ ಆಯುರ್ವೇದದಲ್ಲಿ ಡಿಗ್ರಿ ಕೋರ್ಸನ್ನು ಪ್ರಾರಂಭಮಾಡ

(ಶ್ರೀ ಕೆ. ಪುಟ್ಟಸ್ವಾಮಿ)

ಬೇಕಾಗಿದ್ದರೆ ಅದಕ್ಕೆ ವಿಶ್ವವಿದ್ಯಾನಿಲಯದವರ ಅನುಮತಿ ಬೇಕು. ಅವರು ಹೇಳುತ್ತಾರೆ, ಇದರ ಬಗ್ಗೆ ಡಿಗ್ರಿ ಕೋರ್ಸನ್ನು ಪ್ರಾರಂಭಿಸಬೇಕಾಗಿದ್ದರೆ ವಿದ್ಯಾರ್ಥಿಗಳಿಗೆ ಇದರ ಪರಿಚಯವನ್ನು ಪ್ರೀಯೂನಿವರ್ಸಿಟಿ ತರಗತಿಗಳಿಂದಲೇ ಪ್ರಾರಂಭವಾಗಬೇಕು, ಹಾಗೆ ಮಾಡಿದರೆ ಮಾತ್ರ ನಾವು ಡಿಗ್ರಿ ಕೋರ್ಸಿಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳುತ್ತಿದ್ದಾರೆ. ನಾವು ಈಗ ಡಿಪ್ಲೊಮಾ ತರಗತಿಗಳಿಗೆ ಬರತಕ್ಕವರಿಗೆಲ್ಲಾ ಎಸ್. ಎಸ್. ಎಲ್. ಸಿ. ತರಗತಿಯಿಂದಲೇ ಇದನ್ನು ಪ್ರಾರಂಭಿಸುತ್ತಿದ್ದೇವೆ. ಆದುದರಿಂದಲೇ ಅವರಿಗೆ ಈ ದಿವಸ ಆ ಡಿಪ್ಲೊಮಾಕ್ಕೆ ಸೇರಲು ಅವಕಾಶವಾಗಿದೆ. ಹಾಗೆ ಈ ವೈದ್ಯಬಾಬಿನಲ್ಲೂ ಡಿಪ್ಲೊಮಾ ಪಡೆದವರನ್ನು ಕಂಡೆನ್ಸ್ಡ್ ಎಂ. ಬಿ. ಬಿ. ಎಸ್. ಕೋರ್ಸಿಗೆ ಕಳುಹಿಸಲು ಅನುಕೂಲವಾಗುತ್ತದೆ. ಹೀಗೆ ಮಾಡಬೇಕೆಂದು ನಾವೀಗ ತೀರ್ಮಾನ ಮಾಡಿಕೊಂಡಿದ್ದೇವೆ. ಹೀಗೆ ಈ ದಿವಸ ಯಾರು ಯಾರು ಈ ಆಯುರ್ವೇದ ಡಿಪ್ಲೊಮಾ ಕೋರ್ಸಿಗೆ ಕುಳಿತು ಅಲ್ಲಿ 4 ವರ್ಷಗಳ ಕಾಲ ಅಭ್ಯಾಸಮಾಡಿ ಅದನ್ನು ಮುಗಿಸಿದ್ದಾರೋ ಅಂಥವರನ್ನು ಯೂನಿವರ್ಸಿಟಿಯಲ್ಲಿ ಒಂದು ಸಂಕ್ಷಿಪ್ತ ಆಯುರ್ವೇದದ ಡಿಗ್ರಿ ಕೋರ್ಸನ್ನು ಕೊಡೋಣ ಎಂಬುದಾಗಿ ಸರ್ಕಾರ ಆಸೆಯನ್ನಿಟ್ಟುಕೊಂಡಿದೆ. ಅಷ್ಟೇವಿನಾ ನಾವು ಈ ವಿಚಾರದಲ್ಲಿ ಯಾವ ಅಂಥಾ ಮೂಲಭೂತವಾದ ಬದಲಾಣೆಗಳನ್ನೂ ಮಾಡಿರುವುದಿಲ್ಲ. ಇದರ ಎಲ್ಲ ವ್ಯವಸ್ಥೆಗಳನ್ನೂ ವಿಶ್ವವಿದ್ಯಾನಿಲಯದವರ ಅನುಮತಿ ಪ್ರಕಾರವೇ ಮಾಡೋಣ ಎಂಬುದು ನನ್ನ ಆಸೆ. ಇದಕ್ಕೆ ಎಲ್ಲರ ಬೆಂಬಲವು ಇದೆಯೆಂದು ನಾನು ನಂಬಿದ್ದೇನೆ.

ಇನ್ನು ಒಬ್ಬ ಮಾನ್ಯ ಸದಸ್ಯರು ಹಲ್ಲುಗಳು ಏಕೋ ವಿನಾಕಾರಣ ಸವೆದು ಹೋಗುತ್ತಿವೆ ಎಂದು ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ನಾನೇ ಹೇಳಿದ್ದು. ಅಲ್ಲಿಯ ನೀರಿನ ದೋಷದಿಂದ ಹಾಗೆ ಆಗುತ್ತಿರಬಹುದು, ಅದನ್ನು ಪರೀಕ್ಷೆಮಾಡಿಸಿ ಎಂಬುದಾಗಿ ಹೇಳಿದೆನು.

ಶ್ರೀ ಕೆ. ಪುಟ್ಟಸ್ವಾಮಿ.—ಆ ಮಾನ್ಯ ಸದಸ್ಯರು ನೀರಿನಿಂದಲೇ ಹಾಗೆ ಆಗುತ್ತಿದೆ ಎಂಬ ಭಾವನೆಯನ್ನಿಟ್ಟುಕೊಂಡಿರಬಹುದು. ಅದನ್ನೂ ಕೂಡ ಪರಿಶೀಲನೆ ಮಾಡಿಸಿ ನೋಡುತ್ತೇನೆ. ಆದರೆ ಅವರು ಹೇಳಿದ್ದು, ಅಲ್ಲಿ ಅವರ ಹಲ್ಲುಗಳು ಸವೆಯುತ್ತಿರುವುದು ಇಲ್ಲಿ ನಮ್ಮ ಆಡಳಿತ ದಕ್ಷತೆ ಎಷ್ಟಿದೆ ಎಂಬುದನ್ನು ತೋರಿಸುತ್ತಿದೆ ಎಂದು ಹೇಳಿದರು. ನಮ್ಮ ಆಡಳಿತ ದಕ್ಷತೆ ಸರಿಯಾಗಿದೆ ಎಂಬುದನ್ನು ಅವರಿಗೆ ತೋರಿಸಿ ಅವರನ್ನು ಒಪ್ಪಿಸುವುದಕ್ಕೆ ಸಾಧ್ಯ ಇದೆಯೋ ಇಲ್ಲವೋ ಆ ಮಾತು ಹಾಗಿರಲಿ. ಆದರೆ ಅವರಿಗೆ ನಾನು ಇಷ್ಟನ್ನೇ ಹೇಳಬಯಸುತ್ತೇನೆ: ಅಲ್ಲಿ ಜನರ ಹಲ್ಲು ಸವೆಯುತ್ತಿರುವುದಕ್ಕೂ, ಇಲ್ಲಿ ನಡೆಸುತ್ತಿರುವ ಆಡಳಿತಕ್ಕೂ ಯಾವ ಸಂಬಂಧವೂ ಇಲ್ಲ. ಇಲ್ಲಿ ನಾವು ಈ ದಿವಸ ನಮ್ಮ ಶಕ್ತಿ ಮೀರಿ ದಕ್ಷತೆಯಿಂದ ಆಡಳಿತ ನಡೆಸುತ್ತಿದ್ದೇವೆ ಎಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಶ್ರೀಮಾನ್ ಗೋಪಾಲಗೌಡರವರು ಶಿವಮೊಗ್ಗದಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಸರ್ಕಾರದವರು ಮಾಡುತ್ತಾರೋ ಇಲ್ಲವೋ ಎಂದು ಪದೇ ಪದೇ ಅವರು ಒತ್ತಾಯ ಮಾಡುತ್ತಿದ್ದಾರೆ. ಅವರಿಗೆ ನಾನು ಈಗ ಇಷ್ಟು ಹೇಳುತ್ತೇನೆ. ರಾಜ್ಯದಲ್ಲಿ ಈಗಾಗಲೇ ಸರ್ಕಾರಿ ಮತ್ತು ಖಾಸಗೀ ಎರಡರಿಂದಲೂ 8 ಮೆಡಿಕಲ್ ಕಾಲೇಜುಗಳು ಕೆಲಸಮಾಡುತ್ತಿವೆ. ಇನ್ನು ಮುಂದೆ ಯಾರಿಗೂ ಯಾವ ಊರಿಗೂ ಮೆಡಿಕಲ್ ಕಾಲೇಜುಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ನಾನು ಅವರಿಗೆ ಸ್ಪಷ್ಟವಾಗಿ ಹೇಳುತ್ತೇನೆ.........

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ದಿವಸ ಸರ್ಕಾರದವರು ಕಂಡೆನ್ಸ್ಡ್ ಮೆಡಿಕಲ್ ಕೋರ್ಸಿಗೆ ಕಳುಹಿಸುತ್ತಿರುವವರಿಗೆ, ಸಂಬಳ ಅಥವಾ ಅಲೋಯೆನ್ಸ್ ಇತ್ಯಾದಿಗಳೇನನ್ನೂ ಕೊಡುತ್ತಿಲ್ಲ. ಅಲ್ಲಿಗೆ ಅಭ್ಯಾಸ ಮಾಡಲು ಬರತಕ್ಕವರಿಗೆ ಹೆಂಡತಿ ಮಕ್ಕಳು ಎಲ್ಲರೂ ಇರುತ್ತಾರೆ. ಅವರು ಫೀಜನ್ನು ಬೇರೆ ಕೊಡಬೇಕಾಗಿದೆ. ಇದುವರೆಗೂ ಸರ್ಕಾರದವರು ಯಾರನ್ನೇ ಅಭ್ಯಾಸ ಮಾಡಲು ಡೆಪ್ಯುಟೇಷನ್ ಮೇಲೆ ಕಳುಹಿಸಿದರೆ ಅವರಿಗೆ ಡೆಪ್ಯುಟೇಷನ್ ಅಲೋಯೆನ್ಸ್ ಎಂತ ಕೊಡುತ್ತಿದ್ದರು. ಪ್ರೈಮರಿ ಸ್ಕೂಲ್ ಉಪಾಧ್ಯಾಯರುಗಳನ್ನು ಟಿ. ಸಿ. ಎಚ್. ಟ್ರೈನಿಂಗಿಗೆ ಕಳುಹಿಸಿದರೂ ಅವರಿಗೆ ಅವರ ಸಂಬಳ, ಅಲೋಯೆನ್ಸ್ ಇತ್ಯಾದಿಗಳನ್ನೆಲ್ಲಾ ಕೊಡಲಾಗುತ್ತಿದೆ. ಆದರೆ ಎಂ. ಬಿ. ಬಿ. ಎಸ್. ಪದವಿಯನ್ನು ಪಡೆದು ಮುಂದೆ ಡಾಕ್ಟರಾಗಿ ಬರತಕ್ಕವರಿಗೆ ಏನೂ ಕೊಡುವುದಿಲ್ಲ ಎನ್ನುವುದು

ಸರಿಯೇ? ಹೀಗೆ ಮಾಡಿದರೆ ಅವರ ಸಂಸಾರದ ಗತಿಯೇನು? ಅವರಿಗೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಲಾಗುತ್ತದೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರ ಸಹಾನುಭೂತಿಯ ಬಗ್ಗೆ ನನಗೆ ಬಹಳ ಅನುಕಂಪವಿದೆ. ಅವರಿಗೆಷ್ಟು ತೊಂದರೆ ಇದೆಯೆಂಬುದನ್ನು ಒಂದು ದೇಶದ ಆಡಳಿತ ಜವಾಬ್ದಾರಿಯನ್ನು ಹೊತ್ತಿರತಕ್ಕವರಿಗೆ ಹೆಚ್ಚಿಗೆ ಹೇಳಬೇಕಾದ್ದೇನೂ ಇಲ್ಲ. ಎಂ. ಬಿ. ಬಿ. ಎಸ್. ಕಂಡೆನ್ಸ್ಡ್ ಡಿಗ್ರೀ ಕೋರ್ಸನ್ನು ಪಡೆಯುವುದಕ್ಕಾಗಿ ಅವರನ್ನು ಸರ್ಕಾರದವರೇನೂ ಡೆಪ್ಯೂಟ್‌ಮಾಡಿಲ್ಲ. ಈ ಹಿಂದೆ ಇದಕ್ಕೆ ಯಾರನ್ನು ಚುನಾಯಿಸಲಾಗುತ್ತಿತ್ತೋ ಅವರೆಲ್ಲರೂ ಅವರ ಸೀನಿಯಾರಿಟಿಯನ್ನೂ ಕೂಡ ಕಳೆದುಕೊಂಡು ಇದನ್ನು ಅಭ್ಯಾಸ ಮಾಡುವುದಕ್ಕೆ ಹೋಗುತ್ತಿದ್ದರು. ನಾವಾದರೋ ಈ ದಿವಸ ಅವರಿಗೆ ಅವರ ಸೀನಿಯಾರಿಟಿ ಹೋಗದಂತೆ ಒಂದು ಅನುಕೂಲವನ್ನು ಮಾಡಿಕೊಟ್ಟಿದ್ದೇವೆ. ಹಿಂದೆ ಈ ಅಭ್ಯಾಸಕ್ಕೆ ಹೋದವರೆಲ್ಲಾ ತಮ್ಮ ಸೀನಿಯಾರಿಟಿಯನ್ನು ಕಳೆದುಕೊಂಡು ಅವರ ಜೂನಿಯರ್ಸ್ ಈಗ ಸೀನಿಯರ್ಸ್ ಆಗಿದ್ದಾರೆ. ಈಗ ನಾವು 60 ಜನ ಡಾಕ್ಟರನ್ನು ಕಳುಹಿಸಿದ್ದೇವೆ. ಅದರಿಂದ 60 ಆಸ್ಪತ್ರೆಗಳಲ್ಲಿ ಡಾಕ್ಟರಿಲ್ಲದಂತಾಗಿದೆ. ಆ ಒಂದು ತೊಂದರೆ ಸಹಾ ಉಂಟಾಗಿದೆ. ಅವರು ಅಲ್ಲಿ 3 ವರ್ಷಗಳ ಕಾಲ ಅಭ್ಯಾಸ ಮಾಡಬೇಕಾಗಿದೆ. ಅವರು ಅದನ್ನು ಮುಗಿಸಿಕೊಂಡು ಬಂದ ಕೂಡಲೇ ಅವರು ಹಿಂದೆ ಸಂಬಳ ಭತ್ತೆ ಎಲ್ಲಾ ಸೇರಿ 300 ರೂಪಾಯಿಗಳನ್ನು ಪಡೆಯುತ್ತಿದ್ದ ಕಡೆ ನಾವು ಇನ್ನು ಮುಂದೆ ಅವರಿಗೆಲ್ಲಾ ರಾಜ್ಯದ ಬೊಕ್ಕಸದಿಂದ 450 ರೂಪಾಯಿಗಳ ಸಂಬಳ ಕೊಡಬೇಕಾಗುತ್ತದೆ. ಅದನ್ನು ಕೊಡುವುದಕ್ಕೆ ಎಷ್ಟರ ಮಟ್ಟಿಗೆ ಸಾಧ್ಯ ಎಂಬುದನ್ನು ತಾವೆಲ್ಲರೂ ಆಲೋಚನೆ ಮಾಡಬೇಕಾದ ವಿಷಯ ಇದು. ಆದರೆ ನಾನು ಇಷ್ಟೆಲ್ಲವನ್ನು ಹೇಳಿದರೂ ಅವರ ಜೀವನದ ಪ್ರಶ್ನೆ ಏನೆಂಬುದು ಹಾಗೇ ಉಳಿದಿದೆ. ಮಾನ್ಯ ಸದಸ್ಯರು ಹಿಂದೆ ಯಾರನ್ನು ಡೆಪ್ಯುಟೇಷನ್ ಮೇಲೆ ಕಳುಹಿಸಲಾಗುತ್ತಿತ್ತೋ ಅವರಿಗೆಲ್ಲಾ ಸಂಬಳವನ್ನು ಕೊಡಲಾಗುತ್ತಿತ್ತು. ಇಲ್ಲವೇ ಅವರಿಗೇನೇನು ಸೌಲಭ್ಯಗಳನ್ನು ಒದಗಿಸಲಾಗಿತ್ತೋ ಆ ಸೌಲಭ್ಯಗಳನ್ನು ಇವರಿಗೂ ಒದಗಿಸಬೇಕೆಂದು ಕೇಳಿದ್ದಾರೆ. ಯಾವಾಗಲೂ ಮಹಿಳಾ ಸದಸ್ಯರ ಗಮನ ಸಂಸಾರದ ಕಡೆಗೆ ಓಡುತ್ತದೆಯೇ ವಿನಾ ಅದು ಸಂಪಾದನೆಯ ಕಡೆಗೆ ಓಡುವುದಿಲ್ಲ. ಆದರೂ ಈ ವಿಚಾರದಲ್ಲಿ ಸರ್ಕಾರದವರಿಗೆ ಅನುಕೂಲ ಮಾಡಿಕೊಡಲು ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

MR. SPEAKER.—Now I will put the question to the vote of the House. The question is:

> "That a sum not exceeding Rs. 11,36,91,000 be granted to the Government to defray the charges which will come in course of payment during the financial year for the period ending 31st March 1968 in respect of Medical and Public Health."

The motion was adopted.

ELECTION OF MEMBERS TO THE SENATE OF THE MYSORE UNIVERSITY

(Results)

MR. SPEAKER.—Now I have to announce the election results. At the election held to the Senate of the Mysore University on 6th July 1967, the following members are declared elected to the Senate:

1 Sri B. Vithaldas Shetty.
2 Sri K. M. Thammaiah.
3 Sri Nagappa.
4 Sri Kondajji Basappa.
5 Sri G. T. Govinda Reddy.
6 Sri T. R. Shamanna.